ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫೪

**ಪಟ್ಟಿ – ೧೮**

# ಕರ್ನಾಟಕ ವಿಧಾನ ಪರಿಷತ್ತು

ನೂರ ಇಪ್ಪತ್ತೇಳನೇ ಅಧಿವೇಶನ
ಮುಂದುವರೆದ ಉಪವೇಶನ

**ಗುರುವಾರ, ದಿನಾಂಕ : ೨೬ನೇ ಮಾರ್ಚ್, ೨೦೧೫**

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು

೩. ಗೃಹ ಸಚಿವರು

೪. ನಗರಾಭಿವೃದ್ಧಿ ಸಚಿವರು

---

F-1 B/B

## ಶಾಸನ ಸಭಾ ಸದಸ್ಯರಿಗೆ ದೇವಸ್ಥಾನದ ಅಭಿವೃದ್ಧಿಗಾಗಿ ಅನುದಾನ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೪೪ (೧೩೨೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸದಸ್ಯರಿಗೆ ವಿಧಾನಸಭಾ ಕ್ಷೇತ್ರವಾರು ದೇವಸ್ಥಾನದ ಅಭಿವೃದ್ಧಿಗಾಗಿ ಆಯಾ ಸಾಲಿಗೆ ಅನುಗುಣವಾಗಿ ಅನುದಾನ ಒದಗಿಸುತ್ತಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ವಿಧಾನ ಪರಿಷತ್ ಸದಸ್ಯರಿಗೂ ಪ್ರತ್ಯೇಕ ಅನುದಾನ ಒದಗಿಸಲು ಯೋಜನೆಯಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆಯೇ ;

(ಇ) ಪ್ರತಿ ವಿಧಾನಸಭಾ ಸದಸ್ಯರಿಗೆ ಹಾಲಿ ಒದಗಿಸಲಾಗುತ್ತಿರುವ ಅನುದಾನದ ಮೊತ್ತವೆಷ್ಟು ; (ವಿವರಗಳನ್ನು ಒದಗಿಸುವುದು)

(ಈ) ವಿಧಾನ ಪರಿಷತ್ ಸದಸ್ಯರಿಗೆ ಈ ರೀತಿಯ ಅನುಕೂಲತೆಯ ಸೌಲಭ್ಯವನ್ನು ಒದಗಿಸಲಾಗದಿದ್ದ ಪಕ್ಷದಲ್ಲಿ ಅದಕ್ಕಿರುವ ಕಾನೂನಾತ್ಮಕ ತೊಡಕುಗಳು ಮತ್ತು ಅನಿವಾರ್ಯತೆಯ ಮಾಹಿತಿಯ ವಿವರಗಳನ್ನು ಒದಗಿಸುವುದು ?

# ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳ ವಿವರ

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನ ಸಭೆಯಿಂದ ಚುನಾಯಿತರಾದವರು) :–**

೨೨೪೫ (೧೩೨೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ದೇವಸ್ಥಾನಗಳೆಂದು ಪರಿಗಣಿಸಲ್ಪಟ್ಟಿರುವ ಒಟ್ಟು ದೇವಸ್ಥಾನಗಳ ಸಂಖ್ಯೆ ಎಷ್ಟು ; (ಸ್ವಂತ ಆದಾಯದ ಮೇಲೆ ಕಾರ್ಯನಿರ್ವಹಿಸುತ್ತಿರುವ ದೇವಸ್ಥಾನಗಳ ವಿವರಗಳನ್ನು ಒದಗಿಸುವುದು)

(ಆ) ಸ್ಥಳೀಯವಾಗಿ ದೇವಸ್ಥಾನಗಳ ಬೇಡಿಕೆ ಮತ್ತು ಅವಶ್ಯಕತೆಗಳನ್ನು ಪೂರೈಸಿಯೂ ಹೆಚ್ಚುವರಿ ಆದಾಯವನ್ನು ಹೊಂದಿರುವ ದೇವಸ್ಥಾನಗಳ ಭಕ್ತಾಧಿಗಳಿಂದ ಸಂಗ್ರಹವಾಗಿರುವ (ಕಾಣಿಕೆ–ಹುಂಡಿ) ಈ ಹಣವನ್ನು ಯಾವ ರೀತಿಯಲ್ಲಿ ಬಳಕೆ ಮಾಡಿಕೊಳ್ಳಲಾಗುವುದು ; (ವಿವರಗಳನ್ನು ಒದಗಿಸುವುದು)

(ಇ) ಸ್ಥಳೀಯವಾಗಿ ಸಂಗ್ರಹವಾಗಿರುವ ಹಣಕಾಸಿನ ಅನುಕೂಲತೆಯನ್ನು ಬಳಸಿಕೊಂಡು ಬರುವ ಭಕ್ತಾಧಿಗಳಿಗೆ ಮತ್ತು ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳ ಅನುಕೂಲತೆ ಒದಗಿಸುವ ಹಿನ್ನೆಲೆಯಲ್ಲಿ ಸ್ಥಳೀಯ ಆಡಳಿತ ಮಂಡಳಿಯಿಂದ ಅನುಮೋದನೆಗೊಂಡು ಸರ್ಕಾರದ ಒಪ್ಪಿಗೆಗಾಗಿ ಕಾದಿರುವ ದೇವಸ್ಥಾನಗಳ ಬೇಡಿಕೆ

ಪಟ್ಟಿಯನ್ನು ಒದಗಿಸುವುದು ಹಾಗೂ ಎಷ್ಟು ಸಮಯದಿಂದ ಸರ್ಕಾರದ ಒಪ್ಪಿಗೆಗಾಗಿ ಕಾಯಲಾಗುತ್ತಿದೆ ; (ಈ ರೀತಿಯ ಎಲ್ಲಾ ದೇವಸ್ಥಾನಗಳ ವಿವರಗಳನ್ನು ಒದಗಿಸುವುದು)

(ಈ) ಸರ್ಕಾರ ಅಥವಾ ಸಂಬಂಧಿಸಿದ ಇಲಾಖೆ ಈ ರೀತಿಯ ಬೇಡಿಕೆಗಳಿಗೆ ಸಕಾಲದಲ್ಲಿ ಸಕಾರಾತ್ಮಕವಾಗಿ ಸ್ಪಂದಿಸಲು ಸಾಧ್ಯವಾಗದಿರಲು ಮುಖ್ಯ ಕಾರಣವೇನು ಹಾಗೂ ಇಲಾಖೆಗೆ ಈಗಿರುವ ಕಾನೂನಾತ್ಮಕ ತೊಡಕುಗಳೇನು ಹಾಗೂ ಬಾಕಿ ಇರುವ ಬೇಡಿಕೆಯ ಪ್ರಸ್ಥಾವನೆಗಳನ್ನು ಕಾಲಮಿತಿಗೆ ಒಳಪಟ್ಟು ಆಡಳಿತಾತ್ಮಕ ಒಪ್ಪಿಗೆ ನೀಡಲು ಮುಂದಿನ ದಿನಗಳಲ್ಲಿ ಇಲಾಖೆ ಕೈಗೊಳ್ಳಲಿರುವ ಕಾನೂನಾತ್ಮಕ ಕ್ರಮಗಳೇನು ? (ವಿವರಗಳನ್ನು ಒದಗಿಸುವುದು)

## ಬೆಂಗಳೂರು ಮಹಾನಗರ ಪಾಲಿಕೆ ವಿಸ್ತೀರ್ಣ/ಜನಸಂಖ್ಯೆ ಮತ್ತು ಆಡಳಿತಾತ್ಮಕ ನಿರ್ವಹಣೆಗೆ ಪಾಲಿಕೆ ವಿಭಜನೆ ಕುರಿತು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೨೪೬ (೨೫೬೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಜನಸಂಖ್ಯೆ ಎಷ್ಟು ; ಆಡಳಿತಾತ್ಮಕ ನಿರ್ವಹಣೆಗೆ ತೊಂದರೆಯಾಗಿರುವ ಕಾರಣ ಸದರಿ ಮಹಾನಗರ ಪಾಲಿಕೆಯನ್ನು ವಿಭಜಿಸಲು ಸರ್ಕಾರ ಸಿದ್ಧವಿದೆಯೇ ; ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳೇನು ; (ವಿವರ ಒದಗಿಸುವುದು)

(ಆ) ವಿಭಜನೆಯ ಸ್ವರೂಪ ಸಾಧಕ-ಬಾಧಕಗಳು ಯಾವುವು ; ಯಾವ ಯಾವ ವಲಯಗಳನ್ನು ವಿಂಗಡನೆ ಮಾಡಿ ವಿಭಜಿಸಲಾಗುವುದು, ಇದು ಯಾವಾಗಿನಿಂದ ಜಾರಿಗೆ ಬರುತ್ತದೆ ;

(ಇ) ಈ ನಿರ್ಧಾರಕ್ಕೆ ಸಾರ್ವಜನಿಕರ ಪುರಪ್ರಮುಖರ ಅಭಿಪ್ರಾಯ ಸಂಗ್ರಹಿಸಲಾಗಿದೆಯೇ; ಎಲ್ಲರೂ ವಿಭಜನೆಗೆ ಒಪ್ಪಿರುವರೇ ;

(ಈ) ಪಾಲಿಕೆ ವಿಭಜನೆಯಿಂದ ಆಡಳಿತ ಸುಸೂತ್ರವಾಗಿ ಸಾಗುವುದೆಂದು ಬಹುದೂರ ಅಂತರವನ್ನು ಕಡಿಮೆಗೊಳಿಸಲು ಇದರಿಂದ ಸಾಧ್ಯವೆಂದು ಸರ್ಕಾರ ಭಾವಿಸುವುದೇ ;

(ಉ) ಅದೇ ರೀತಿ ಪಾಲಿಕೆಯ ಮಹಾಪೌರರನ್ನು ನೇರವಾಗಿ ಚುನಾಯಿಸುವ ಬಗ್ಗೆ ಸರ್ಕಾರದ ನಿಲುವೇನು ; ಪಾಲಿಕೆ ವಿಭಜನೆಯಿಂದ ಎರಡು ಪಾಲಿಕೆ ಕೇಂದ್ರ ಕಛೇರಿಗಳೀಗೆ ಇಬ್ಬರು ಮಹಾಪೌರರು ಸೃಷ್ಟಿಯಾದಂತಾಗುವುದಿಲ್ಲವೇ ; ಇದಕ್ಕಾಗಿ ನಗರ ಸುತ್ತಲಿನ ಗ್ರಾಮಾಂತರದ ಕೆಲ ಪ್ರದೇಶಗಳನ್ನು ಪುನಃ ನಗರ ವ್ಯಾಪ್ತಿಗೆ ತರುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ? (ವಿವರಗಳನ್ನು ಒದಗಿಸುವುದು)

## ಕಾರ್ಖಾನೆ ಸ್ಥಾಪನೆ ಅನುಮತಿ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೨೪೭ (೧೩೯೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗಡಿ ನಿಪ್ಪಾಣಿ ಬಳಿ ಕಾರ್ಖಾನೆಗಳನ್ನು ಸ್ಥಾಪಿಸಲು ಮಹಾರಾಷ್ಟ್ರದ ಉದ್ಯಮಿಗಳ ನಿಯೋಗ ೧೨೦೦ ಎಕರೆ ಜಮೀನು ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದು ನಿಜವೆ ; ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು ;

(ಆ) ಇದರಿಂದ ಈ ಭಾಗದ ನಿರುದ್ಯೋಗಿಗಳಿಗೆ ಉದ್ಯೋಗ ದೊರಕುವ ಸಾಧ್ಯತೆ ಇದೆಯೇ ; ಅಂಕಿ ಅಂಶಗಳ ಸಮೇತ ವಿವರ ನೀಡುವುದು ;

(ಇ) ಈ ಪ್ರಸ್ತಾವನೆಯನ್ನು ಅನುಮೋದಿಸಲು ಎಷ್ಟು ಸಮಯ ಬೇಕಾಗುವುದು ? (ಈ ಕಾರ್ಖಾನೆಯ ಸ್ವರೂಪ, ಕಾರ್ಯ ಮತ್ತು ಇದರಿಂದಾಗುವ ಪ್ರಯೋಜನದ ವಿವರ ನೀಡುವುದು)

## ಕೆರೆಗಳಿಗೆ ಚರಂಡಿ ನೀರು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೨೪೮ (೧೩೯೫) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ಎಷ್ಟು ಕೆರೆಗಳಿಗೆ ಒಳಚರಂಡಿ ನೀರು ಸೇರ್ಪಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ ; (ವಿವರ ನೀಡುವುದು)

(ಆ) ಬಿ.ಬಿ.ಎಂ.ಪಿ.ರವರು ಇದನ್ನು ತಡೆಯಲು ಯಾವ ಕ್ರಮ ಕೈಗೊಂಡಿದ್ದಾರೆ ;

(ಇ) ಬೆಂಗಳೂರು ನಗರದ ಕೆರೆಗಳಿಗೆ ಚರಂಸಿ ನೀರು ಸೇರ್ಪಡೆ ಗಂಭೀರ ವಿಷಯವಾಗಿರುವುದರಿಂದ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಈ) ಬೆಂಗಳೂರು ನಗರದ ಎಷ್ಟು ಕೆರೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ ;

(ಉ) ಇಂತಹ ಪ್ರಕರಣಗಳಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಬೆಂಗಳೂರು ನಗರ ವ್ಯಾಪ್ತಿಯ ರಾಜಕಾಲುವೆಗಳು

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೨೪೯ (೨೭೨೭) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರ ವ್ಯಾಪ್ತಿಯಲ್ಲಿರುವ ರಾಜಕಾಲುವೆಗಳ ಸಂಖ್ಯೆ ವಿವರಗಳನ್ನು ವಿಧಾನಸಭಾ ಕ್ಷೇತ್ರವಾರು ಪಾಲಿಕೆ ವಾರ್ಡ್‌ವಾರು ಪೂರ್ಣ ಮಾಹಿತಿ ನೀಡುವುದು ;

(ಆ) ಸದರಿ ರಾಜಕಾಲುವೆಗಳು ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಒತ್ತುವರಿ ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; ಎಷ್ಟು ರಾಜಕಾಲುವೆಗಳನ್ನು ಯಾವ ಪ್ರಮಾಣದಲ್ಲಿ ಒತ್ತುವರಿ ಮಾಡಿಕೊಳ್ಳಲಾಗಿದೆ ; (ವಿಧಾನಸಭಾ ಕ್ಷೇತ್ರವಾರು, ವಿವರ ನೀಡಿರಿ, ಒತ್ತುವರಿ ಮಾಡಿಕೊಂಡಿರುವವರು ಯಾರ‍್ಯಾರು ಮಾಹಿತಿ ಒದಗಿಸಿ)

(ಇ) ಕಳೆದ ಎರಡು ವರ್ಷಗಳಿಂದೀಚೆಗೆ ಎಷ್ಟು ಒತ್ತುವರಿಯಾದಂತಹ ರಾಜಕಾಲುವೆಗಳನ್ನು ವಶಪಡಿಸಿಕೊಳ್ಳಲಾಗಿದೆ ; ವಶಪಡಿಸಿಕೊಳ್ಳದಿದ್ದಲ್ಲಿ, ಕಾರಣಗಳೇನು ;

(ಈ) ಈ ಎಲ್ಲಾ ರಾಜಕಾಲುವೆಗಳ ನಕ್ಷೆಯು ಪಾಲಿಕೆಯಲ್ಲಿ ಲಭ್ಯವಿದೆಯೇ ; ಇಲ್ಲದಿದ್ದಲ್ಲಿ, ನಕ್ಷೆಯನ್ನು ತಯಾರಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಉ) ಸಮೀಕ್ಷೆಯ ಧೃಢೀಕೃತ ನಕಾಶೆಗಳು ಜಿಲ್ಲಾಧಿಕಾರಿಗಳ ಬಳಿ ಇರುವುದು ನಿಜವೇ ; ಹಾಗಿದ್ದಲ್ಲಿ, ಅದನ್ನು ಪಾಲಿಕೆಗೆ ಹಸ್ತಾಂತರಿಸಲು ಇರುವ ತೊಂದರೆಗಳೇನು ; ಇದರಿಂದ ಒತ್ತುವರಿ ತೆರವಿಗೆ ಅಡ್ಡಿಯಾಗಿರುವ ಬಗ್ಗೆ ಸರ್ಕಾರದ ನಿಲುವೇನು ?

## ಅಕ್ರಮ ಕಟ್ಟಡ, ಕೆರೆ ಒತ್ತುವರಿ, ರಾಜಕಾಲುವೆ ಒತ್ತುವರಿ

**ಶ್ರೀ ಇ. ಕೃಷ್ಣಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೨೫೦ (೨೭೨೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಎರಡೂವರೆ ವರ್ಷಗಳಿಂದೀಚೆಗೆ ಬೆಂಗಳೂರು ಮಹಾನಗರ ವ್ಯಾಪ್ತಿಯ ಸುತ್ತಲಿನ ಪ್ರದೇಶದ ಅಕ್ರಮ ಕಟ್ಟಡ ಹಾಗೂ ಕೆರೆ ಒತ್ತುವರಿ ಪ್ರಕರಣಗಳಲ್ಲಿ ಮನೆ ಕಟ್ಟಡಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮಾಡಿದ ಪ್ರಕರಣಗಳೆಷ್ಟು ; ಇಂತಹ ಕಟ್ಟಡ ತೆರವು ಪ್ರಕರಣಗಳಲ್ಲಿ ನ್ಯಾಯಾಲಯ ತಡೆಯಾಜ್ಞೆ ಬಂದಿರುವ ವಿವರಗಳನ್ನು ನೀಡುವುದು ;

(ಆ) ಯಾವ ಯಾವ ಪ್ರದೇಶಗಳಲ್ಲಿ ಅಕ್ರಮ ಮನೆ ನಿರ್ಮಾಣಕ್ಕಾಗಿ ಜಾಗ ಒತ್ತುವರಿ, ಕೆರೆ ಒತ್ತುವರಿ ಹಾಗೂ ರಾಜಕಾಲುವೆ ಒತ್ತುವರಿ ಮಾಡಿ ನಿರ್ಮಿಸಿದ ಬೃಹತ್ ಕಟ್ಟಡಗಳನ್ನು ನೆಲಸಮಗೊಳಿಸಲಾಗಿದೆ ; (ವಿಧಾನಸಭಾ ಕ್ಷೇತ್ರವಾರು, ವಾರ್ಡ್‌ಗಳವಾರು ಹಾಗೂ ಕೆರೆಗಳವಾರು ಅಕ್ರಮ ತೆರವುಗೊಳಿಸಿ ಕಟ್ಟಡ ನೆಲಸಮಗೊಳಿಸಿದ ವಿವರಗಳನ್ನು ಒದಗಿಸುವುದು)

(ಇ) ಇದಕ್ಕಾಗಿ ವೆಚ್ಚವಾದ ಮೊತ್ತವೆಷ್ಟು ಹಾಗೂ ಸದರಿ ಜಾಗಗಳನ್ನು ಮರು ವಶಪಡಿಸಿಕೊಂಡಿದ್ದರೆ ಆಸ್ತಿ ಮೌಲ್ಯ ಎಷ್ಟಿತ್ತು ?

(ಆ ಜಾಗದ ವ್ಯಾಪ್ತಿ ವಿಸ್ತೀರ್ಣ ಅಳತೆ ಪ್ರದೇಶವಾರು ವಿವರಗಳನ್ನು ಒದಗಿಸುವುದು)

## ರಾಜ್ಯ ಸರ್ಕಾರದ ಸಾಲದ ಪ್ರಮಾಣ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೫೧ (೨೫೮೬) ಮಾನ್ಯ ಮುಖ್ಯಮಂತ್ರಿಯುವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪ್ರಸ್ತುತ ರಾಜ್ಯ ಸರ್ಕಾರದಲ್ಲಿರುವ ಸಾಲದ ಪ್ರಮಾಣ ಎಷ್ಟು ;

(ಆ) ೨೦೧೨-೧೩, ೨೦೧೩-೧೪, ೨೦೧೪-೧೫ನೇ ಸಾಲುಗಳಲ್ಲಿ ಮಾಡಲಾಗಿರುವ ಸಾಲ ಎಷ್ಟು ; ಸಾಲದ ಮೂಲವೇನು ; ಪಡೆದ ಸಾಲವನ್ನು ಹೇಗೆ ವಿನಿಯೋಗಿಸಲಾಗಿದೆ ? (ವಿವರ ನೀಡುವುದು)

## ತ್ವರಿತ ನ್ಯಾಯಾಲಯಗಳ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೫೨ (೨೫೮೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ವಿಚಾರಣೆಗೆ ತ್ವರಿತ ನ್ಯಾಯಾಲಯುಗಳನ್ನು

ತೆರೆಯಲಾಗುವುದೇ ; ತೆರೆದಿದ್ದರೆ, ಜಿಲ್ಲಾವಾರು ವಿವರ ನೀಡುವುದು ;

(ಆ) ಇದರ ಕಾರ್ಯವೈಖರಿ ವ್ಯಾಪ್ತಿ ಏನು ? (ವಿವರ ನೀಡುವುದು)

## ಮೇಲುಕೋಟೆ ಅಭಿವೃದ್ಧಿಯ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೫೩ (೨೫೮೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :-

ಮಂಡ್ಯ ಜಿಲ್ಲೆಯಲ್ಲಿರುವ ಮೇಲುಕೋಟೆ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ ; ಯಾವಾಗ ಬಿಡುಗಡೆ ಮಾಡಲಾಗಿದೆ ; ಬಿಡುಗಡೆಯಾದ ಹಣವನ್ನು ಯಾವ ರೀತಿ ಬಳಸಿಕೊಳ್ಳಲಾಗಿದೆ ?

## ವಾಹನ ಸಂಚಾರಕ್ಕೆ ಅಡ್ಡಿ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೫೪ (೨೫೮೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರಿನಲ್ಲಿ ಅಗಲೀಕರಣಗೊಂಡ ರಸ್ತೆಗಳಲ್ಲಿ ಖಾಸಗಿ ವಾಹನಗಳನ್ನು ನಿಲ್ಲಿಸಲಾಗುತ್ತಿರುವುದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗುತ್ತಿದೆ ; ಉದಾಹರಣೆ :-ಮೈಸೂರು ರಸ್ತೆ

ಅಗಲೀಕರಣಗೊಂಡಿದ್ದರು ವಾಹನ ಸಂಚಾರಕ್ಕೆ ಉಪಯೋಗವಾಗುತ್ತಿಲ್ಲ ಇದಕ್ಕೆ ಕಾರಣವೇನು ;

(ಆ) ಬೆಂಗಳೂರಿನಲ್ಲಿ ಅಗಲೀಕರಣವಾದ ರಸ್ತೆಗಳಲ್ಲಿ ಎಲ್ಲಾ ಬಗೆಯ ವಾಹನ ಚಾಲನೆಗಾಗಿ ಲೇನ್ ಸಿಸ್ಟಂ ಮಾರ್ಗ ಸೂಚನೆ ಮಾಡಬಹುದಲ್ಲವೇ ; ಮಾಡಲಾಗದಿರಲು ಕಾರಣವೇನು ;

(ಇ) ಬೆಂಗಳೂರಿನಲ್ಲಿ ತುರ್ತು ವಾಹನ (ಆ್ಯಂಬುಲೆನ್ಸ್)ಗಳು ಕೂಡ ಸಂಚರಿಸಲು ದುಸ್ತರವಾಗಿದೆ ; ತುರ್ತು ವಾಹನಗಳಿಗಾದರೂ (ಲೇನ್ ಸಿಸ್ಟಂ) ರಸ್ತೆ ಮಾರ್ಗ ಸೂಚಿ ವ್ಯವಸ್ಥೆ ಮಾಡಲು ಕ್ರಮ ಜರುಗಿಸಬಹುದಲ್ಲವೇ ; (ವಿವರ ನೀಡುವುದು)

(ಈ) ಬೆಂಗಳೂರಿನಲ್ಲಿ ಸೀಸ್ ಮಾಡಿರುವ ವಾಹನಗಳನ್ನು ಪೊಲೀಸ್ ಸ್ಟೇಷನ್‌ಗಳ ಬಳಿ ಇರುವ ರಸ್ತೆಗಳಲ್ಲಿಯೇ ನಿಲ್ಲಿಸಿರುವುದರಿಂದ ಟ್ರಾಫಿಕ್ ಸಮಸ್ಯೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ ; ಉದಾಹರಣೆ : ಮೈಸೂರು ರಸ್ತೆ, ಬ್ಯಾಟರಾಯನಪುರ ಠಾಣೆ ಬಳಿ ಇದರಿಂದಲೇ ಟ್ರಾಫಿಕ್ ಸಮಸ್ಯೆಯಾಗುತ್ತಿದೆ ; ಹಾಗಾಗಿ ಸೀಸ್ ಮಾಡಿರುವ ವಾಹನಗಳಿಗಾಗಿ ಡಂಪಿಂಗ್ ಯಾರ್ಡ್/ ಪಾರ್ಕಿಂಗ್ ಯಾರ್ಡ್ ಮಾಡುವ ಮೂಲಕ ಸ್ವಲ್ಪ ಸಮಸ್ಯೆಯನ್ನು ಬಗೆಹರಿಸಬಹುದಲ್ಲವೇ ; (ವಿವರ ನೀಡುವುದು)

(ಉ) ಮೈಸೂರು ರಸ್ತೆ, ಮಾಗಡಿ ರಸ್ತೆ ಹಾಗೂ ಇತರೆ ಕಡೆಗಳಲ್ಲಿ ಪೊಲೀಸ್ ವಸತಿ ಗೃಹಗಳು ಮೂಲ ಸೌಕರ್ಯವಿಲ್ಲದೇ ಕುಟುಂಬದವರು ತೊಂದರೆ ಅನುಭವಿಸುತ್ತಿದ್ದಾರೆ ; ಇದರ ಬಗ್ಗೆ ತೆಗೆದುಕೊಂಡ ಕ್ರಮವೇನು ?

## ಕೆ.ಎಸ್.ಡಿ.ಎಲ್. ಕಾರ್ಖಾನೆಯ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೫೫ (೧೭೯೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೆ.ಎಸ್.ಡಿ.ಎಲ್. ಕಾರ್ಖಾನೆಗೆ ೨೦೧೪-೧೫ರ ಸಾಲಿನಲ್ಲಿ ಆಲ್‌ಫೇರ್ ಕ್ರೀಂ ಪ್ರಕರಣದಲ್ಲಿ ಕಂಪನಿಗೆ ೧.೮೧ ಕೋಟಿ ನಷ್ಟ ಉಂಟು ಮಾಡಿರುವ ಹಾಗೂ ಈಗಾಗಲೇ ಕೆಲಸದಿಂದ ವಜಾ ಆಗಿರುವ ಪ್ರಧಾನ ವ್ಯವಸ್ಥಾಪಕರು, ಹಾಗೂ ನಿರ್ದೇಶಕರು (ಮಾರುಕಟ್ಟೆ) ಇವರಿಂದ ಕಂಪನಿಗೆ ನಷ್ಟವಾಗಿರುವ ಹಣವನ್ನು ವಸೂಲಿ ಮಾಡಲಾಗಿದೆಯೇ ; ಸದರಿಯವರುಗಳಿಗೆ ಯಾವುದೇ ಪರಿಹಾರವನ್ನು ಕಂಪನಿಯಿಂದ ನೀಡಬಾರದೆಂದಿದ್ದರೂ, ಅವರಿಗೆ ಪರಿಹಾರ ನೀಡಲು ಕಾರಣವೇನು ;

(ಆ) ಕೆ.ಎಸ್.ಡಿ.ಎಲ್. ನಲ್ಲಿ ಬ್ಯಾಕ್‌ಲಾಗ್ ಆಧಾರದ ಮೇಲೆ ಎಷ್ಟು ಜನ ಅಧಿಕಾರಿಗಳನ್ನು ಹಾಲಿ ಇರುವ ಕಾರ್ಖಾನೆಗೆ ಸಂಖ್ಯಾನುಸಾರ ಆಯ್ಕೆ ಮಾಡಲಾಗಿದೆ ; ಬ್ಯಾಕ್‌ಲಾಗ್ ಹೆಸರಿನಲ್ಲಿ ಹೆಚ್ಚು ಅಧಿಕಾರಿಗಳನ್ನು ನೇಮಕ ಮಾಡಿದ್ದಲ್ಲಿ, ಅದಕ್ಕೆ ಜವಾಬ್ದಾರರು ಯಾರು ;

(ಇ) ಕೆ.ಎಸ್.ಡಿ.ಎಲ್.ನಲ್ಲಿ ೧೭೯ ನುರಿತ ಹಾಗೂ ಅನುಭವವಿರುವ ಅಧಿಕಾರಿಗಳಿದ್ದರೂ ಗುತ್ತಿಗೆ ಆಧಾರದ ಮೇಲೆ ಪ್ರತಿ ವಿಭಾಗಕ್ಕೆ ಅಂದರೆ ಮಾನವ ಸಂಪನ್ಮೂಲ ವಿಭಾಗಕ್ಕೆ, ಕಾನೂನು ವಿಭಾಗಕ್ಕೆ ಆರ್ಥಿಕ ಸಲಹೆಗಾರರನ್ನು ತೆಗೆದುಕೊಂಡಿರುವ ಕಾನೂನು ಕ್ರಮವೇನು ;

(ಈ) ಹಾಲಿ ಲೋಕಾಯುಕ್ತರ ತನಿಖೆಯಲ್ಲಿ ಭ್ರಷ್ಟಾಚಾರದ ಆರೋಪದಲ್ಲಿ ಅಮಾನತ್ತುಗೊಂಡು ಕ್ಯಾಟ್‌ನಲ್ಲಿ ತಡೆಯಾಜ್ಞೆ ತಂದು ಅಧಿಕಾರದಲ್ಲಿ ಮುಂದುವರೆಯುತ್ತಿರುವ ವ್ಯವಸ್ಥಾಪಕ ನಿರ್ದೇಶಕರು ಅಧಿಕಾರ ವಹಿಸಿಕೊಂಡ ಮೇಲೆ ಎಷ್ಟು ಬಾರಿ ಮೈಸೂರು ಸ್ಯಾಂಡಲ್ ಸೋಪ್ ಹಾಗೂ ಇತರೆ ಸೋಪ್‌ಗಳ ಮೇಲೆ ದರ ಹೆಚ್ಚಿಸಿದ್ದಾರೆ ;

(ಉ) ಕೆ.ಎಸ್.ಡಿ.ಎಲ್. (ಬೆಂಗಳೂರು, ಮೈಸೂರು, ಶಿವಮೊಗ್ಗ)ದಲ್ಲಿರುವ ಒಟ್ಟು ಗುತ್ತಿಗೆ ಕಾರ್ಮಿಕರ ಸಂಖ್ಯೆ ಎಷ್ಟು ; ಈ ಕಾರ್ಮಿಕರಿಗೆ ಭವಿಷ್ಯನಿಧಿ, ಇ.ಎಸ್.ಐ. ನೀಡಲಾಗುತ್ತಿದೆಯೇ ; ನೀಡಿದ್ದಲ್ಲಿ, ಸಂಪೂರ್ಣ ದಾಖಲಾತಿ ನೀಡುವುದು ;

(ಊ) ಕಂಪನಿಯಲ್ಲಿ ಸಿವಿಲ್ ಕಾಮಗಾರಿಯನ್ನು ಮಾಡುವಾಗ ರೂ. ೧.೦೦ ಲಕ್ಷ ಮೇಲ್ಪಟ್ಟರೆ ಟೆಂಡರ್ ಕರೆಯುವ ಪದ್ಧತಿಯನ್ನು ಕೈಬಿಟ್ಟು ರೂ. ೫.೦೦ ಲಕ್ಷಕ್ಕೆ ಹೆಚ್ಚುವರಿ ಮಾಡಿಕೊಂಡು ತುಂಡು ಗುತ್ತಿಗೆಗಳನ್ನಾಗಿ ಮಾಡಿಕೊಂಡ ಹಳೆಬಿಲ್ಲು ಹೊಸಬಿಲ್ಲು ರೀತಿಯಲ್ಲಿ ಹೆಚ್ಚಾಗಿ ಹಣ ಲೂಟಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ತೆಗೆದುಕೊಂಡ ಕ್ರಮವೇನು ?

## ಕಳೆದ ಮೂರು ವರ್ಷಗಳ ಬಜೆಟ್ ಮಾಹಿತಿ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೫೬ (೨೬೦೦) ಮಾನ್ಯ ಮುಖ್ಯ ಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳ ಒಟ್ಟು ಬಜೆಟ್ ಎಷ್ಟು ;

(ಆ) ಈ ಒಟ್ಟು ಬಜೆಟ್‌ನಲ್ಲಿ ಕೇಂದ್ರ ಸರ್ಕಾರದ ಯೋಜನಾ ಇಲಾಖೆಯ ಆದೇಶದಂತೆ ಶೇ. ೨೨.೭೫ ಭಾಗವನ್ನು ಎಸ್.ಸಿ.ಪಿ.-ಟಿ.ಎಸ್.ಪಿ. ಯೋಜನೆ ಅಡಿಯಲ್ಲಿ ಮೀಸಲಿಡಲಾಗುತ್ತಿದೆಯೇ ; ಮೀಸಲಿಟ್ಟಿದ್ದಲ್ಲಿ ಯಾವ ಯಾವ ವರ್ಷದಲ್ಲಿ ಎಷ್ಟೆಷ್ಟು ಹಣವನ್ನು ಮೀಸಲಿಡಲಾಗಿದೆ ; ಹೀಗೆ ಮೀಸಲಿಟ್ಟ ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾಗಿದೆ ?

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಮಗಾರಿಗಳ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೨೫೭ (೨೬೦೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರಕ್ಕೆ ಸಂಬಂಧಪಟ್ಟಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ೨೦೧೩-೧೪, ೨೦೧೪-೧೫ನೇ ಸಾಲಿನಲ್ಲಿ ಕೈಗೊಂಡ ಕಾರ್ಯಕ್ರಮಗಳು ಯಾವುವು ;

(ಆ) ಕಾಮಗಾರಿಗಾಗಿ ಮೀಸಲಿಟ್ಟ ಹಣ ಎಷ್ಟು ; ಖರ್ಚು ಮಾಡಲಾದ ಹಣ ಎಷ್ಟು ; ಕಾಮಗಾರಿಗಳ ಪ್ರಗತಿಯು ಯಾವ ಹಂತದಲ್ಲಿದೆ ?

## ಗಣಿಗಾರಿಕೆ ಪರವಾನಗಿ ನೀಡುವಾಗ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ನೀಡುವ ಕುರಿತು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೫೮ (೨೬೦೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗಣಿ ಕೈಗಾರಿಕೆಗೆ ಪರವಾನಗೆ ನೀಡಲಾಗುತ್ತಿದೆಯೇ ;

(ಆ) ೨೦೧೩–೧೪, ೨೦೧೪–೧೫ನೇ ಸಾಲಿನಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಯಾರು ಯಾರಿಗೆ ಗಣಿಗಾರಿಕೆ ಪರವಾನಗಿಯನ್ನು ನೀಡಲಾಗಿದೆ ;

(ಇ) ಹೀಗೆ ಗಣಿಗಾರಿಕೆಗೆ ಪರವಾನಗಿ ನೀಡುವಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ನೀಡಲಾಗಿದೆಯೇ ; ನೀಡಿದ್ದಲ್ಲಿ ಯಾವ ಯಾವ ಜಿಲ್ಲೆಗಳಲ್ಲಿ ಯಾರು ಯಾರಿಗೆ ನೀಡಲಾಗಿದೆ ?

## ಬಿ.ಡಿ.ಎ. ಮತ್ತು ಬಿ.ಬಿ.ಎಂ.ಪಿ.ಗಳು ನಿರ್ಮಿಸಿರುವ ಬಡಾವಣೆಗಳು

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೫೯ (೨೫೭೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿ.ಡಿ.ಎ. ಮತ್ತು ಬಿ.ಬಿ.ಎಂ.ಪಿ.ಗಳು ಇದುವರೆಗೆ ನಿರ್ಮಿಸಿರುವ ಬಡಾವಣೆಗಳು ಎಷ್ಟು ; ಈ ಬಡಾವಣೆಗಳಲ್ಲಿ ವಿತರಿಸಲಾದ ನಿವೇಶನಗಳೆಷ್ಟು ; ಮನೆಗಳೆಷ್ಟು ;

(ಆ) ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗಗಳಿಗೆ ನೀಡಲಾದ ನಿವೇಶನ, ಮನೆಗಳ ಸಂಖ್ಯೆಯ ಎಷ್ಟು ?

## ದೇವಸ್ಥಾನಗಳ ಜೀರ್ಣೋದ್ಧಾರ

**ಶ್ರೀ ಡಿ.ಎಸ್. ವೀರಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೬೦ (೧೪೩೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆ ವತಿಯಿಂದ ಕಳೆದ ೩ ವರ್ಷಗಳಲ್ಲಿ ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ/ನವೀಕರಣಕ್ಕಾಗಿ ಮೀಸಲಿಟ್ಟ ಹಣವೆಷ್ಟು ;

(ಆ) ಈ ಹಣವನ್ನು ಯಾವ ಯಾವ ದೇವಸ್ಥಾನಗಳಿಗೆ ಎಷ್ಟೆಷ್ಟು ಖರ್ಚು ಮಾಡಲಾಗಿದೆ ; ಇವುಗಳಲ್ಲಿ ಪ.ಜಾತಿ/ಪ.ವರ್ಗಗಳ ಸಂಬಂಧಪಟ್ಟ ಯಾವ ಯಾವ ದೇವಸ್ಥಾನಗಳಿಗೆ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ ?

## ಅನ್ಯ ಸೇವೆ ಆಧಾರ ಪದ್ಧತಿಯ ಪರಿಷ್ಕರಣೆ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೬೧ (೨೫೬೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಗುಪ್ತ ವಾರ್ತೆ ಇಲಾಖೆಯಲ್ಲಿ ವರ್ಗಾವಣೆಗೊಂಡಿದ್ದರೂ ಸಹ ಅನ್ಯ ಸೇವೆ (ಓ.ಓ.ಡಿ) ಆಧಾರದ ಮೇಲೆ

ಪುನಃ ಅದೇ ಹುದ್ದೆಯಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ರೀತಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಮತ್ತು ಅಧಿಕಾರಿಗಳ ಸಂಖ್ಯೆ ಎಷ್ಟು ; ಎಷ್ಟು ವರ್ಷಗಳಿಂದ ಓ.ಓ.ಡಿ. ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದಾರೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಅನ್ಯ ಕರ್ತವ್ಯದ ಆಧಾರದ ಮೇಲೆ ನಿಯೋಜಸುವ ಪದ್ಧತಿಯ ನಿಯಮ ಪರಿಷ್ಕರಿಸಿ ಎಲ್ಲಾ ಸಿಬ್ಬಂದಿಗಳಿಗೂ ಅನುಕೂಲವಾಗುವಂತೆ ನಿಯಮಗಳನ್ನು ರೂಪಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ ; (ವಿವರ ನೀಡುವುದು)

(ಈ) ಅನ್ಯ ಕರ್ತವ್ಯದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಅವರ ಮಾತೃ ಇಲಾಖೆಗೆ ವಾಪಾಸ್ ಕಳುಹಿಸದೇ ಇರಲು ಕಾರಣಗಳೇನು ? (ರಾಜ್ಯ ಕೇಂದ್ರ ಸ್ಥಾನದಲ್ಲಿ ಹುದ್ದೆವಾರು ಎಷ್ಟು ವರ್ಷಗಳಿಂದ ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸುತ್ತಿರುವವರ ಹೆಸರು ಮತ್ತು ಪದನಾಮದೊಂದಿಗೆ ವಿವರ ನೀಡುವುದು)

## ಸಣ್ಣ ಕೈಗಾರಿಕೆಗಳ ಅಭಿವೃದ್ಧಿ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೬೨ (೨೫೬೫) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಜಮೀನು ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಮಂಜೂರಾದ ಜಮೀನಿನ ಒಟ್ಟು ವಿಸ್ತೀರ್ಣವೆಷ್ಟು ಮತ್ತು ಮಂಜೂರಾಗಿರುವ ಅನುದಾನದ ಮೊತ್ತವೆಷ್ಟು ; (ಮಾಹಿತಿ ನೀಡುವುದು)

(ಇ) ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ ಮತ್ತು ಯಾವಾಗ ಅಭಿವೃದ್ಧಿ ಪಡಿಸಲಾಗುವುದು ? (ವಿವರವಾದ ಮಾಹಿತಿ ನೀಡುವುದು)

## ಕೆಂಪೇಗೌಡ ಬಡಾವಣೆ ನಿರ್ಮಾಣ

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೬೩ (೨೬೮೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣಕ್ಕಾಗಿ ಯಾವ ಯಾವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಕರೆಯಲಾಗಿದೆ ; ಟೆಂಡರ್‌ಗೆ ನಿಗಧಿಪಡಿಸಿರುವ ಮೊತ್ತ ಎಷ್ಟು ; (ಕಾಮಗಾರಿವಾರು ವಿವರಗಳನ್ನು ನೀಡುವುದು)

(ಆ) ಉದ್ದೇಶಿತ ಬಡಾವಣೆಯಲ್ಲಿ ಪ್ಯಾಕೇಜ್ ಸಂಖ್ಯೆ–೨, ಪ್ಯಾಕೇಜ್ ಸಂಖ್ಯೆ–೧೩ ಮತ್ತು ಪ್ಯಾಕೇಜ್ ಸಂಖ್ಯೆ–೧೪ರ ಕಾಮಗಾರಿಗಳನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ ; ಗುತ್ತಿಗೆಯ ಮೊತ್ತ ಎಷ್ಟು ;

(ಇ) ಈ ಕಾಮಗಾರಿಗಳು ಯಾವ ಹಂತದಲ್ಲಿವೆ ; ಕಾಮಗಾರಿ ಯಾವಾಗ ಮುಕ್ತಾಯವಾಗಲಿದೆ ?

## ನಗರಾಭಿವೃದ್ಧಿ ಪ್ರಾಧಿಕಾರಿಗಳು ಕೈಗೊಂಡಿರುವ ಯೋಜನೆಗಳು

**ಶ್ರೀ ರಘುನಾಥ ರಾವ್ ಮಲ್ಕಾಪುರೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೨೬೪ (೨೫೬೬) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳ ಸಂಖ್ಯೆ ಎಷ್ಟು ; ನಗರಾಭಿವೃದ್ಧಿ ಪ್ರಾಧಿಕಾರಗಳ ಅಭಿವೃದ್ಧಿಗೆಂದು ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿರುವ ಅನುದಾನ ಎಷ್ಟು ;

(ಆ) ಬಿಡುಗಡೆಯಾದ ಅನುದಾನದಲ್ಲಿ ವೆಚ್ಚ ಮಾಡಿರುವ ಹಣ ಎಷ್ಟು ಹಾಗೂ ವೆಚ್ಚ ಮಾಡದೆ ಬಾಕಿ ಉಳಿದ ಮೊತ್ತವೆಷ್ಟು ;

(ಇ) ಕಳೆದ ಮೂರು ವರ್ಷಗಳಿಂದ ಯಾವ ಯಾವ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ ; ಈ ಯೋಜನೆಗೆ ವೆಚ್ಚ ಮಾಡಲು ಉದ್ದೇಶಿಸಿರುವ ಹಣ ಎಷ್ಟು ? (ನಗರಾಭಿವೃದ್ಧಿ ಪ್ರಾಧಿಕಾರವಾರು ವಿವರ ನೀಡುವುದು)

# ಮುಖ್ಯಮಂತ್ರಿ ಪರಿಹಾರ ನಿಧಿ ವಿಳಂಬ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೨೨೬೫ (೨೫೭೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) "ಮುಖ್ಯಮಂತ್ರಿ ಪರಿಹಾರ ನಿಧಿ" ಯು ತೀರಾ ಸಂಕಷ್ಟದಲ್ಲಿರುವ ರೋಗಿಗಳಿಗೆ ಸಕಾಲದಲ್ಲಿ ಚೆಕ್ ಪಾವತಿಯಾಗದೇ ಇರುವುದು ನಿಜವೇ ;

(ಆ) ಮುಖ್ಯಮಂತ್ರಿಯವರು ಟಿಪ್ಪಣಿ ಮಾಡಿದ ನಂತರ, ಆಸ್ಪತ್ರೆಗೆ ದಾಖಲಾಗುವ ರೋಗಿಗಳಿಗೆ ಸಕಾಲದಲ್ಲಿ ಭರವಸೆ ಪತ್ರ ನೀಡದೇ, ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ, ಭರವಸೆ ಪತ್ರ ಉಪಯೋಗವಾಗದೇ ಹಿಂದಿರುಗುತ್ತಿರುವ ಘಟನೆಗಳನ್ನು ಸರ್ಕಾರ ಗಮನಿಸಿದೆಯೇ ;

(ಇ) ಟಿಪ್ಪಣಿ ಮಾಡಿದ ಒಂದು ತಿಂಗಳ ಒಳಗೆ ರೋಗಿಗಳಿಗೆ ನೇರ ಚೆಕ್ ಪಾವತಿ ಹಾಗೂ ಟಿಪ್ಪಣಿ ಮಾಡಿದ ಕನಿಷ್ಠ ಒಂದು ವಾರದ ಒಳಗೆ ಆಸ್ಪತ್ರೆಗೆ ಭರವಸೆ ಪತ್ರ ತಲುಪಿದರೆ ರೋಗಿಗಳಿಗೆ ಪ್ರಯೋಜನವಾಗುವುದರಿಂದ ಸರ್ಕಾರ ಈ ನಿಟ್ಟಿನಲ್ಲಿ ನಿಖರವಾಗಿ ಕ್ರಮ ತೆಗೆದು ಕೊಳ್ಳುವುದೇ ;

(ಈ) ಅನೇಕ ಪ್ರಕರಣಗಳಲ್ಲಿ ಚೆಕ್ ಪಾವತಿಯು ರೋಗಿಗಳು ಸತ್ತ ನಂತರ ಸಲ್ಲಿಕೆಯಾಗಿ ವಾಪಾಸಾಗಿ ಗೊಂದಲ ಸೃಷ್ಟಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಮಾನವೀಯ ನೆಲೆಯಲ್ಲಿ ನೀಡುವ ಮುಖ್ಯಮಂತ್ರಿ ಪರಿಹಾರ ನಿಧಿ ತುರ್ತು ಸಂತ್ರಸ್ತರ ಕೈಸೇರಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ನೀಡುವ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೨೨೬೬ (೨೬೧೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೦೯–೧೪ರ ಕರ್ನಾಟಕ ಸರ್ಕಾರದ ಕೈಗಾರಿಕಾ ನೀತಿಯಲ್ಲಿ ಮಧ್ಯಮ ಕೈಗಾರಿಕೆ ಮತ್ತು ಸಣ್ಣ ಕೈಗಾರಿಕೆಗೆ ಮೀಸಲಿರಿಸಿದ ಅನುದಾನ ಎಷ್ಟು ;

(ಆ) ೨೦೧೪–೧೫ನೇ ಸಾಲಿನಲ್ಲಿ ಖರ್ಚಾದ ಅನುದಾನ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ೨೦೧೪–೧೫ನೇ ಸಾಲಿನಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ವಿತರಿಸಿದ ಸಬ್ಸಿಡಿ ಮೊತ್ತವೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಈ) ಅನುದಾನ ವಿನಿಯೋಗಿಸದಿದ್ದಲ್ಲಿ ಸರ್ಕಾರಕ್ಕಿರುವ ತೊಂದರೆ ಏನು ;

(ಉ) ಕಳೆದ ೪ ತಿಂಗಳಿನಿಂದ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಎಲ್ಲಾ ರೀತಿಯ ಕಟ್ಟಡ ಪರವಾನಿಗೆ ತಡೆಹಿಡಿದಿದ್ದು ಸಣ್ಣ ಕೈಗಾರಿಕೆಗಳಿಗೆ ಬ್ಯಾಂಕ್ ಸಾಲ ಪಡೆಯಲು ಹಾಗೂ ಇಲಾಖೆಯ

ಸಬ್ಸಿಡಿ ಪಡೆಯಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಬಂದಿದ್ದಲ್ಲಿ, ಈ ತೊಂದರೆಗಳ ನಿವಾರಣೆಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ ?

## ಪಶುಸಂಗೋಪನಾ ಇಲಾಖೆಯಲ್ಲಿ 'ಡಿ' ದರ್ಜೆ ನೌಕರರ ಕೊರತೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–**

೨೨೬೭ (೨೬೧೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನಾ ಇಲಾಖೆಯ ಎಲ್ಲಾ ಕಛೇರಿ ಮತ್ತು ಆಸ್ಪತ್ರೆಗಳಿಗೆ ಮಂಜೂರಾದ, ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು, ಹುದ್ದೆವಾರು ಪೂರ್ಣ ವಿವರ ನೀಡುವುದು)

(ಆ) ರಾಜ್ಯದ ಎಲ್ಲಾ ಪಶುಸಂಗೋಪನಾ ಇಲಾಖೆಯಲ್ಲಿ 'ಡಿ' ದರ್ಜೆ ನೌಕರರಿದ್ದಾರೆಯೇ ; ಇದ್ದರೆ ಜಿಲ್ಲಾವಾರು ಮಾಹಿತಿ ನೀಡುವುದು ;

(ಇ) 'ಡಿ' ದರ್ಜೆ ನೌಕರರು ಎಲ್ಲಾ ಪಶುಸಂಗೋಪನಾ ಇಲಾಖೆಯಲ್ಲಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ?

## ಸ್ಮಾರ್ಟ್ ಸಿಟಿ ಯೋಜನೆಯ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೨೨೬೮ (೨೬೧೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೇಂದ್ರ ಸರ್ಕಾರದ ಉದ್ದೇಶಿತ ಸ್ಮಾರ್ಟ್ ಸಿಟಿ ಯೋಜನೆಗೆ ರಾಜ್ಯದಿಂದ ಯಾವ ಯಾವ ನಗರಗಳನ್ನು ಆಯ್ಕೆಮಾಡಲಾಗಿದೆ ;

(ಆ) ಸ್ಮಾರ್ಟ್ ಸಿಟಿ ಯೋಜನೆಗೆ ನಗರಗಳ ಆಯ್ಕೆಗೆ ಇರುವ ಮಾನದಂಡಗಳು ಯಾವುವು ;

(ಇ) ಸ್ಮಾರ್ಟ್ ಸಿಟಿ ಯೋಜನೆಯ ಪ್ರಗತಿಯು ಪ್ರಸ್ತುತ ಯಾವ ಹಂತದಲ್ಲಿದೆ ;

(ಈ) ಕರಾವಳಿಯ ಉಡುಪಿ, ಮಂಗಳೂರು ನಗರಗಳನ್ನು ಸ್ಮಾರ್ಟ್ ಸಿಟಿ ಯೋಜನೆಗೆ ಸೇರಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸರ್ಕಾರ ಉದ್ದೇಶಿಸಿದೆಯೇ ; ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳೇನು ?

## ಗುಪ್ತದಳ ಇಲಾಖೆಯ ಸಿಬ್ಬಂದಿಗಳ ಬಗ್ಗೆ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-**

೨೨೬೯ (೨೬೨೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗುಪ್ತದಳ ಇಲಾಖೆಯು ಕಾರ್ಯನಿರ್ವಹಿಸುತ್ತಿದೆಯೇ ;

(ಆ) ಕಾರ್ಯನಿರ್ವಹಿಸುತ್ತಿದ್ದಲ್ಲಿ, ಗುಪ್ತದಳ ಇಲಾಖೆಯ ಸಿಬ್ಬಂದಿಗಳು ಪೊಲೀಸ್ ಇಲಾಖೆಯ ಯಾವ ವೃಂದದಿಂದ ಬಂದವರಾಗಿದ್ದಾರೆ ;

(ಇ) ಗುಪ್ತ ಇಲಾಖೆಯ ಸಿಬ್ಬಂದಿಗಳಿಗೆ ನಿಗದಿಪಡಿಸಿದ ಕರ್ತವ್ಯಗಳು ಯಾವುವು ?

## ರಾಜಕಾಲುವೆ ಒತ್ತುವರಿ.

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೨೭೦(೨೫೭೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿ.ಬಿ.ಎಂ.ಪಿ ಪಾಲಿಕೆ ವ್ಯಾಪ್ತಿಯ ರಾಜಕಾಲುವೆ ಒತ್ತುವರಿ ತೆರವಿಗೆ ಸರ್ಕಾರ ಕೈಗೊಂಡ ಕ್ರಮಗಳೇನು ; ಈ ನಿಟ್ಟಿನಲ್ಲಿ ಈ ಹಿಂದಿನ ಕೋರ್ಟ್ ಆದೇಶವನ್ನು ಬಿ.ಬಿ.ಎಂ.ಪಿ ಪಾಲಿಸದೇ ನ್ಯಾಯಾಂಗ ನಿಂದನೆ ತೂಗುಗತ್ತಿಗೆ ಸಿಲುಕಿರುವುದು ಕಂಡುಬಂದಿದೆಯೇ ;

(ಆ) ಇಂತಹ ಪ್ರಕರಣ ಯಾವುದು ವಿಭಾಗೀಯ ಪೀಠ ಯಾವಾಗ ಆದೇಶಿತ್ತು ; ಈ ಆದೇಶದ ವಿವರಗಳೇನು ; ಆದೇಶ ಪಾಲನೆಗೆ ಸರ್ಕಾರ ಮೀನಮೇಷ ಏಣಿಸಲು ಕಾರಣಗಳೇನು ;

(ಇ) ನ್ಯಾಯಾಂಗ ನಿಂದನೆ ತಪ್ಪಿಸಿಕೊಳ್ಳಲು ಈಗ ಪಾಲಿಕೆಯು ತರಾತುರಿಯಲ್ಲಿ ಅಕ್ರಮವಾಗಿ ಅತಿಕ್ರಮಿಸಿರುವ ಒತ್ತುವರಿಯಾದ ರಾಜಕಾಲುವೆಗಳನ್ನು ಗುರುತಿಸಲು ಮುಂದಾಗಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ಈಗಾಗಲೇ ಎಷ್ಟು ರಾಜಕಾಲುವೆಗಳನ್ನು ಗುರುತಿಸಲಾಗಿದೆ ; ಎಷ್ಟು ಒತ್ತುವರಿ ಪ್ರಕರಣಗಳಲ್ಲಿ ತನಿಖೆ ಮಾಡಲಾಗಿದೆ ಹಾಗೂ ಅಂತಹ ಅಕ್ರಮ ಒತ್ತುವರಿಯಾದ ರಾಜಕಾಲುವೆಗಳನ್ನು ಮರುವಶಪಡಿಸಿಕೊಳ್ಳಲಾಗಿದೆ ; (ವಾರ್ಡ್‌ಗಳವಾರು ಪೂರ್ಣ ವಿವರ ನೀಡುವುದು)

(ಉ) ತ್ಯಾಜ್ಯ ವಿಲೇವಾರಿ, ಫುಟ್‌ಪಾತ್ ದುಸ್ಥಿತಿ ರಸ್ತೆ ನಿರ್ವಹಣೆ ಸೇರಿದಂತೆ ಹಲವು ನಾಗರೀಕ ಮೂಲ ಸೌಕರ್ಯಗಳ ವಿಷಯದಲ್ಲಿ ಆಗಾಗ ನ್ಯಾಯಾಲಯದಿಂದ ನಿಂದನೆ ಪ್ರಕರಣ ದಾಖಲಾಗುತ್ತಿರುವ ಬಗ್ಗೆ ಸರ್ಕಾರದ ನಿಲುವೇನು ?

## ಬಿ.ಡಿ.ಎ ಮಾಸ್ಟರ್ ಪ್ಲಾನ್ ೨೦೧೫ರ ಬದಲಾವಣೆ.

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೨೭೧(೨೫೭೫) ಮಾನ್ಯ ಮುಖ್ಯಮಂತ್ರಿಯುವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ೨೦೧೫ನ್ನು ಬದಲಾವಣೆ ಮಾಡಲಾಗಿದೆಯೇ ; ಹಾಗಿದ್ದಲ್ಲಿ, ಬದಲಾವಣೆಗೆ ಕಾರಣಗಳೇನು ; (ಈ ಹಿಂದಿನ ಮಾಸ್ಟರ್ ಪ್ಲಾನ್ ಮತ್ತು ಬದಲಾವಣೆಗೊಂಡಿರುವ ಮಾಸ್ಟರ್ ಪ್ಲಾನ್‌ನ ವ್ಯತ್ಯಾಸಗಳ ವಿವರ ನೀಡುವುದು)

(ಆ) ಮಾಸ್ಟರ್ ಪ್ಲಾನ್ ಬದಲಾವಣೆ ಮಾಡುವಾಗ ಅನುಸರಿಸಿದ ಮಾನದಂಡಗಳೇನು ; ಇದಕ್ಕಾಗಿ ಸಾರ್ವಜನಿಕರಿಂದ ಆಕ್ಷೇಪಣೆ ಆಹ್ವಾನಿಸಲಾಗಿತ್ತೇ ; ಇಲ್ಲದಿದ್ದಲ್ಲಿ, ಇದರ ಅವಶ್ಯಕತೆ ಕಾಣಲಿಲ್ಲವೇ ?

## ಸಾರ್ವಜನಿಕ ಶೌಚಾಲಯಗಳಿಗೆ ಶುಲ್ಕ

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು):-**

೨೨೮೨(೨೫೭೪) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರ ಬಿ.ಡಿ.ಎ, ಬಿ.ಬಿ.ಎಂ.ಪಿ ವ್ಯಾಪ್ತಿಯ ಸಾರ್ವಜನಿಕ ಶೌಚಾಲಯ ಬಳಕೆಗೆ ಶುಲ್ಕ ವಿಧಿಸುತ್ತಿರುವುದು ನಿಜವೇ ;

(ಆ) ಈ ಶುಲ್ಕವನ್ನು ರದ್ದುಪಡಿಸಲು ಸರ್ಕಾರ ಮುಂದಾಗಿದೆಯೇ ; ಯಾವಾಗಿನಿಂದ ಇದು ಅನುಷ್ಠಾನಕ್ಕೆ ಬರಲಿದೆ ;

(ಇ) ಕರ ಸೆಸ್ ಸಂಗ್ರಹ ಮಾಡುವ ಪಾಲಿಕೆಗೆ ಸ್ವಚ್ಛಭಾರತ ಕಲ್ಪನೆಯಡಿ ಗ್ರಾಹಕರಿಂದ ಸೇವಾ ಶುಲ್ಕ ಪಡೆಯುವುದು ಸರಿಯಲ್ಲವೆಂದು ಸರ್ಕಾರ ಭಾವಿಸುವುದೇ ;

(ಈ) ಶುಲ್ಕ ಪಡೆಯುದೇ ಶೌಚಾಲಯಗಳ ನಿರ್ವಹಣೆಯನ್ನು ಹೇಗೆ ಮಾಡಲಾಗುವುದು ಎಂಬ ಕುರಿತು ಸರ್ಕಾರ ನಿಲುವೇನು ? (ಈ ರೀತಿಯ ನಗರ ವ್ಯಾಪ್ತಿಯ ಸಾರ್ವಜನಿಕ ಶೌಚಾಲಯಗಳ ಸಂಖ್ಯೆ ವಿವರಗಳನ್ನು ವಾರ್ಡ್‌ಗಳವಾರು ನಿರ್ವಹಣೆಗೆ ವಹಿಸಿರುವ ಸಂಸ್ಥೆಗಳವಾರು ವಿವರ ಒದಗಿಸುವುದು)

# ಬೆಂಗಳೂರು ನಗರದಲ್ಲಿನ ಅಕ್ರಮ ಜಾಹೀರಾತು.

**ಶ್ರೀ ಎ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು):-**

೨೨೭೩(೨೫೭೬) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಅಕ್ರಮ ಜಾಹೀರಾತುಗಳನ್ನು ಪತ್ತೆಹಚ್ಚಲಾಗಿದೆಯೇ ; (ವಿವರಗಳನ್ನು ನೀಡಿರಿ).

(ಆ) ಅಕ್ರಮ ಜಾಹೀರಾತು ಪತ್ತೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ ; ಇದರ ತಡೆ ಹಾಗೂ ಅಕ್ರಮ ಜಾಹೀರಾತು ನಿಷೇಧಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಬೆಂಗಳೂರು ನಗರವನ್ನು ಜಾಹೀರಾತು ಮುಕ್ತ ನಗರವನ್ನಾಗಿ ಮಾಡಲು ಯಾವ ಯಾವ ಯೋಜನೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ;

(ಈ) ಜಾಹೀರಾತುಗಳಿಂದ ಪಾಲಿಕೆಗೆ ಬರುವ ಆದಾಯ ಎಷ್ಟು ; ಇದರ ನಿರ್ವಹಣೆ ವೆಚ್ಚ ಎಷ್ಟು ; ಖರ್ಚು ಕಳೆದು ಪಾಲಿಕೆಗೆ ಉಳಿಯುವ ಲಾಭ ಎಷ್ಟು ;

(ಉ) ಜಾಹೀರಾತು ನಿಷೇಧಕ್ಕೆ ಪಾಲಿಕೆ ಮುಂದಾಗಿದ್ದರೂ ಇದಕ್ಕೆ ಸರ್ಕಾರದ ಅನುಮತಿ ಅಗತ್ಯವಿದೆಯೇ, ಕಾರಣಗಳೇನು ;

(ಊ) ಈಗಾಗಲೇ ಹಾಕಿರುವ ಅಧಿಕೃತ ಹಾಗೂ ಅನಧಿಕೃತ ಜಾಹೀರಾತು ತೆರವಿಗೆ ಕೈಗೊಂಡ ಕ್ರಮಗಳೇನು ? (ವಿವರ ತಿಳಿಸುವುದು)

## ಬಿ.ಬಿ.ಎಂ.ಪಿ ಯಿಂದ ಅಕ್ರಮ ಕಟ್ಟಡ ಖರೀದಿ.

**ಶ್ರೀ ವಿ. ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೨೭೪(೨೫೭೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಿ.ಬಿ.ಎಂ.ಪಿ ಯಿಂದ ಅಕ್ರಮ ಕಟ್ಟಡ ಖರೀದಿ ಮಾಡಿರುವ ಪ್ರಕರಣವು ಬೆಳಕಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದಲ್ಲಿ, ಅಕ್ರಮ ಕಟ್ಟಡ ಖರೀದಿಗೆ ಮುಂದಾಗಲು ಕಾರಣಗಳೇನು ; ಇದರಿಂದಾಗಿ ಪಾಲಿಕೆಯು ತನ್ನದೇ ಆಸ್ತಿಯನ್ನು ಪಡೆಯಲು ಖಾಸಗಿ ಸಂಸ್ಥೆಗೆ ಹಣ ನೀಡಿದಂತಾಗುವುದಿಲ್ಲವೇ ;

(ಇ) ಇದಕ್ಕೆ ಪಾಲಿಕೆ ಒಪ್ಪಿಗೆ ನೀಡಿತ್ತೆ ; ನೀಡಿದ್ದಲ್ಲಿ, ಕಾರಣರ್ಯಾರು, ಸದರಿ ಜಾಗವನ್ನು ಖಾಸಗಿ ಸಂಸ್ಥೆಗೆ ಗುತ್ತಿಗೆಗೆ ನೀಡಲಾಗಿತ್ತೇ ;

(ಈ) ಗುತ್ತಿಗೆ ಪಡೆದ ಸಂಸ್ಥೆಯು ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಿದ್ದಲ್ಲಿ ಆ ಸಂಸ್ಥೆ ಯಾವುದು ಯಾರ ಒಡೆತನದಲ್ಲಿದೆ ;

(ಉ) ಇಷ್ಟೆಲ್ಲಾ ತಪ್ಪುಗಳಿದ್ದರೂ ಕೂಡಾ ಅಕ್ರಮ ಕಟ್ಟಡಕ್ಕೆ ಪರಿಹಾರ ಮೊತ್ತವನ್ನು ಮಂಜೂರು ಮಾಡಲು ಮುಂದಾಗಿರುವುದು ಆಶ್ಚರ್ಯಕರವಾಗಿದೆ ; ಈ ಬಗ್ಗೆ ತನಿಖೆ ಮಾಡಲಾಗಿದೆಯೇ ; ಜಾಗ ವಶಪಡಿಸಿಕೊಳ್ಳಲು ಯಾವ ಕ್ರಮ ಕೈಗೊಂಡಿದೆ ? (ವಿವರ ನೀಡಿರಿ)

# ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಆಸ್ತಿಗಳ ಮಾಹಿತಿ ಬಗ್ಗೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೨೭೫(೨೫೭೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆಗೆ ಸೇರಿದ ಎಲ್ಲಾ ಆಸ್ತಿಗಳ ದಾಖಲೆಗಳನ್ನು ಇಡಲಾಗಿದೆಯೇ ;

(ಆ) ಹಾಗಿದ್ದರೆ, ಎಲ್ಲಾ ಆಸ್ತಿಗಳ ವಿವರವಾದ ಮಾಹಿತಿಯನ್ನು ಒದಗಿಸುವುದು ; (ಕಟ್ಟಡಗಳು, ಖಾಲಿ ನಿವೇಶನ, ಗುತ್ತಿಗೆ ನೀಡಿರುವ ಕಟ್ಟಡಗಳ ಹಾಗೂ ನಿವೇದನೆ ಆಸ್ತಿಗಳ ಮತ್ತು ಅವುಗಳನ್ನು ಗುತ್ತಿಗೆ ನೀಡಿದ ದಿನಾಂಕ, ಗುತ್ತಿಗೆ ಮುಗಿದ ದಿನಾಂಕ ಹಾಗೂ ಗುತ್ತಿಗೆ ಹಣದ ಪೂರ್ಣ ವಿವರ ಒದಗಿಸುವುದು)

(ಇ) ಅವುಗಳಲ್ಲಿ ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಆಸ್ತಿಗಳೆಷ್ಟು ; ಅವುಗಳ ತೆರವಿಗೆ ತೆಗೆದುಕೊಂಡಿರುವ ಕ್ರಮಗಳೇನು ? (ಆಕ್ರಮಣ ಮಾಡಿಕೊಂಡಿರುವವರ ಹೆಸರು, ವಿಳಾಸ, ಆಕ್ರಮಿಸಿಕೊಂಡ ದಿನಾಂಕ ಮತ್ತು ತೆರವುಗೊಳಿಸಲು ತೆಗೆದುಕೊಂಡಿರುವ ಕ್ರಮದ ಪೂರ್ಣ ವಿವರಗಳ ಮಾಹಿತಿ ಒದಗಿಸುವುದು)

## ಬಿ.ಬಿ.ಎಂ.ಪಿ ಯಿಂದ ನಡೆದಿರುವ ಕಾಮಗಾರಿಗಳಿಗೆ ಹಣ ಪಾವತಿಸುವ ಬಗ್ಗೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು):-**

೨೨೭೬(೨೫೭೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಿ.ಬಿ.ಎಂ.ಪಿ.ಯಲ್ಲಿ ನಡೆದಿರುವ ಪೂರ್ಣಗೊಂಡ ಕಾಮಗಾರಿಗಳಿಗೆ ಡಿಸೆಂಬರ್ ೨೦೧೫ ರವರೆಗೆ ಪಾವತಿಸಬೇಕಾದ ಹಣ ಬಾಕಿ ಇರುವುದು ನಿಜವೇ ;

(ಆ) ಹಾಗಿದ್ದರೆ, ಅವರ ಒಟ್ಟು ಮೊತ್ತ ಎಷ್ಟು ; (ಕಾಮಗಾರಿಗಳ ಪೂರ್ಣ ಪಟ್ಟಿ ಮತ್ತು ಪಾವತಿಸಬೇಕಾದ ಹಣದ ವಿವರದ ಪಟ್ಟಿ ಒದಗಿಸುವುದು)

(ಇ) ಹಣ ಪಾವತಿಸಲು ಬಾಕಿ ಇರುವ ಕಾಮಗಾರಿಗಳು ಸ್ಥಾಯಿ ಸಮಿತಿ, ಬಿ.ಬಿ.ಎಂ.ಪಿ ಸಭೆ ಮತ್ತು ಮಂಜೂರು ಮಾಡುವ ಅಧಿಕಾರವುಳ್ಳವರಿಂದ ಮಂಜೂರಾಗಿವೆಯೇ ;

(ಈ) ಹಾಗಿದ್ದರೆ, ಅಂತಹ ಕಾಮಗಾರಿಯನ್ನು ಜಾರಿಗೊಳಿಸುವಾಗ ಹಣದ ವ್ಯವಸ್ಥೆಗೆ ತಕ್ಕಂತೆ ನಿರ್ವಹಣೆ ಮಾಡಲಾಗಿದೆಯೇ ಅಥವಾ ಗುತ್ತಿಗೆದಾರ ಮತ್ತು ಅಧಿಕಾರಿಗಳು ಜೊತೆಯಾಗಿ ನಡೆಸಿರುವ ಅಕ್ರಮ ಕಾಮಗಾರಿಗಳೇ ? (ವಿವರಣೆ ನೀಡುವುದು)

## ಅಧಿಕೃತ ಟ್ಯಾಕ್ಸಿ ಮತ್ತು ಆಟೋ ಸ್ಟ್ಯಾಂಡ್ ನಿರ್ಮಾಣದ ಬಗ್ಗೆ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು):-**

೨೨೭೭(೨೫೭೭) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:-

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಟ್ಯಾಕ್ಸಿ ಮತ್ತು ಆಟೋ ವಾಹನಗಳ ಸಾರ್ವಜನಿಕ ಸಂಪರ್ಕಕ್ಕೆ ಅಧಿಕೃತ ನಿಲುಗಡೆ ತಾಣವನ್ನು ನಿರ್ಮಾಣ ಮಾಡಲಾಗಿದೆಯೇ ;

(ಆ) ಹಾಗಿದ್ದರೆ, ಅಂತಹ ಎಷ್ಟು ನಿಲುಗಡೆ ತಾಣಗಳ ಪೂರ್ಣ ಪಟ್ಟಿಯನ್ನು ದೂರವಾಣಿ ಸಂಖ್ಯೆ ಸಹಿತ ಪೂರ್ಣ ವಿವರ ನೀಡುವುದು ?

## ಬಿ.ಡಿ.ಎ. ಸಂಸ್ಥೆಯಿಂದ ಸೈಟ್‌ಗಳ ಹಂಚಿಕೆಯ ಬಗ್ಗೆ.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):-**

೨೨೭೮(೨೫೭೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ:-

(ಅ) ಬಿ.ಡಿ.ಎ. ಸಂಸ್ಥೆಯನ್ನು ಸರ್ಕಾರ ರಚನೆ ಮಾಡಿದ್ದು ಯಾವಾಗ ;

(ಆ) ಯಾವ ಉದ್ದೇಶದಿಂದ ಬಿ.ಡಿ.ಎ. ಸ್ಥಾಪನೆ ಮಾಡಲಾಯಿತು, ಉದ್ದೇಶ ಈಡೇರುತ್ತಿದೆಯಾ ;

(ಇ) ಇತ್ತೀಚಿನ ೫-೬ ವರ್ಷಗಳಲ್ಲಿ ಬಿ.ಡಿ.ಎ. ವತಿಯಿಂದ ಎಷ್ಟು ಎಕರೆ ಭೂಮಿಯನ್ನು ಸೈಟುಗಳ ಹಂಚಿಕೆಗಾಗಿ ಅಕ್ವೇಯರ್

ಮಾಡಿಕೊಳ್ಳಲಾಯಿತು ; ಇದರಲ್ಲಿ ಎಷ್ಟು ಬಡಾವಣೆ ರಚನೆ ಮಾಡಲಾಗಿ, ಎಷ್ಟು ಜನರಿಗೆ ಸೈಟು ವಿತರಣೆ ಮಾಡಲಾಗಿದೆ ;

(ಈ) ಸೈಟು ಇಲ್ಲದವರಿಗಾಗಿ ಬಡಾವಣೆ ಮಾಡಬೇಕೆಂಬ ಉದ್ದೇಶದಿಂದ ಭೂಮಿಯನ್ನು ಅಕ್ವೇಯರ್ ಮಾಡಿದ ಸರ್ಕಾರ ಪುನ: ಡೀ- ನೋಟಿಫೈ ಮಾಡುವ ಉದ್ದೇಶ ಏನು ?

## ಮರಳು ದಂಧೆಯ ಬಗ್ಗೆ.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):-**

೨೨೭೯(೨೫೯೧) ಮಾನ್ಯ ಮುಖ್ಯಮಂತ್ರಿಯುವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮರಳು ದಂಧೆ ಅವ್ಯಾಹತವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಮರಳು ನೀತಿ ಜಾರಿಯಲ್ಲಿದ್ದರೂ ಮರಳು ದಂಧೆಕೋರರ ಹಾವಳಿ ನಿಲ್ಲಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮರಳು ಇಲ್ಲದೆ ಸರ್ಕಾರಿ ಕಾಮಗಾರಿಗಳು ಅರ್ಧಕ್ಕೆ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಮರಳು ನೀತಿಯಿಂದ ಸಾರ್ವಜನಿಕರು ದುಪಟ್ಟು ಹಣ ಕೊಟ್ಟು ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;?

## ಯುವತಿಯರು ಕಾಣೆಯಾಗುತ್ತಿರುವ ಪ್ರಕರಣಗಳ ಬಗ್ಗೆ.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):–**

೨೨೮೦(೨೫೯೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಯುವತಿಯರು ಕಾಣೆಯಾಗುತ್ತಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಕಾಣೆಯಾದ ಯುವತಿಯರ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಕಾಣೆಯಾದ ಯುವತಿಯರ ಎಷ್ಟು ; ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ; ಇಂತಹ ಪ್ರಕರಣಗಳನ್ನು ಪತ್ತೆ ಹಚ್ಚುವ ಪ್ರಗತಿಯು ನಿಧಾನವಾಗುತ್ತಿರುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ ;

(ಈ) ತ್ವರಿತ ತನಿಖೆ ಮತ್ತು ಪತ್ತೆ ಹಚ್ಚುವ ನಿಟ್ಟಿನಲ್ಲಿ ಸರ್ಕಾರವು ಕೈಗೊಂಡ ಕ್ರಮಗಳೇನು ; (ಮಾಹಿತಿ ನೀಡುವುದು)

(ಉ) ಪತ್ತೆ ಹಚ್ಚಿದ ಪ್ರಕರಣಗಳಲ್ಲಿ ಭಾಗಿಯಾದ ಎಷ್ಟು ಜನ ಅಪರಾಧಿಗಳಿಗೆ ಶಿಕ್ಷೆ ವಿಧಿಸಿದೆ ? (ವಿವರ ನೀಡುವುದು)

F-3 B/B

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಡೆಸುತ್ತಿರುವ ಆಸ್ಪತ್ರೆಗಳ ಬಗ್ಗೆ.

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):-**

೨೨೮೧(೨೫೮೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆಯುತ್ತಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು, ಈ ಆಸ್ಪತ್ರೆಗಳಿಗೆ ಪಾಲಿಕೆಯ ವಾರ್ಷಿಕ ಬಜೆಟ್‌ನಲ್ಲಿ ಎಷ್ಟು ಮೊತ್ತವನ್ನು ನಿಗದಿಪಡಿಸಲಾಗಿದೆ ;

(ಆ) ಈ ಆಸ್ಪತ್ರೆಗಳಿಗೆ ಪಾಲಿಕೆಯ ವಾರ್ಷಿಕ ಬಜೆಟ್‌ನಲ್ಲಿ ನಿಗದಿಪಡಿಸಲಾದ ಮೊತ್ತದಲ್ಲಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ ; (ಕಳೆದ ಮೂರು ವರ್ಷಗಳ ವಿವರ ನೀಡುವುದು)

(ಇ) ವಾರ್ಷಿಕ ಬಜೆಟ್‌ನಲ್ಲಿ ನಿಗದಿಪಡಿಸಲಾದ ಮೊತ್ತ ಸರಿಯಾದ ರೀತಿಯಲ್ಲಿ ವಿನಿಯೋಗವಾಗದಿದ್ದಲ್ಲಿ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ?

## ಖಾಸಗಿ ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ನೀರಿನ ಸಂಪರ್ಕ

**ಶ್ರೀಮತಿ ಮೋಟಮ್ಮ (ವಿಧಾನ ಸಭೆಯಿಂದ ಚುನಾಯಿತರಾದವರು):-**

೨೨೮೨(೨೫೮೭) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಇತ್ತೀಚೆಗೆ ಬೆಂಗಳೂರು ನಗರದಲ್ಲಿ ಖಾಸಗಿಯಾಗಿ ನಿರ್ಮಾಣವಾಗುತ್ತಿರುವ ಅಪಾರ್ಟ್‌ಮೆಂಟ್ ಸಂಖ್ಯೆಗಳೆಷ್ಟು ;

(ಆ) ಇದರಲ್ಲಿ ಎಷ್ಟು ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಿದೆ ;

(ಇ) ನೀಡಿದ್ದಲ್ಲಿ, ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ನೀರಿನ ಸಂಪರ್ಕ ಕೊಡಲಾಗಿದೆಯೇ ;

(ಈ) ಕೊಟ್ಟಿದ್ದಲ್ಲಿ ಎಷ್ಟು ಅಪಾರ್ಟ್‌ಮೆಂಟ್‌ಗಳಿಗೆ ಕಾವೇರಿ ನೀರಿನ ಸಂಪರ್ಕ ನೀಡಲಾಗಿದೆ ? (ವಿವರ ನೀಡುವುದು)

## ರಾಜ್ಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿಯ ಪ್ರಸ್ತಾವನೆಗಳು ವಿಳಂಬವಾಗುತ್ತಿರುವುದು.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-**

೨೨೮೩(೨೬೫೮) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಪ್ರಸ್ತಾವನೆಗಳು ಬಹಳ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನೌಕರರು ಮರಣ ಹೊಂದಿದ ನಂತರ ಅವಲಂಬಿತರಿಗೆ ಎಷ್ಟು ಅವಧಿಯೊಳಗೆ ಅನುಕಂಪದ ಮೇಲೆ ನೇಮಕಾತಿ ಮಾಡಬೇಕು ; ಸರ್ಕಾರದ ಆದೇಶ ನೀಡುವುದು ;

(ಇ) ಸರ್ಕಾರದ ಆದೇಶದನ್ವಯು ಕಳೆದ ೫ ವರ್ಷಗಳಿಂದ ಇದುವರೆವಿಗೂ ಎಷ್ಟು ನೇಮಕಾತಿ ಪ್ರಕರಣಗಳು ಬಾಕಿ ಇವೆ ;

(ಈ) ಬಾಕಿ ಇರಲು ಕಾರಣಗಳೇನು ; ಬಾಕಿ ಪ್ರಕರಣಗಳನ್ನು ಯಾವ ದಿನಾಂಕದೊಳಗಾಗಿ ಇತ್ಯರ್ಥಗೊಳಿಸಲಾಗುವುದು ?

## ಅಕ್ರಮ ವಲಸೆಗಾರರನ್ನು ನಿಯಂತ್ರಿಸುವುದು.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):–**

೨೨೮೪(೨೬೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದ ಕಾಫಿ ಬೆಳೆಯುವ ಜಿಲ್ಲೆಗಳಾದ ಕೊಡಗು ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಕಾಫಿ ತೋಟದಲ್ಲಿ ಬಾಂಗ್ಲಾ ದೇಶದಿಂದ ಬಂದ ವಲಸೆಗಾರರು ಕಾರ್ಮಿಕ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಅಕ್ರಮ ವಲಸೆಗಾರರು ಆಹಾರ ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್‌ಗಳನ್ನು ಹೊಂದಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಇ) ಈ ಬಾಂಗ್ಲಾ ವಲಸೆಗಾರರು ನೋಡಲು ಪೂರ್ವೋತ್ತರ ರಾಜ್ಯಗಳ ಜನರಂತೆ ಇದ್ದು, ಕಾಫಿ ತೋಟದ ಮಾಲೀಕರು ಇವರನ್ನು

ಹೊರ ದೇಶದವರೆಂದು ಗುರುತಿಸಲಾಗದೆ , ಅವರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳುತ್ತಿರುವುದು ತಪ್ಪೇ ;

(ಈ) ಈ ಅಕ್ರಮ ವಲಸೆಗಾರರನ್ನು ನಿಯಂತ್ರಿಸಲು ಮತ್ತು ಅವರನ್ನು ಮರಳಿ ಕಳುಹಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಯೋಜನಾ ವೆಚ್ಚವನ್ನು ತ್ರೈಮಾಸಿಕಕ್ಕೆ ಬಿಡುಗಡೆ ಮಾಡುವುದು.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-**

೨೨೮೫(೨೬೬೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೧೪-೧೫ನೇ ಸಾಲಿನಲ್ಲಿ ನಿಗದಿಪಡಿಸಿರುವ ಯೋಜನಾ ವೆಚ್ಚವನ್ನು ತ್ರೈಮಾಸಿಕಕ್ಕೆ ಬಿಡುಗಡೆ ಮಾಡಲು ನಿಗದಿಪಡಿಸಿರುವ ಮಾನದಂಡಗಳೇನು ;

(ಆ) ಪ್ರತಿ ತ್ರೈಮಾಸಿಕಕ್ಕೆ ಬಿಡುಗಡೆಯಾಗಿರುವ ಯೋಜನೆ ಅನುದಾನದ ಪ್ರತಿಶತ ವಿವರವನ್ನು ನೀಡುವುದು; (೧,೨ ಮತ್ತು ೩ನೇ ಕಂತು)

(ಇ) ವರ್ಷದ ಕೊನೆಯ ತ್ರೈಮಾಸಿಕ ಅವಧಿಯಲ್ಲಿ ಅತ್ಯಂತ ಹೆಚ್ಚು ಹಣ ಬಿಡುಗಡೆ ಮಾಡುವುದರಿಂದ ಕೆಲಸಗಳ ಗುಣಮಟ್ಟ ಕುಂಠಿತವಾಗುವುದು ಮತ್ತು ಸರ್ಕಾರದ ಹಣ ಪೋಲಾಗುವುದು ಸರ್ಕಾರದ ಗಮನದಲ್ಲಿದೆಯೇ;

(ಈ) ಇದನ್ನು ನಿಲ್ಲಿಸಲು ಏನು ಕ್ರಮ ಕೈಗೊಳ್ಳಲಾಗುವುದು ?

## ರಾಜ್ಯದಲ್ಲಿ ಕಟ್ಟಡ ಮತ್ತು ನಿವೇಶನಗಳಿಗೆ ಅಕ್ರಮ-ಸಕ್ರಮ ಕಾನೂನನ್ನು ಜಾರಿಗೊಳಿಸುವ ಬಗ್ಗೆ.

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-**

೨೨೮೬(೨೫೯೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಮಹಾನಗರ ಪಾಲಿಕೆ, ನಗರಸಭೆ, ಪುರಸಭೆ ಪಟ್ಟಣ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಬರುವ ಕಟ್ಟಡ ಮತ್ತು ನಿವೇಶನಗಳಿಗೆ ಅಕ್ರಮ-ಸಕ್ರಮ ಕಾನೂನನ್ನು ಯಾವಾಗಿನಿಂದ ಜಾರಿಗೆ ತರಲಾಗುವುದು ;

(ಆ) ಈ ರೀತಿಯ ಸಕ್ರಮಗೊಳಿಸುವ ವ್ಯವಸ್ಥೆಗೆ ಸರ್ಕಾರ ಹಾಕಿಕೊಂಡಿರುವ ಮಾನದಂಡಗಳೇನು ;

(ಇ) ಈ ಕಾನೂನಿನ ಅನ್ವಯ ಸಕ್ರಮಗೊಳಿಸಲು ವಿವಿಧ ಅಳತೆಯ ನಿವೇಶನ ಮತ್ತು ಕಟ್ಟಡಗಳಿಗೆ ನಿಗದಿಪಡಿಸಿರುವ ಶುಲ್ಕದ ವಿವರ ನೀಡುವುದು ?

## ಬೆಂಗಳೂರು ನಗರದಲ್ಲಿ ಹೆಚ್ಚಾಗುತ್ತಿರುವ ಅಪಘಾತಗಳು

**ಶ್ರೀ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ):-**

೨೨೮೭(೨೬೬೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದಲ್ಲಿ ಇತ್ತೀಚೆಗೆ ಆಯಿಲ್ ಟ್ಯಾಂಕರ್ ಮತ್ತು ವಾಟರ್ ಟ್ಯಾಂಕರ್‌ಗಳಿಂದ ಅಪಘಾತಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಈ ಟ್ಯಾಂಕರ್‌ಗಳ ಚಾಲಕರು ಸಂಚಾರಿ ನಿಯಮಗಳನ್ನು ಪಾಲಿಸದೆ, ಸಿಗ್ನಲ್‌ಗಳನ್ನು ಜಂಪ್ ಮಾಡುತ್ತಾ ಪ್ರತಿನಿತ್ಯ ನಗರದಲ್ಲಿ ಹಲವಾರು ಕಡೆ ಅಪಘಾತಗಳಾಗುತ್ತಿದ್ದು, ಇದನ್ನು ನಿಯಂತ್ರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

(ಇ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸರಕು ಸಾಗಾಣಿಕೆಗಳ ವಾಹನಗಳ ಚಲನ-ವಲನಕ್ಕೆ ಸಮಯ ನಿಗದಿಪಡಿಸಿದ್ದರೂ, ಈ ವಾಹನಗಳು ನಿಗದಿತ ಸಮಯಪಾಲನೆ ಮಾಡದೆ ನಿಯಮವನ್ನು ಉಲ್ಲಂಘನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬೆಳಗ್ಗೆ ಸಾರ್ವಜನಿಕರು ಕೆಲಸಕ್ಕೆ ಹೋಗುವ ಸಮಯದಲ್ಲಿ ಈ ಸರಕು ಸಾಗಾಣಿಕೆಯ ವಾಹನಗಳು ಲೀಲಾಜಾಲವಾಗಿ ಓಡಾಡುತ್ತಿದ್ದರೂ ಸಂಚಾರಿ ಪೊಲೀಸರು ಯಾವುದೇ ಕ್ರಮ ಜರುಗಿಸದಿರಲು ಕಾರಣಗಳೇನು ?

## ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿ ಕಛೇರಿಯಲ್ಲಿನ ಕಡತಗಳ ಕಣ್ಮರೆ .

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-**

೨೨೮೮(೨೬೦೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಅರಣ್ಯ, ಪರಿಸರ ಜೀವಿಶಾಸ್ತ್ರ ಇಲಾಖೆಯ " ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ " ಕಛೇರಿಯಲ್ಲಿ ಕೆಲವು ಮುಖ್ಯ ಕಡತಗಳು ಕಣ್ಮರೆಯಾಗಿರುವ ಕುರಿತು ದೂರು ದಾಖಲಾಗಿದೆಯೇ;

(ಆ) ಈ ದೂರನ್ನು ಆಧರಿಸಿ ತೆಗೆದುಕೊಳ್ಳುತ್ತಿರುವ ಕ್ರಮವೇನು; ತನಿಖೆಯು ಯಾವ ಹಂತದಲ್ಲಿದೆ;

(ಇ) ದೂರು ದಾಖಲಿಸಿಕೊಂಡ ದಿನಾಂಕ ಯಾವುದು ?

## ಸೇವಾ ನಿರತ ಸಿಬ್ಬಂದಿಗೆ ಪಿ.ಎಸ್.ಐ. ಹುದ್ದೆಗೆ ನೇಮಕ ಮಾಡುವ ಬಗ್ಗೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-**

೨೨೮೯(೨೫೮೦) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪೊಲೀಸ್ ಇಲಾಖೆಯಲ್ಲಿ ಸೇವಾ ನಿರತ ಸಿಬ್ಬಂದಿಗೆ ಪಿ.ಎಸ್.ಐ. ಹುದ್ದೆಗೆ ನೇಮಕ ಮಾಡಿಕೊಳ್ಳಲು ಇರುವ ನಿಯಮಾವಳಿಗಳು ಏನು ;

(ಆ) ಈ ಹಿಂದೆ ಯಾವಾಗ ಹಾಗೂ ಎಷ್ಟು ಜನರನ್ನು ನೇಮಕ ಮಾಡಲಾಗಿತ್ತು ;

(ಇ) ಸೇವಾ ನಿರತ ಪೊಲೀಸ್ ಸಿಬ್ಬಂದಿಗೆ ಪಿ.ಎಸ್.ಐ. ಹುದ್ದೆಗೆ ವಿಶೇಷ ನೇಮಕಾತಿ ಮಾಡಿಕೊಳ್ಳಲು ಬೇಡಿಕೆ ಇದ್ದು ಸರ್ಕಾರದ ನಿಲುವೇನು ?

## ವಿಜಯಪುರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ.

**ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ):-**

೨೨೯೦(೨೬೦೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಿಜಯಪುರ ಮಹಾನಗರ ಪಾಲಿಕೆಯಾಗಿ ಯಾವಾಗ ಘೋಷಣೆಯಾಯಿತು ;

(ಆ) ಅಂದಿನಿಂದ ಇಲ್ಲಿಯವರೆಗೂ ಒದಗಿಸಿರುವ ಅನುದಾನ ಎಷ್ಟು; (ವಿವರ ನೀಡುವುದು)

(ಇ) ಅನುದಾನದ ಕೊರತೆಯ ಕಾರಣಕ್ಕೆ ರಸ್ತೆ ಅಗಲೀಕರಣದ ಕಾರ್ಯ ಸ್ಥಗಿತಗೊಂಡಿದೆಯೇ ;

(ಈ) ಇಡೀ ನಗರದಲ್ಲಿ ಮಳೆ ನೀರು ಹರಿದು ಹೋಗಲು ಸೂಕ್ತ ಚರಂಡಿ ವ್ಯವಸ್ಥೆ, ಒಳಚರಂಡಿ ವ್ಯವಸ್ಥೆ, ಇತ್ಯಾದಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಕಳೆದ ಒಂದು ವರ್ಷದಲ್ಲಿ ನಡೆದಿರುವ ಮಹಾನಗರ ಪಾಲಿಕೆಯ ಸಭೆಗಳು ಎಷ್ಟು; ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ಏನು; ಅವುಗಳ ಕಾರ್ಯಾನುಷ್ಠಾನದ ವರದಿಯ ಸಂಪೂರ್ಣ ವಿವರ ನೀಡುವುದು ?

## ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

**ಶ್ರೀ ಎಸ್.ವ್ಹಿ. ಸಂಕನೂರ ( ಪದವೀಧರರ ಕ್ಷೇತ್ರ ):-**

೨೭೯೧(೨೬೩೭) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯ ಸರ್ಕಾರದ ಅಡಿಯಲ್ಲಿ ಇರುವ ಒಟ್ಟು ವಿವಿಧ ಇಲಾಖೆಗಳು ಎಷ್ಟು; (ಪಟ್ಟಿ ನೀಡುವುದು)

(ಆ) ವಿವಿಧ ಇಲಾಖೆಗಳಲ್ಲಿ (Cadre-wise) (ಹುದ್ದೆವಾರು) ೨೮.೦೨.೨೦೧೫ರವರೆಗೆ ನಿವೃತ್ತಿ, ನಿಧನ, ರಾಜೀನಾಮೆಗಳಿಂದ ಖಾಲಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; (ಇಲಾಖಾವಾರು, ಹುದ್ದೆವಾರು ವಿವರ ನೀಡುವುದು)

(ಇ) ವಿವಿಧ ಇಲಾಖೆಗಳಲ್ಲಿ ಈಗಾಗಲೇ ತೆರವಾಗಿರುವ ಹುದ್ದೆಗಳನ್ನು ೨೦೧೫-೧೬ನೇ ಸಾಲಿನಲ್ಲಿ (ಎಷ್ಟು ಹುದ್ದೆಗಳನ್ನು ಯಾವಾಗ) ತುಂಬಿಕೊಳ್ಳಲು ನಿರ್ಧರಿಸಲಾಗಿದೆ; ಆಗಿದ್ದಲ್ಲಿ, ಯಾವಾಗ ?

## ಶಾಸಕರುಗಳ ಆಪ್ತ ಸಹಾಯಕರ ವೇತನದ ಬಗ್ಗೆ.

**ಶ್ರೀ ಎಸ್.ವ್ಹಿ. ಸಂಕನೂರ ( ಪದವೀಧರರ ಕ್ಷೇತ್ರ ):-**

೨೭೯೨(೨೫೮೧ & ೨೫೮೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮಾನ್ಯ ಶಾಸಕರುಗಳಿಗೆ ಗುತ್ತಿಗೆ ಆಧಾರದ ಮೇಲೆ ಆಪ್ತ ಸಹಾಯಕರುಗಳನ್ನು ನೇಮಕ ಮಾಡಲು ಇರುವ

ಮಾನದಂಡಗಳೇನು ; ಎಷ್ಟು ಜನರನ್ನು ನೇಮಕ ಮಾಡಿಕೊಳ್ಳಬಹುದು ;

(ಆ) ಎಷ್ಟು ಜನ ಆಪ್ತ ಸಹಾಯಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು) (ಜಿಲ್ಲಾಧಿಕಾರಿ ಕಛೇರಿ ಮೂಲಕ ಗುತ್ತಿಗೆ ಹಾಗೂ ಸಿ.ಆ.ಸು.ಇ ಮೂಲಕ)

(ಇ) ಮಾನ್ಯ ಶಾಸಕರುಗಳ ಆಪ್ತ ಸಹಾಯಕರಿಗೆ ನೀಡುತ್ತಿರುವ ವೇತನದಲ್ಲಿ ತಾರತಮ್ಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಸದರಿ ಆಪ್ತ ಸಹಾಯಕರುಗಳಿಗೆ ಅಧಿವೇಶನದ ಭತ್ಯೆ ನೀಡುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ ;

(ಉ) ಈ ತಾರತಮ್ಯವನ್ನು ಸರಿಪಡಿಸಲು ಸರ್ಕಾರ ಕ್ರಮ ವಹಿಸುವುದೇ ;

(ಊ) ಮಾನ್ಯ ಸಚಿವರ ಕಛೇರಿಯಲ್ಲಿರುವ ಗುತ್ತಿಗೆ ಆಧಾರದ ಆಪ್ತ ಸಹಾಯಕರಿಗೆ ನೀಡುತ್ತಿರುವ ವೇತನದ ವಿವರ ನೀಡುವುದು ಹಾಗೂ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನೀಡುವ ವೇತನದ ವಿವರ ನೀಡುವುದು ?

## ರೇಷ್ಮೆ ಬೆಳೆಗಾರರಿಗೆ ಪ್ರೋತ್ಸಾಹ ಧನ.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-**

೨೨೯೩(೨೬೨೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಬೆಳೆಯ ವಿಸ್ತೀರ್ಣ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ರೇಷ್ಮೆ ಗೂಡಿನ ಉತ್ಪಾದನೆ ಎಷ್ಟು; (ವಿಸ್ತೀರ್ಣವಾರು ವಿವರ ನೀಡುವುದು)

(ಇ) ರೇಷ್ಮೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ರೇಷ್ಮೆ ಗೂಡಿನ ಉತ್ಪಾದಕರಿಗೆ ಸರ್ಕಾರ ನೀಡುವ ಪ್ರೋತ್ಸಾಹ ಧನ ಎಷ್ಟು ;

(ಉ) ರೈತರಿಗೆ ನೀಡಬೇಕಾದ ಪ್ರೋತ್ಸಾಹ ಧನ ಎಷ್ಟು ದಿನಗಳಿಂದ ಬಾಕಿ ಇದೆ ?

## ಹಾಲಿನ ಪ್ರೋತ್ಸಾಹ ಧನ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-**

೨೨೯೪(೨೬೨೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕರ್ನಾಟಕ ರಾಜ್ಯದಲ್ಲಿ ಪ್ರತಿನಿತ್ಯ ಉತ್ಪಾದನೆ ಆಗುವ ಹಾಲಿನ ಪ್ರಮಾಣ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರೈತರಿಗೆ ನೀಡಬೇಕಾಗಿರುವ ಪ್ರತಿ ಲೀ. ಗೆ ೪ ರೂ ಪ್ರೋತ್ಸಾಹಧನ ಸುಮಾರು ೬ ತಿಂಗಳಿನಿಂದ ಬಾಕಿ ಇರಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಇದಕ್ಕೆ ಕಾರಣಗಳೇನು ;

(ಇ) ಹಾಲು ಉತ್ಪಾದಕರಿಂದ ಕೊಬ್ಬಿನಾಂಶ ಆಧಾರಿತ ದರದಲ್ಲಿ ಹಾಲನ್ನು ಖರೀದಿಸಲು ಸರ್ಕಾರ ಯೋಚಿಸಿರುವುದು ನಿಜವೇ ; ಇದರ ರೂಪುರೇಷೆಗಳೇನು ; ಇದರಿಂದ ರೈತರಿಗೆ ಆಗುವ ತೊಂದರೆಯೇನು ?

## ಟೆಂಡರ್ ಶ್ಯೂರ್ ಕಾಮಗಾರಿಗಳ ಕುರಿತು.

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):-**

೨೨೫೫ (೨೬೨೩) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದಲ್ಲಿ ಕೈಗೆತ್ತಿಕೊಂಡಿರುವ ಟೆಂಡರ್ ಶ್ಯೂರ್ (Tender sure) ಕಾಮಗಾರಿಗಳ ಸಂಖ್ಯೆ ಎಷ್ಟು ; ಅವುಗಳು ಯಾವುವು ;

(ಆ) ಸದರಿ ಕಾಮಗಾರಿಗಳಿಂದ ಬೆಂಗಳೂರು ನಗರಕ್ಕೆ ಆಗುವ ಉಪಯೋಗವೇನು ;

(ಇ) ಇದರಿಂದ ಹಾಲಿ ರಸ್ತೆಗಳನ್ನು, ಫುಟ್‌ಪಾತ್‌ಗಳನ್ನು ಅಗೆದು ಸಾರ್ವಜನಿಕರಿಗೆ ತೊಂದರೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಸರಗಳ್ಳತನ ಪ್ರಕರಣಗಳ ಕುರಿತು

**ಶ್ರೀ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) :-**

೨೨೯೬ (೨೬೨೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ನಡೆದ ಸರಗಳ್ಳತನ ಪ್ರಕರಣಗಳೆಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ಸರಗಳ್ಳತನ ಇಷ್ಟು ಪ್ರಮಾಣದಲ್ಲಿ ನಡೆಯಲು ಕಾರಣಗಳೇನು ;

(ಇ) ಸರಗಳ್ಳತನ ತಡೆಯಲು ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಗಳೇನು ;

(ಈ) ಎಷ್ಟು ಜನ ಸರಗಳ್ಳರಿಗೆ ಶಿಕ್ಷೆಯಾಗಿದೆ ; (ಪ್ರಕರಣವಾರು ಶಿಕ್ಷೆಯ ಪ್ರಮಾಣದ ವಿವರ ನೀಡುವುದು)

(ಉ) ಈ ಶಿಕ್ಷೆಯ ಪ್ರಮಾಣ ಹೆಚ್ಚಿಸಲು ಸರ್ಕಾರ ಕಾನೂನು ತಿದ್ದುಪಡಿ ಮಾಡಲು ಚಿಂತಿಸಿದೆಯೇ ;

(ಊ) ಈ ಸರಗಳ್ಳತನ ತಡೆಯಲು ಆಯಾ ಸಂಬಂಧಿತ ಪೊಲೀಸ್ ಠಾಣೆಯ ಯಾವ ಅಧಿಕಾರಿಗಳನ್ನು ಹೊಣೆ ಮಾಡಲಾಗುತ್ತಿದೆ ?

# ಸ್ಕೈವಾಕ್ ನಿರ್ಮಾಣ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೨೫೭೭ (೨೫೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರ ವ್ಯಾಪ್ತಿಯಲ್ಲಿ ಕಳೆದ ೩ ವರ್ಷದಲ್ಲಿ ರಸ್ತೆ ದಾಟುವ ಸಂದರ್ಭದಲ್ಲಿ ವಾಹನ ಅಪಘಾತಕ್ಕೆ ಒಳಗಾಗಿ ಸಾವಿಗೊಳಗಾದವರ ಸಂಖ್ಯೆ ಎಷ್ಟು ; ಇವರಲ್ಲಿ ಹೆಂಗಸರು, ಗಂಡಸರು ಹಾಗೂ ಮಕ್ಕಳ ಸಂಖ್ಯೆ ಎಷ್ಟು ; ತೀವ್ರ ಪೆಟ್ಟಾಗಿ ಅಂಗವೈಕಲ್ಯತೆಗೊಳಗಾಗಿರುವವರ ಸಂಖ್ಯೆ ಎಷ್ಟು ;

(ಆ) ಸಾವನ್ನಪ್ಪಿದವರಿಗೆ ಸರ್ಕಾರ ನೀಡಿರುವ ಪರಿಹಾರವೆಷ್ಟು ; (ಹೆಸರು ಸಮೇತ ವಿವರ ಒದಗಿಸುವುದು) ಅಂಗವೈಕಲ್ಯತೆಯುಂಟಾದವರ ಪೈಕಿ ಎಷ್ಟು ಜನರು ಓಡಾಡಲಾಗದೆ ಉದ್ಯೋಗ ಮಾಡಲಾಗದೆ ಜೀವನ ನಿರ್ವಹಣೆಗೆ ತೊಂದರೆ ಪಡುತ್ತಿದ್ದಾರೆ ; (ಅವರುಗಳ ವಿವರ ಒದಗಿಸುವುದು) ಇವರುಗಳ ಜೀವನ ನಿರ್ವಹಣೆಗೆ ಸರ್ಕಾರ ಜೀವನಾಂಶ ನೀಡಲು ಯೋಚಿಸುವುದೇ ; (ವಿವರ ಒದಗಿಸುವುದು)

(ಇ) ಈ ರೀತಿ ಅಪಘಾತಗಳು ನಡೆಯುತ್ತಿದ್ದರೂ ಅವಶ್ಯ ಇರುವ ಕಡೆ ಸ್ಕೈವಾಕ್ ನಿರ್ಮಿಸದೆ, ಅವಶ್ಯಕತೆ ಇಲ್ಲದೆ ದಿನಕ್ಕೆ ೧೦ ಜನರೂ ಅದನ್ನು ಉಪಯೋಗಿಸದಿರುವ ಉದಾಹರಣೆಗೆ ಹೈಗ್ರೌಂಡ್ಸ್ ಹತ್ತಿರ, ಮೇಕ್ರಿ ಸರ್ಕಲ್, ಹೆಚ್.ಎಂ.ಟಿ. ಭವನ

ಹತ್ತಿರ ಸ್ಕೈವಾಕ್ ನಿರ್ಮಿಸಲು ಅನುಮತಿ ನೀಡಿರುವ ಅಧಿಕಾರಿ ಯಾರು ;

(ಈ) ಇನ್ನು ಅವಶ್ಯ ಇರುವ ಎಲ್ಲೆಲ್ಲಿ ಎಷ್ಟು ಅವಧಿಯೊಳಗೆ ಸ್ಕೈವಾಕ್ ನಿರ್ಮಿಸಲು ನಿರ್ಧರಿಸಲಾಗಿದೆ ? (ವಿವರ ಒದಗಿಸುವುದು)

## ಮೈಸೂರು ಕಾಗದ ಕಾರ್ಖಾನೆಯ ಪುನಶ್ಚೇತನ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೨೯೮ (೨೫೫೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಭದ್ರಾವತಿಯ ಮೈಸೂರು ಕಾಗದ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿರುವುದು ನಿಜವೇ ; ನಿಜವಾಗಿದ್ದಲ್ಲಿ ನಷ್ಟದ ವಿವರ ನೀಡುವುದು ;

(ಆ) ಸದರಿ ಕಾರ್ಖಾನೆಯಲ್ಲಿ ಪ್ರಸ್ತುತ ಕಾಗದ ಉತ್ಪಾದಿಸಲಾಗುತ್ತಿದೆಯೇ ; ಉತ್ಪಾದಿಸಲಾಗುತ್ತಿದ್ದಲ್ಲಿ ಎಷ್ಟು ಪ್ರಮಾಣ ಉತ್ಪಾದಿಸಲಾಗುತ್ತಿದೆ ; ಉತ್ಪಾದನೆಯ ಪ್ರಮಾಣ ಎಷ್ಟು ಕಡಿಮೆಯಾಗಿದೆ ; ಇದಕ್ಕೆ ಕಾರಣವೇನು ;

(ಇ) ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ವೇತನವನ್ನು ಕಾಲಕಾಲಕ್ಕೆ ನೀಡಲಾಗುತ್ತಿದೆಯೇ ; ಮುಂದೆಯೂ ವೇತನವನ್ನು ನೀಡಲು ಸಾಧ್ಯವೇ ;

(ಈ) ಸದರಿ ಕಾರ್ಖಾನೆಯು ಪುನಶ್ಚೇತನಕ್ಕೆ ಸರ್ಕಾರವು ಮುಂದಾಗುವುದೇ ;

(ಉ) ಹಾಗಿದ್ದಲ್ಲಿ, ಪುನಶ್ಚೇತನಗೊಳಿಸಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗುವುದು ?

## ನಂದಿನಿ ಬಡಾವಣೆಯ ನಿವೇಶನಗಳು

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :-**

೨೨೯ (೨೫೯೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ನಂದಿನಿ ಬಡಾವಣೆಯಲ್ಲಿನ ಲಗ್ಗೆರೆ ಸರ್ವೆ ನಂ. ೧೩,೧೪,೧೫ ರಲ್ಲಿ ನಿವೇಶನ ಸಂಖ್ಯೆ ೬೧೩ ಮತ್ತು ೬೧೪ ನಿವೇಶನಗಳು ಯಾರಿಗೆ ಸೇರುತ್ತವೆ ; (ಇವುಗಳ ವಿಸ್ತೀರ್ಣ ಮತ್ತು ಇತರೆ ವಿವರ ನೀಡುವುದು) ಇವೆರಡರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸುಪರ್ದಿಯಲ್ಲಿರುವ ನಿವೇಶನ ಯಾವುವು ; ಸದರಿ ಬಿಡಿಎ ಗೆ ಸೇರಿರುವ ನಿವೇಶನದಲ್ಲಿ ಈ ಹಿಂದೆ ಅನಧಿಕೃತ ಕಟ್ಟಡ ನಿರ್ಮಾಣವಾಗಿ ಅದನ್ನು ೨೦೧೩ರಲ್ಲಿ ತೆರವುಗೊಳಿಸಿರುವುದು ನಿಜವೇ ; ಈ ಕುರಿತು ತೆರವುಗೊಳಿಸಲು ಕಾರಣವೇನು ; (ಇತರೆ ವಿವರ ನೀಡುವುದು)

(ಆ) ಸದರಿ ನಿವೇಶನವನ್ನು ಡಿಸೆಂಬರ್ ೨೦೧೩ರಲ್ಲಿ E-Auction ನಲ್ಲಿ ಸೇರಿಸಿ ನಂತರ ಹಿಂಪಡೆದಿರುವುದು ನಿಜವೇ ; ಆ ರೀತಿ ಹಿಂಪಡೆಯಲು ಕಾರಣವೇನು ; (ವಿವರ ನೀಡುವುದು)

(ಇ) ಈಗ ತೆರವುಗೊಳಿಸಿರುವ ಸದರಿ ಸ್ಥಳದಲ್ಲಿಯೇ ಮತ್ತೊಮ್ಮೆ ಅನಧಿಕೃತ ಕಟ್ಟಡ ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ

F-4 B/B

ಬಂದಿದೆಯೇ ; ಈ ಸಂಬಂಧ ಸ್ಥಳ ಪರೀಕ್ಷೆ ಮತ್ತು ದಾಖಲೆಗಳ ಪರೀಕ್ಷೆ ನಡೆಸಿ ತಪ್ಪಿದ್ದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದೇ ; ಕ್ರಮ ಕೈಗೊಳ್ಳಲು ಬೇಕಾಗುವ ಕಾಲಮಿತಿ ಏನು ?

## ಅಕ್ರಮ ಅದಿರು ಸಾಗಣೆ

**ಶ್ರೀ ರಾಮಚಂದ್ರಗೌಡ (ಪದವೀಧರರ ಕ್ಷೇತ್ರ) :–**

೨೩೦೦ (೨೫೯೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಕ್ರಮ ಅದಿರು ಸಾಗಣೆ ಮತ್ತು ಅರಣ್ಯ ಅಪರಾಧ ಕಾಯಿದೆಯಡಿ ಮೊಕದ್ದಮೆ ಎದುರಿಸುತ್ತಿರುವ ಕಂಪನಿಗಳು ಯಾವುವು ; ಬೆಲೆ ಏರಿಕೆಯಿಂದ ವಿದೇಶಕ್ಕೆ ಅಕ್ರಮವಾಗಿ ಅದಿರು ರಫ್ತು ಮಾಡಿರುವ ಆರೋಪ ಎದುರಿಸುತ್ತಿರುವ ಕಂಪನಿಗಳಿದ್ದಲ್ಲಿ ಪ್ರತ್ಯೇಕ ವಿವರ ನೀಡುವುದು ;

(ಆ) ಚಿತ್ರದುರ್ಗ ತಾಲ್ಲೂಕಿನ ಹೊಳಲ್ಕೆರೆ ವಲಯದಲ್ಲಿರುವ ನೀರ್ಥಡಿ ಮೀಸಲು ಅರಣ್ಯದಲ್ಲಿ ಗಣಿಗಾರಿಕೆ ನಡೆಸಲು ಗುತ್ತಿಗೆ ನವೀಕರಣ ಮಾಡಿಕೊಡಲಾಗಿದೆಯೇ ; ಹೌದಾದಲ್ಲಿ ವಿವರ ನೀಡುವುದು ;

(ಇ) ಅಕ್ರಮ ಗಣಿಗಾರಿಕೆ ಆರೋಪ ಎದುರಿಸುತ್ತಿರುವ ಕಂಪನಿಗಳಿಗೆ ಇತ್ತೀಚೆಗೆ ಗಣಿಗಾರಿಕೆ ನಡೆಸಲು ಗುತ್ತಿಗೆ ನವೀಕರಣ

ಮಾಡಿಕೊಡಲಾಗಿದೆಯೇ ; ಅನುಮೋದನೆ ನೀಡುವಂತೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ ; ಹೌದಾದಲ್ಲಿ ಕಾರಣವೇನು ? (ವಿವರ ನೀಡುವುದು)

## ಭೀಮನಕೊಲ್ಲಿಯಲ್ಲಿ ಯಾತ್ರಿ ನಿವಾಸಕ್ಕೆ ಅನುದಾನ ಬಿಡುಗಡೆ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ ) :-**

೨೩೦೧ (೨೬೧೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಜಿಲ್ಲೆ, ಹೆಚ್.ಡಿ ಕೋಟೆ ತಾಲ್ಲೂಕಿನ ಭೀಮನಕೊಲ್ಲಿಯ ಶ್ರೀ ಮಹದೇಶ್ವರಸ್ವಾಮಿ ದೇವಸ್ಥಾನದ ಆವರಣದಲ್ಲಿ ಯಾತ್ರಿ ನಿವಾಸ ಕಾಮಗಾರಿಗಾಗಿ ರೂ.೧೧೦.೭೦ ಲಕ್ಷಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಈಗಾಗಲೇ ರೂ.೫೦.೦೦ ಲಕ್ಷಗಳನ್ನು ಬಿಡುಗಡೆಗೊಳಿಸಿದ್ದು, ಉಳಿಕೆ ಅನುದಾನ ಬಿಡುಗಡೆಯಾಗದ ಹಿನ್ನೆಲೆಯಲ್ಲಿ ಕಾಮಗಾರಿ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಉಳಿಕೆ ಮೊತ್ತ ಬಿಡುಗಡೆಗೊಳಿಸುವಲ್ಲಿನ ವಿಳಂಬಕ್ಕೆ ಕಾರಣಗಳೇನು;

(ಇ) ಯಾವ ಕಾಲಮಿತಿಯಲ್ಲಿ ಉಳಿಕೆ ಮೊತ್ತವನ್ನು ಬಿಡುಗಡೆಗೊಳಿಸಲಾಗುವುದು?

# ಕೆಲವು ಪೊಲೀಸ್ ಅಧಿಕಾರಿಗಳನ್ನು ಪಿ.ಇ.ಬಿ ನಡವಳಿಗೆ ವಿರುದ್ಧವಾಗಿ ಎಕ್ಸಿಕ್ಯೂಟಿವ್ ಹುದ್ದೆ

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ ):–

೨೩೦೨ (೨೬೧೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕ್ರಿಮಿನಲ್ ಕೇಸು, ಇಲಾಖಾ ವಿಚಾರಣೆ ಮತ್ತು ಚಾಲ್ತಿ ಶಿಕ್ಷೆ ಬಾಕಿ ಇರುವ ಪೊಲೀಸ್ ಅಧಿಕಾರಿಗಳನ್ನು ಪಿ.ಇ.ಬಿ (ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಬೋರ್ಡ್) ನಡವಳಿಗೆ ವಿರುದ್ಧವಾಗಿ ಕಾರ್ಯಕಾರಿಣಿ (ಎಕ್ಸಿಕ್ಯೂಟಿವ್) ಹುದ್ದೆಗಳಿಗೆ ನೇಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಾದರೆ, ಯಾವ ಯಾವ ಪೊಲೀಸ್ ಅಧಿಕಾರಿಗಳನ್ನು ಪಿ.ಇ.ಬಿ. ನಡವಳಿಗೆ ವಿರುದ್ಧವಾಗಿ ಕಾರ್ಯಕಾರಿಣಿ ಹುದ್ದೆಗಳಲ್ಲಿ ಮುಂದುವರೆಸಲಾಗಿದೆ ; (ವಿವರ ಒದಗಿಸುವುದು)

(ಇ) ಪಿ.ಇ.ಬಿ. ನಡವಳಿಗಳು ಯಾವ್ಯಾವ ನೌಕರರಿಗೆ/ಅಧಿಕಾರಿಗಳಿಗೆ ಅನ್ವಯಿಸುತ್ತದೆ ;

(ಈ) ಈ ರೀತಿ ಪಿ.ಇ.ಬಿ. ನಡವಳಿಗೆ ವಿರುದ್ಧವಾಗಿ ಕೆಲವು ಪೊಲೀಸ್ ಅಧಿಕಾರಿಗಳನ್ನು ಕಾರ್ಯಕಾರಿಣಿ ಹುದ್ದೆಗಳಲ್ಲಿ ಮುಂದುವರೆಸದಿರುವುದಕ್ಕೆ ನಿರ್ದಿಷ್ಟ ಕಾರಣಗಳೇನು ?

## ನಿವೃತ್ತ ಆರಕ್ಷಕರಿಗೆ ಸವಲತ್ತು ನೀಡಿಕೆ ಬಗ್ಗೆ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ ) :–**

೨೩೦೩ (೨೬೧೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಿವೃತ್ತ ಪೊಲೀಸರು ಹಾಗೂ ಅಧಿಕಾರಿಗಳಿಗೆ ಯಾವುದೇ ವೈದ್ಯಕೀಯ ಸೌಲಭ್ಯ, ಪೊಲೀಸ್ ಕ್ಯಾಂಟೀನ್, ಉಚಿತ ಪಡಿತರ ಆಹಾರಧಾನ್ಯಗಳ ವಿತರಣಾ ಸೌಲಭ್ಯ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಸವಲತ್ತಿಗಾಗಿ ಚಳುವಳಿ/ಸಂಘದ ಮೂಲಕ ವಿಶ್ರಾಂತ ನೌಕರರು ಮನವಿ ಸಲ್ಲಿಸಿದ್ದಾರೆಯೇ;

(ಇ) ಸದರಿಯವರ ಮನವಿ ಮೇರೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

(ಈ) ಸದರಿ ಸವಲತ್ತುಗಳನ್ನು ನೀಡುವ ನಿಟ್ಟಿನಲ್ಲಿ ಸರ್ಕಾರ ಚಿಂತಿಸಿದೆಯೇ ?

## ದೇವಸ್ಥಾನದ ಜೀರ್ಣೋದ್ಧಾರ ಕಾಮಗಾರಿ

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ ) :–**

೨೩೦೪ (೨೬೧೨) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕು ಕಿರುಗಾವಲು ಹೋಬಳಿಯ ಬೆಂಡರವಾಡಿ ದೇಶಹಳ್ಳಿ ರಸ್ತೆಯ ಕೆರೆಯ ಪಕ್ಕದಲ್ಲಿರುವ ಪುರಾತನ

ಹನುಮಂತರಾಯನ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಬಿಡುಗಡೆಯಾದ ಹಣವೆಷ್ಟು ; ಇದುವರೆಗೆ ಖರ್ಚಾಗಿರುವ ಹಣವೆಷ್ಟು ;

(ಆ) ಸದರಿ ದೇವಸ್ಥಾನದ ಜೀರ್ಣೋದ್ಧಾರದ ಕಾಮಗಾರಿಯು ಅರ್ಧಕ್ಕೆ ನಿಂತಿರಲು ಕಾರಣವೇನು ;

(ಇ) ಈ ಕಾಮಗಾರಿಯ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ; ಎಷ್ಟು ಮೊತ್ತಕ್ಕೆ ವಹಿಸಲಾಗಿದೆ ;

(ಈ) ದೇವಸ್ಥಾನದ ಕಾಮಗಾರಿಯು ಪೂರ್ಣಗೊಳ್ಳುವುದು ಯಾವಾಗ ?

## ಬೆಂಗಳೂರು ವ್ಯಾಪ್ತಿಯ ಹಸಿರು ಹಾಗೂ ಹಳದಿ ವಲಯ ಕುರಿತು

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೩೦೫ (೨೬೩೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇರುವ ಹಸಿರು ವಲಯ, ಹಳದಿ ವಲಯ ಹಾಗೂ ಸಿ–ಜೋನ್‌ನ ಒಟ್ಟು ವಿಸ್ತೀರ್ಣ ಎಷ್ಟು ;

(ಆ) ಹಸಿರು ವಲಯದಲ್ಲಿ ಈಗಾಗಲೇ ನಿವೇಶನಗಳ ಲೇಔಟ್ ನಿರ್ಮಿಸಿದ್ದರೆ ಅವುಗಳನ್ನು ಸಕ್ರಮಗೊಳಿಸಲು ಸರ್ಕಾರ ನಿರ್ಧರಿಸಿದೆಯೇ ;

(ಇ) ಇನ್ನು ಮುಂದೆ ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಯಾವ ಯಾವ ವಲಯಗಳನ್ನು ಘೋಷಿಸಲಾಗುವುದು ?

## ಬೃ.ಬೆ.ಮ.ಪಾ.ಯಲ್ಲಿ ನಾಪತ್ತೆಯಾಗಿರುವ ಕಡತಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೩೦೬ (೨೬೩೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃ.ಬೆ.ಮ.ಪಾ.ಯಲ್ಲಿ ನಾಪತ್ತೆಯಾಗಿರುವ ಒಟ್ಟು ಕಡತಗಳ ಸಂಖ್ಯೆ ಎಷ್ಟು ;

(ಆ) ನಾಪತ್ತೆಯಾದ ಕಡತಗಳಲ್ಲಿ ಜಾಹೀರಾತು ವಿಭಾಗಕ್ಕೆ ಸಂಬಂಧಿಸಿದ ಕಡತಗಳ ಸಂಖ್ಯೆ ಎಷ್ಟು ;

(ಇ) ಕಡತಗಳು ನಾಪತ್ತೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಕುರಿತು ಉಪ ಲೋಕಾಯುಕ್ತರು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ಕಡತ ನಾಪತ್ತೆಯಾದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಆಯವ್ಯಯದಲ್ಲಿ ಘೋಷಿಸಿದ ಯೋಜನೆಗಳ ಅನುಷ್ಠಾನದ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೩೦೭ (೨೬೩೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೪–೧೫ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ ಯೋಜನೆಗಳಲ್ಲಿ ಅನುಷ್ಠಾನಗೊಳ್ಳದಿರುವ ಯೋಜನೆಗಳು ಯಾವುವು ;

(ಆ) ಬಜೆಟ್‌ನಲ್ಲಿ ೯೪೦೫ ಪ್ರಾಥಮಿಕ ಶಾಲಾ ಶಿಕ್ಷಕರನ್ನು ೧೧೩೭ ಪ್ರೌಢಶಾಲಾ ಶಿಕ್ಷಕರನ್ನು ಹಾಗೂ ೧೧೩೦ ಪದವಿಪೂರ್ವ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುವುದಾಗಿ ಘೋಷಿಸಿರುವುದು ನಿಜವೇ ;

(ಇ) ಹಾಗಿದ್ದಲ್ಲಿ, ಈ ಘೋಷಣೆ ಅನ್ವಯ ಶಿಕ್ಷಕರ ನೇಮಕಾತಿಯಾಗದಿರಲು ಕಾರಣಗಳೇನು ;

(ಈ) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣಾ ಅಭಿಯಾನ ಯೋಜನೆಯಡಿ ಹೈದರಾಬಾದ್ ಕರ್ನಾಟಕ ಭಾಗದ ೧೦೦ ಶಾಲೆಗಳನ್ನು ಉನ್ನತೀಕರಣ ಮಾಡುವ ಯೋಜನೆಗಳು ಅನುಷ್ಠಾನವಾಗದಿರಲು ಕಾರಣಗಳೇನು ;

(ಉ) ೩೦ ವಿಜ್ಞಾನ ಕಾಲೇಜುಗಳಿಗೆ ತಲಾ ೨ ಕೋಟಿ ಅನುದಾನವನ್ನು ಆಯವ್ಯಯದಲ್ಲಿ ಘೋಷಿಸಿದ್ದು, ಅನುಷ್ಠಾನಗೊಳ್ಳದಿರಲು ಕಾರಣಗಳೇನು ?

## ಬೃ.ಬೆ.ಮ.ಪಾ. ರಸ್ತೆಗಳ ಇತಿಹಾಸ ದಾಖಲಿಸುವ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :–**

೨೩೦೮ (೨೬೩೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃ.ಬೆ.ಮ.ಪಾ. ರಸ್ತೆಗಳ ಅಭಿವೃದ್ಧಿ ಹಾಗೂ ದುರಸ್ತಿಗೆ ಕಳೆದ ೫ ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ ;

(ಆ) ಈ ರಸ್ತೆಗಳ ಅಭಿವೃದ್ಧಿ ನಿರ್ವಹಣೆ ಹಾಗೂ ದುರಸ್ತಿ ಕುರಿತು ಇತಿಹಾಸ ದಾಖಲಿಸುವ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಲಾಗಿದೆಯೇ ;

(ಇ) ಅಭಿವೃದ್ಧಿಪಡಿಸಿದ್ದಲ್ಲಿ ಈ ಸಾಫ್ಟ್‌ವೇರ್‌ನ್ನು ಅಧಿಕಾರಿಗಳು ಹಾಗೂ ಅಭಿಯಂತರರು ಉಪಯೋಗಿಸುತ್ತಿದ್ದಾರೆಯೇ ;

(ಈ) ಬೃ.ಬೆ.ಮ.ಪಾ. ವ್ಯಾಪ್ತಿಯ ರಸ್ತೆಗಳ ಇತಿಹಾಸ ದಾಖಲೆಗಳನ್ನು ಇಡಲಾಗಿದೆಯೇ ?

## ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನಿವೇಶನಗಳ ಬಗ್ಗೆ

**ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ (ಪದವೀಧರರ ಕ್ಷೇತ್ರ) :-**

೨೩೦೯ (೨೬೩೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅಭಿವೃದ್ಧಿಪಡಿಸಿದ ಟೌನ್‌ಶಿಪ್‌ಗಳಾವುವು ;

(ಆ) ಈ ಟೌನ್‌ಶಿಪ್‌ಗಳಲ್ಲಿ ರಚಿಸಲಾದ ಕೈಗಾರಿಕಾ ನಿವೇಶನಗಳ ಸಂಖ್ಯೆ ಎಷ್ಟು ;

(ಇ) ಈ ನಿವೇಶನಗಳಲ್ಲಿ ಕೈಗಾರಿಕೋದ್ಯಮಿಗಳಿಗೆ ಹಂಚಿಕೆ ಮಾಡಿದ ನಿವೇಶನಗಳ ಸಂಖ್ಯೆ ಎಷ್ಟು ; (ಟೌನ್‌ಶಿಪ್‌ವಾರು ವಿವರವಾದ ಮಾಹಿತಿ ನೀಡುವುದು)

(ಈ) ಹಂಚಬೇಕಾದ ನಿವೇಶನಗಳ ಸಂಖ್ಯೆ ಎಷ್ಟು ? (ಟೌನ್‌ಶಿಪ್‌ವಾರು ವಿವರವಾದ ಮಾಹಿತಿ ನೀಡುವುದು)

## ಶಾಸಕರ ಆಪ್ತ ಸಹಾಯಕರುಗಳಿಗೆ ವೇತನ ಹಾಗೂ ಭತ್ಯೆ ನೀಡುವ ಕುರಿತು

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೩೧೦ (೨೬೯೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರಿ ಸಚಿವಾಲಯಗಳಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯಿಂದ ಗುತ್ತಿಗೆ ಆಧಾರದ ಮೇಲೆ ಪದವಿ ಪಡೆದು ಕಾರ್ಯನಿರ್ವಹಿಸುತ್ತಿರುವವರಿಗೆ ರೂ. ೧೬,೦೦೦/-ವೇತನ ನೀಡುತ್ತಿದ್ದು, ಅದೇ ಮಾನ್ಯ ಶಾಸಕರ ಆಪ್ತ ಸಹಾಯಕರಿಗೆ ರೂ. ೧೪,೫೫೦/- ವೇತನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ರೀತಿ ವೇತನ ತಾರತಮ್ಯ ಹಾಗೂ ವೇತನ ಪಾವತಿಸುವಲ್ಲಿ ವಿಳಂಬ ಮಾಡುತ್ತಿರಲು ಕಾರಣವೇನು ;

(ಆ) ಗುತ್ತಿಗೆ ಆಧಾರದ ಮೇಲೆ ಮಾನ್ಯ ಸಚಿವರ ಮತ್ತು ಶಾಸಕರುಗಳ ಆಪ್ತ ಸಹಾಯಕರುಗಳಿಗೆ ವೈದ್ಯಕೀಯ ಕಾರಣದ ಮೇಲೆ ವೆಚ್ಚ ಮಾಡಲಾದ ಮೊತ್ತವನ್ನು ಮರುಪಾವತಿಸುವ ಸೌಲಭ್ಯವಿದೆಯೇ ;

(ಇ) ಸದರಿ ಆಪ್ತ ಸಹಾಯಕರುಗಳನ್ನು ಸರ್ಕಾರದಿಂದ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಂಡಿರುವುದರಿಂದ, ಸದರಿ ನೌಕರರಿಗೆ ಅವರ ಗುತ್ತಿಗೆ ಅವಧಿಯವರೆಗೆ ರಾಜ್ಯ ಸರ್ಕಾರಿ ನೌಕರರಿಗೆ ನೀಡುವಂತೆ ವೈದ್ಯಕೀಯ ಭತ್ಯೆ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?

## ಪೋಲಿಸ್ ಇಲಾಖೆಯಲ್ಲಿ ಅಲ್ಪಸಂಖ್ಯಾತರ ನೇಮಕಾತಿ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೩೧೧ (೨೬೨೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಳೆದ ಮೂರು ವರ್ಷಗಳಲ್ಲಿ ಪೋಲಿಸ್ ಇಲಾಖೆಯಲ್ಲಿ ವಿವಿಧ ವೃಂದಗಳಿಗೆ ನೇಮಕಾತಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಸದರಿ ನೇಮಕಾತಿಯಲ್ಲಿ ಆಯ್ಕೆಯಾಗಿರುವ ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಅಭ್ಯರ್ಥಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಇ) ಸದರಿ ನೇಮಕಾತಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳಲ್ಲಿ ಸಾಮಾನ್ಯ ಅರ್ಹತೆ; ಮೀಸಲಾತಿಯಡಿಯಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಅಭ್ಯರ್ಥಿಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ಆಯವ್ಯಯದಲ್ಲಿ ಘೋಷಿಸಿದ ಯೋಜನೆಗಳ ಅನುಷ್ಠಾನ ಬಗ್ಗೆ

**ಶ್ರೀ ಸಯದ್ ಮುಧೀರ್ ಆಗಾ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೩೧೨ (೨೬೨೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೧೪-೧೫ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದ ಯೋಜನೆಗಳ (ಪ್ಯಾರಾ) ಸಂಖ್ಯೆ ಎಷ್ಟು ; (ಇಲಾಖಾವಾರು ವಿವರ ನೀಡುವುದು)

(ಆ) ಸದರಿ ಆಯವ್ಯಯದಲ್ಲಿ ಘೋಷಣೆಯಾದ ಯೋಜನೆಗಳು (ಪ್ಯಾರಾ) ಜಾರಿಯಾದ ಮತ್ತು ಹೊರಡಿಸಲಾದ ಸರ್ಕಾರಿ ಆದೇಶಗಳ ಇಲಾಖಾವಾರು ವಿವರ ನೀಡುವುದು ;

(ಇ) ಘೋಷಣೆಯಾದ ಯೋಜನೆ (ಪ್ಯಾರಾ)ಗಳ ಪೈಕಿ ಜಾರಿಗೆ ಬಾರದೇ ಇರುವ ಯೋಜನೆಗಳ ಸಂಖ್ಯೆ ಎಷ್ಟು; ಅನುಷ್ಠಾನಗೊಳಿಸದೆ ಇರಲು ಕಾರಣವೇನು ? (ಇಲಾಖಾವಾರು ವಿವರ ನೀಡುವುದು)

## ಅದಿರು ಗಣಿ ಗುತ್ತಿಗೆ ನವೀಕರಣ ರದ್ದುಪಡಿಸುವ ಬಗ್ಗೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೧೩ (೨೬೨೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅದಿರು ಗಣಿ ಗುತ್ತಿಗೆ ನವೀಕರಣಕ್ಕಾಗಿ ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ಆ ಪೈಕಿ ಎಷ್ಟು ಅರ್ಜಿಗಳಿಗೆ ಅನುಮೋದನೆ ನೀಡಲಾಗಿದೆ; ಅವು ಯಾವುವು; ಅವುಗಳ ಕಾರ್ಯಾಚರಣೆ ಸ್ಥಳ ಎಲ್ಲಿ ; (ಅರ್ಜಿ ಸಲ್ಲಿಸಲಾದ ದಿನಾಂಕ ಸಹಿತ ವಿವರ ನೀಡುವುದು)

(ಇ) ಅನುಮೋದನೆ ನೀಡಲಾದ ಅರ್ಜಿಗಳಲ್ಲಿನ ಕಂಪನಿ ಮೇಲೆ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸಂಸ್ಥೆಗಳಿಂದ ತನಿಖೆ ನಡೆಯುತ್ತಿದೆಯೇ ; ಅವು ಯಾವುವು ; (ಕಂಪನಿವಾರು ವಿಷಯವಾರು ಸಂಸ್ಥೆಯ ತನಿಖಾ ವಿವರ ನೀಡುವುದು)

(ಈ) ಸುಪ್ರೀಂ ಕೋರ್ಟ್ ಆದೇಶ ಮತ್ತು ಕೇಂದ್ರ ಸರ್ಕಾರದ ಸುಗ್ರೀವಾಜ್ಞೆಗಳಲ್ಲಿ "ಗಣಿಗಳನ್ನು ಹರಾಜು ಮೂಲಕವೇ ಗುತ್ತಿಗೆ ನೀಡುವುದು" ಎಂದು ಇದ್ದರೂ ೮ ಗಣಿ ಕಂಪನಿಗಳ ಗುತ್ತಿಗೆ ನವೀಕರಿಸಿದ್ದು ನಿಜವೇ ;

(ಉ) ಗಣಿ ಗುತ್ತಿಗೆ ನವೀಕರಣಕ್ಕಾಗಿ ಅರ್ಜಿ ಸಲ್ಲಿಸದೇ ಅನುಮೋದನೆ ಪಡೆದ ಕಂಪನಿಗಳಾವುವು ;

(ಊ) ಈ ಗಣಿ ಗುತ್ತಿಗೆ ನವೀಕರಣದಲ್ಲಿ ಸುಪ್ರೀಂ ಕೋರ್ಟ್ ಆದೇಶ ಮತ್ತು ಕೇಂದ್ರ ಸರ್ಕಾರದ ಸುಗ್ರೀವಾಜ್ಞೆ ಉಲ್ಲಂಘನೆಯಾಗಿರುವುದರಿಂದ ೨೦೧೫ನೇ ಜನವರಿ ೧೨ ಮತ್ತು ೧೯ರ ಅನುಮೋದನೆ ಆದೇಶವನ್ನು ರದ್ದುಪಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಬಳ್ಳಾರಿ ಮಹಾನಗರ ಪಾಲಿಕೆ ನರ್ಮ್ ಯೋಜನೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೧೪ (೨೬೬೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) 'ನರ್ಮ್ ಯೋಜನೆ' ಯಡಿ ಬಳ್ಳಾರಿ ಮಹಾನಗರ ಪಾಲಿಕೆಗೆ ಮೂಲ ಸೌಕರ್ಯ ಅಭಿವೃದ್ಧಿಗೆ ಪ್ರಸಕ್ತ ಸಾಲಿನಲ್ಲಿ ಮಂಜೂರಾದ ಹಣವೆಷ್ಟು ;

(ಆ) ಈ ಮಂಜೂರಾದ ಹಣದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ; (ಕಾಮಗಾರಿವಾರು ಹೆಸರು ಮತ್ತು ವೆಚ್ಚದ ಮಾಹಿತಿ ನೀಡುವುದು)

(ಇ) ಇಲ್ಲಿಯವರೆಗೆ ಎಷ್ಟು ಕಾಮಗಾರಿಗಳ ಕೆಲಸ ಮುಗಿದಿದೆ ; (ಕಾಮಗಾರಿವಾರು ವಿವರ ನೀಡುವುದು)

(ಈ) ಮಂಜೂರಾದ ಹಣದಲ್ಲಿ ವೆಚ್ಚ ಮಾಡದಿರುವ ಮೊತ್ತವೆಷ್ಟು ?

## ಕುಡಿಯುವ ನೀರಿನ ೨೪/೭ ಸಮಗ್ರ ಯೋಜನೆ

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೧೫ (೨೬೭೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುಡಿಯುವ ನೀರಿನ ೨೪/೭ ಸಮಗ್ರ ಯೋಜನೆಯಂತೆ ಬಳ್ಳಾರಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ಯಾವ ಯಾವ ಯೋಜನೆಗಳನ್ನು ಜಾರಿಗೆ ತರಲು ಉದ್ದೇಶಿಸಲಾಗಿದೆ ;

(ಆ) ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಸರ್ಕಾರವು ಈಗಾಗಲೇ ಯಾವ ಕ್ರಮವನ್ನು ಕೈಗೊಂಡಿದೆ ;

(ಇ) ಪ್ರಸ್ತುತ ಈ ಯೋಜನೆಗಳು ಯಾವ ಹಂತದಲ್ಲಿವೆ ; ಸ್ಥಿತಿಗತಿಗಳೇನು ?

## ಬಳ್ಳಾರಿ ನಗರ ಪೊಲೀಸ್ ಠಾಣೆಗಳಲ್ಲಿರುವ ಸಿಬ್ಬಂದಿ ಸಮಸ್ಯೆ

**ಶ್ರೀ ಮೃತ್ಯಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೧೬ (೨೬೬೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಳ್ಳಾರಿ ನಗರದ ವ್ಯಾಪ್ತಿಯಲ್ಲಿರುವ ಕಾನೂನು ಸುವ್ಯವಸ್ಥೆ ಮತ್ತು ಸಂಚಾರಿ ಠಾಣೆಗಳ ಸಂಖ್ಯೆ ಎಷ್ಟು ;

(ಆ) ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ಹೊಸ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಇದ್ದಲ್ಲಿ, ಎಲ್ಲೆಲ್ಲಿ ಯಾವ ಯಾವ ಹೊಸ ಠಾಣೆಗಳನ್ನು ಸ್ಥಾಪನೆ ಮಾಡಲಾಗುವುದು ಹಾಗೂ ಯಾವಾಗ ಮಾಡಲಾಗುವುದು ;

(ಈ) ಬಳ್ಳಾರಿ ನಗರದ ಕಾನೂನು ಸುವ್ಯವಸ್ಥೆ ಮತ್ತು ಸಂಚಾರಿ ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿಗಳ ಕೊರತೆಯಿದ್ದು, ಇದರ ವಿಚಾರಣೆಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ ?

## ಬಳ್ಳಾರಿ ಜಿಲ್ಲೆಯಲ್ಲಿ ಅನಧಿಕೃತ ದಾಸ್ತಾನು ಮಾಡಲಾದ ಮರಳು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೧೭ (೨೬೬೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಳ್ಳಾರಿ ಜಿಲ್ಲೆಯಲ್ಲಿ ಎಷ್ಟು ಕಡೆ ಅನಧಿಕೃತವಾಗಿ ದಾಸ್ತಾನು ಮಾಡಲಾಗಿದ್ದ, ಮರಳನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ಸ್ಥಳ ಮತ್ತು ಮರಳಿನ ಪ್ರಮಾಣದ ಪೂರ್ಣ ವಿವರ ನೀಡುವುದು ;

(ಆ) ವಶಪಡಿಸಿಕೊಂಡಿರುವ ಮರಳನ್ನು ಯಾವ ರೀತಿ ಸಾರ್ವಜನಿಕ ಉಪಯೋಗಕ್ಕೆ ಹಂಚಿಕೆ ಅಥವಾ ಮಾರಾಟ ಮಾಡಲಾಗಿದೆ ;

(ಇ) ಹಂಚಿಕೆ ಅಥವಾ ಮಾರಾಟ ಮಾಡಲಾದ ಅನುಸರಿಸಲಾದ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ಒದಗಿಸುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಮದ್ಯದ ಅಂಗಡಿಗಳಿಗೆ ಪರವಾನಗಿ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೧೮ (೨೬೨೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅಬಕಾರಿ ಇಲಾಖೆವತಿಯಿಂದ ನಡೆಯುತ್ತಿರುವ ಮದ್ಯದ ಅಂಗಡಿಗಳ ಸಂಖ್ಯೆ ಎಷ್ಟು ;

(ಆ) ಈ ಜಿಲ್ಲೆಗಳಲ್ಲಿ ಮದ್ಯದ ಅಂಗಡಿಗಳಿಗೆ ಪರವಾನಗಿ ಕೊಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಅನಧಿಕೃತವಾಗಿ ಮದ್ಯದ ಅಂಗಡಿಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅಂತಹ ಮದ್ಯದ ಅಂಗಡಿ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪೋಲಿಸ್ ಠಾಣೆಗಳ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೧೯ (೨೬೨೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪೋಲಿಸ್ ಮಹಿಳಾ ಠಾಣೆಗಳ ಸಂಖ್ಯೆ ಎಷ್ಟು ;

(ಆ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿರುವ ಪೋಲಿಸ್ ಠಾಣೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಈ ಎರಡು ಜಿಲ್ಲೆಗಳಲ್ಲಿ ಪೋಲಿಸ್ ವಸತಿ ಗೃಹಗಳು ಮೂಲಭೂತ ಸೌಕರ್ಯ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳ ಪಶು ಆಸ್ಪತ್ರೆಗಳ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೨೦ (೨೬೩೧) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಬಡ್ತಿ ಹೊಂದಿದ ಪಶು ಆಸ್ಪತ್ರೆಗಳು ಎಷ್ಟು; ಈ ಪಶು ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಆಸ್ಪತ್ರೆಗಳು ಸ್ವತ: ಕಟ್ಟಡ ಹೊಂದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಜಿಲ್ಲೆಗಳಲ್ಲಿ ಖಾಲಿ ಇರುವ ಪಶು ಪರೀಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಸದರಿ ಹುದ್ದೆಗಳ ನೇಮಕಾತಿ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೈಗಾರಿಕಾ ಸ್ಥಾಪನೆ ಬಗ್ಗೆ

**ಶ್ರೀ ಅಲ್ಲಮಪ್ರಭು ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೨೧ (೨೬೩೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೈಗಾರಿಕಾ ಸ್ಥಾಪನೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಕೈಗಾರಿಕಾ ಸ್ಥಾಪನೆಗಾಗಿ ಭೂಮಿಯನ್ನು ಖರೀದಿಸಲಾಗಿದೆಯೇ ;

(ಇ) ಈ ಕೈಗಾರಿಕಾ ಸ್ಥಾಪನೆಗಾಗಿ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ ?

## ಕಾಲುವೆಗಳ ಹೂಳೆತ್ತುವ ಕಾಮಗಾರಿಗಳಲ್ಲಿ ನಡೆದಿರುವ ಭ್ರಷ್ಟಾಚಾರ

**ಶ್ರೀಮತಿ ವಿಮಲಾಗೌಡ** (ವಿಧಾನಸಭೆಯಿಂದ ಚುನಾಯಿತರಾದವರು) :-

೨೩೨೨ (೨೬೫೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮಹಾನಗರದಲ್ಲಿ ಮಳೆ ನೀರು ಕಾಲುವೆಗಳಲ್ಲಿ ಹೂಳು ತುಂಬಿ ಕೊಳಚೆ ನೀರು ಮನೆಗಳಿಗೆ ನುಗ್ಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದರೆ, ಕಳೆದ ಒಂದು ವರ್ಷದಿಂದ ಕಾಲುವೆಗಳ ಹೂಳೆತ್ತುವ ಕಾಮಗಾರಿಗೆ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ ಎಷ್ಟು; (ವಾರ್ಡ್‌ವಾರು ಮಾಹಿತಿ ನೀಡುವುದು)

(ಇ) ಸದರಿ ಕಾಲುವೆಗಳ ಹೂಳೆತ್ತುವ ಕಾಮಗಾರಿಗಳಲ್ಲಿ ಸರ್ಕಾರಿ ನಿಯಮಗಳನ್ನು ಉಲ್ಲಂಘನೆ ಮಾಡಿ ವ್ಯಾಪಕ ಭ್ರಷ್ಟಾಚಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಯಾವ ಯಾವ ಕಾಮಗಾರಿಗಳಲ್ಲಿ ಇಂತಹ ಭ್ರಷ್ಟಾಚಾರ ನಡೆದಿದೆ ; ಭ್ರಷ್ಟಾಚಾರ ಎಸಗಿದ ಅಧಿಕಾರಿ/ನೌಕರರು/ಗುತ್ತಿಗೆದಾರರು ಯಾರು; ಅವರ ವಿರುದ್ಧ ಸರ್ಕಾರ ಕೈಗೊಂಡ ಶಿಸ್ತಿನ ಕ್ರಮ ಏನು ? (ಸಂಪೂರ್ಣ ವಿವರ ನೀಡುವುದು)

## ಸಿಗ್ನಲ್ ಮುಕ್ತ ಫೆರಿಫೆರಲ್ ರಿಂಗ್ ರಸ್ತೆಯ ನಿರ್ಮಾಣ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೩೨೩ (೨೬೫೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದ ಸುತ್ತ ಸಿಗ್ನಲ್ ಮುಕ್ತ ಫೆರಿಫೆರಲ್ ರಿಂಗ್ ರಸ್ತೆಯನ್ನು ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದರೆ, ಸದರಿ ಯೋಜನೆಯನ್ನು ಘೋಷಣೆ ಮಾಡಿದ್ದು ಯಾವಾಗ ;

(ಇ) ಇಷ್ಟು ವರ್ಷಗಳಾದರೂ ಯೋಜನೆ ಪೂರ್ಣಗೊಳ್ಳದಿರಲು ಕಾರಣಗಳೇನು ;

(ಈ) ಎಷ್ಟು ಕಾಲಾವಧಿಯಲ್ಲಿ ಸದರಿ ರಸ್ತೆಯನ್ನು ನಿರ್ಮಾಣ ಮಾಡಿ ಸಾರ್ವಜನಿಕರ ಅನುಕೂಲಕ್ಕೆ ನೀಡಲಾಗುವುದು ?

## ಪ್ರಾಣಿ ಬಲಿ ತಡೆ ಬಗ್ಗೆ.

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೩೨೪ (೨೬೫೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಕಳೆದ ೨ ವರ್ಷಗಳಿಂದ ಊರ ಹಬ್ಬ, ಜಾತ್ರೆ ನೆಪದಲ್ಲಿ ಪ್ರಾಣಿಗಳಿಗೆ ಹಿಂಸೆ ನೀಡಿ ಅವುಗಳನ್ನು ಬಲಿ ಕೊಡುವಂತಹ

ಎಷ್ಟು ಪ್ರಕರಣಗಳು ದಾಖಲಾಗಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇಂತಹ ಪ್ರಕರಣಗಳಲ್ಲಿ ಭಾಗಿಯಾದ ಎಷ್ಟು ಜನರ ವಿರುದ್ಧ ಸರ್ಕಾರ ಕಾನೂನು ಕ್ರಮ ಜರುಗಿಸಿದೆ ;

(ಇ) ಪ್ರಾಣಿ ಬಲಿ ತಡೆಯುವ ಕಾನೂನನ್ನು ಸರ್ಕಾರ ಕಟ್ಟುನಿಟ್ಟಾಗಿ ಪಾಲಿಸದಿರುವುದು ಗಮನಿಸಿದೆಯೇ ;

(ಈ) ಹಾಗಿದ್ದಲ್ಲಿ ಕಾನೂನನ್ನು ಕಟ್ಟು ನಿಟ್ಟಾಗಿ ಪಾಲಿಸಲು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುವುದು ?

## ಬೆಂಗಳೂರು ನಗರದಲ್ಲಿ ಸರಗಳ್ಳ ಹಾವಳಿ ಹೆಚ್ಚಾಗುತ್ತಿರುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೨೫ (೨೬೫೧) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಸೇರಿದಂತೆ ರಾಜ್ಯ ಇತರೆ ನಗರಗಳಲ್ಲಿ ಸರಗಳ್ಳರ ಹಾವಳಿ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಕಳೆದ ೨ ವರ್ಷಗಳಲ್ಲಿ ಇಂತಹ ಎಷ್ಟು ಪ್ರಕರಣಗಳಲ್ಲಿ ಎಷ್ಟು ಜನ ಆರೋಪಿಗಳನ್ನು ಪೋಲಿಸರು ಬಂಧಿಸಿರುತ್ತಾರೆ ;

(ಇ) ಬಂಧಿತರಿಂದ ಪಡೆಯಲಾದ ಆಭರಣಗಳನ್ನು ದೂರುದಾರರಿಗೆ ಹಿಂತಿರುಗಿಸಲು ಅನುಸರಿಸುವ ಮಾನದಂಡಗಳೇನು ;

(ಈ) ಕಳೆದ ೨ ವರ್ಷಗಳಿಂದ ಇಂತಹ ಎಷ್ಟು ಪ್ರಕರಣಗಳಲ್ಲಿ ಆಭರಣಗಳನ್ನು ಮತ್ತು ಹಣವನ್ನು ದೂರದಾರರಿಗೆ ಪೂರ್ಣ ಪ್ರಮಾಣದಲ್ಲಿ ಹಿಂತಿರುಗಿಸಲಾಗಿದೆ ? (ಬೆಂಗಳೂರು ಪೋಲಿಸ್ ಠಾಣಾವಾರು ಮಾಹಿತಿ ನೀಡುವುದು)

## ಮುಜರಾಯಿ ದೇವಸ್ಥಾನಗಳ ಅರ್ಚಕರ ಗೌರವ ಧನ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೨೩೨೬ (೨೬೪೪) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಒಟ್ಟು ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು ;

(ಆ) ಮುಜರಾಯಿ ದೇವಸ್ಥಾನಗಳ ಅರ್ಚಕರಿಗೆ ಸರ್ಕಾರ ನೀಡುತ್ತಿರುವ ಕೊಡುಗೆಗಳೇನು ;

(ಇ) ಹಲವಾರು ವರ್ಷಗಳಿಂದ ಅರ್ಚಕ ವೃತ್ತಿ ಮಾಡುತ್ತಿರುವ ಇವರಿಗೆ ಗೌರವಧನ ಅಥವಾ ಸಂಬಳ ನೀಡದಿರಲು ಕಾರಣವೇನು ;

(ಈ) ಈ ವರ್ಷದಿಂದ ಗೌರವಧನ ನೀಡಿ ಅರ್ಚಕ ವೃತ್ತಿಗೆ ಅನುಕೂಲ ಮಾಡಿ ಕೊಡಲಾಗುವುದೆ ;

(ಉ) ದೇವಸ್ಥಾನಗಳಿಗೆ ತಸ್ತಿಕ್ ಹಣ ನೀಡುತ್ತಿದ್ದು, ಇವತ್ತಿನ ಬೆಲೆಗೆ ಅನುಗುಣವಾಗಿ ನೀಡುವಂತೆ ಬೇಡಿಕೆ ಬಂದಿದ್ದು, ನೀಡಲು ಸರ್ಕಾರ ನಿರ್ಧರಿಸಿದೆಯೆ ; ಎಂದಿನಿಂದ ನೀಡಲಾಗುವುದು ?

## ಹೊಸ ಆರಕ್ಷಕ ಠಾಣೆಗಳನ್ನು ತೆರೆಯುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೩೨೭ (೨೬೪೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಜನಸಂಖ್ಯೆಗೆ ಅನುಗುಣವಾಗಿ ಆರಕ್ಷಕ ಠಾಣೆಗಳು ಇವೆಯೇ ;

(ಆ) ಬೆಂಗಳೂರು ನಗರದಲ್ಲಿರುವ ಯಾವ ಯಾವ ಬಡಾವಣೆಗಳಲ್ಲಿ ಆರಕ್ಷಕರ ಠಾಣೆಗಳು ಕೆಲಸ ಮಾಡುತ್ತಿವೆ ;

(ಇ) ನಗರದ ಸಂಖ್ಯೆಗೆ ಅನುಗುಣವಾಗಿ ಪೋಲೀಸ್ ಸಿಬ್ಬಂದಿಗಳು ಇಲ್ಲದೆ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದು ನಿಜವೆ ;

(ಈ) ಹಾಗಿದ್ದಲ್ಲಿ ಎಲ್ಲಾ ರೀತಿಯ ಆರಕ್ಷಕ ಸಿಬ್ಬಂದಿ ಕೊರತೆ ನೀಗಿಸಲು ತೆಗೆದುಕೊಂಡಿರುವ ಕ್ರಮಗಳೇನು ;

(ಉ) ಮುಂದಿನ ದಿನಗಳಲ್ಲಿ ಹೊಸ ಆರಕ್ಷಕ ಠಾಣೆಗಳನ್ನು ತೆರೆಯಲು ಸರ್ಕಾರ ನಿರ್ಧರಿಸಿದೆಯೇ ಎಲ್ಲೆಲ್ಲಿ ಮಾಡಲಾಗುವುದು ; ಯಾವಾಗ ಮಾಡಲಾಗುವುದು ?

# ಹಸು ಮತ್ತು ಕುರಿ ಸಾಕಾಣಿಕೆ ಯೋಜನೆಗಳಿಗೆ ಸಬ್ಸಿಡಿ ನೀಡುವ ಬಗ್ಗೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೩೨೮ (೨೬೪೪೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪಶುಸಂಗೋಪನಾ ಇಲಾಖೆಯಲ್ಲಿ ಬರುವ ಬಡ ರೈತರಿಗೆ ಸಬ್ಸಿಡಿ ಮುಖಾಂತರ ಸಿಗುವ ಯೋಜನೆಗಳಾವುವು ;

(ಆ) ಕಳೆದ ಎರಡು ವರ್ಷಗಳಿಂದ ತುರುವೇಕೆರೆ ಬಡ ರೈತರಿಗೆ ನೀಡಿರುವ ಯೋಜನೆಗಳೇನು ;

(ಇ) ಯಾವ ರೀತಿ ಆಯ್ಕೆ ಮಾಡಲಾಯಿತು ; ಮಾನದಂಡವೇನು ; ಸಮರ್ಪಕವಾಗಿ ಆಯ್ಕೆಯಾಗದಿರುವ ಬಗ್ಗೆ ದೂರುಗಳು ಬಂದಿರುವುದೇ ; (ವಿವರ ನೀಡುವುದು)

(ಈ) ಹಾಗಿದ್ದಲ್ಲಿ, ಸರ್ಕಾರದ ಯೋಜನೆ ತಲುಪಲು ಸರಿಯಾದ ಕ್ರಮದ ಮೂಲಕ ಆಯ್ಕೆ ಮಾಡಿ ಅನುಕೂಲ ಮಾಡಿಕೊಡಲಾಗುವುದೇ ?

# ಕಲಾಸಿಪಾಳ್ಯ ಬಸ್‌ನಿಲ್ದಾಣದಲ್ಲಿ ಅಂಗಡಿಗಳನ್ನು ತೆರವುಗೊಳಿಸಿರುವ ಕುರಿತು

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :–**

೨೩೭೯ (೨೬೪೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಕಲಾಸಿಪಾಳ್ಯ ಬಸ್ ನಿಲ್ದಾಣದ ಬಳಿಯಿದ್ದ ಎಷ್ಟು ಮಳಿಗೆಗಳನ್ನು ಒಡೆದು ಹಾಕಲಾಯಿತು; ಯಾವಾಗ; ಯಾವ ಕಾರಣಕ್ಕಾಗಿ ಒಡೆದು ಹಾಕಲಾಯಿತು ; (ಪೂರ್ಣ ವಿವರ ನೀಡುವುದು)

(ಆ) ಕಳೆದ ಐದು ವರ್ಷಗಳಿಂದ ಹೊಸ ಮಳಿಗೆ ನಿರ್ಮಾಣಕ್ಕೆ ತೆಗೆದುಕೊಂಡಿರುವ ನಿರ್ಣಯಗಳೇನು ;

(ಇ) ಹೀಗೆ ಒಡೆದು ಹಾಕಿರುವ ಮಳಿಗೆಗಳ ಬಡ ವಾರಸುದಾರರಿಗೆ ಪರ್ಯಾಯವಾಗಿ ಬೇರೆ ಕಡೆ ಎಲ್ಲಿ ಮಳಿಗೆಗಳನ್ನು ಕಲ್ಪಿಸಲಾಗಿದೆ; ಹಂಚಿಕೆ ಮಾಡಿರುವ ಮಳಿಗೆಗಳ ಸಹಿತ ವಾರಸುದಾರರ ಹೆಸರು ಮತ್ತು ವಿಳಾಸಗಳನ್ನು ನೀಡುವುದು ;

(ಈ) ಮಳಿಗೆಗಳ ವಾರಸುದಾರರಿಂದ ಬಾಡಿಗೆ ಹಾಗೂ ತೆರಿಗೆಗಳನ್ನು ಸಂಗ್ರಹಿಸಿರುವುದು ನಿಜವೇ; ಯಾವ ವರ್ಷದಿಂದ ;

(ಉ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಪರ್ಯಾಯ ಮಳಿಗೆಗಳನ್ನು ಪೂರ್ಣಗೊಳಿಸಿ ಹಲವಾರು ವರ್ಷಗಳಿಂದ ಖಾಲಿ ಇರುವ ವಾರಸುದಾರರಿಗೆ ಎಷ್ಟು ದಿನಗಳಲ್ಲಿ ನೀಡಲಾಗುವುದು ?

## ಸಾಮಾನ್ಯ ಸಂಗ್ರಹಣ ನಿಧಿ ಸಂಗ್ರಹ ಹಾಗೂ ಬಳಕೆ

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) :-**

೨೩೩೦ (೨೬೪೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಯಾವ-ಯಾವ ಮುಜರಾಯಿ ದೇವಸ್ಥಾನಗಳಲ್ಲಿ ಸಾಮಾನ್ಯ ಸಂಗ್ರಹಣ ನಿಧಿ ಸಂಗ್ರಹಿಸಲಾಗುತ್ತಿದೆ;

(ಆ) ಸಾಮಾನ್ಯ ಸಂಗ್ರಹಣ ನಿಧಿ ಹಂಚಿಕೆಯನ್ನು ಯಾವ-ಯಾವ ಕಾರ್ಯಕ್ರಮಗಳಿಗೆ ವಿನಿಯೋಗಿಸಲಾಗುತ್ತಿದೆ;

(ಇ) ಕಳೆದ ನಾಲ್ಕು ವರ್ಷದಿಂದ ಈ ನಿಧಿಯ ಬಳಕೆ ಬಗ್ಗೆ ಪೂರ್ಣ ಮಾಹಿತಿ ನೀಡುವುದು ;

(ಈ) ಮುಜರಾಯಿಯೇತರ ದೇವಸ್ಥಾನಗಳಿಗೆ ಈ ಹಣ ನೀಡಲು ಕಾಯ್ದೆ ಮತ್ತು ನಿಯಮದಲ್ಲಿ ಅವಕಾಶವಿದೆಯೇ ;

(ಉ) ಹಾಗಿದ್ದರೆ, ಯಾವ-ಯಾವ ಕಾರ್ಯಕ್ರಮಗಳಿಗೆ ಹಣ ನೀಡಲಾಗಿದೆ ?

## ಪೊಲೀಸ್ ಠಾಣೆಗಳಲ್ಲಿ ಸಿ.ಸಿ. ಕ್ಯಾಮರ ಅಳವಡಿಸುವ ಬಗ್ಗೆ.

**ಶ್ರೀ ಐವನ್ ಡಿ'ಸೋಜಾ ( ನಾಮನಿರ್ದೇಶನ ಹೊಂದಿದವರು) :-**

೨೩೩೧ (೨೬೪೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ನಗರದಲ್ಲಿ ಪೊಲೀಸ್ ಠಾಣೆಗಳಲ್ಲಿ ಅಳವಡಿಸಿದ್ದ ಸಿ.ಸಿ. ಕ್ಯಾಮರಾಗಳು ಎಷ್ಟು; ಯಾವ ಯಾವ ಪ್ರದೇಶದಲ್ಲಿ ಅಳವಡಿಸಲಾಗಿದೆ ; ಈ ಕ್ಯಾಮರಾಗಳು ಕಾರ್ಯ ನಿರ್ವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಆ) ನಗರದಲ್ಲಿ ಸೈಬರ್ ಕ್ರೈಂ ಪೊಲೀಸ್ ಠಾಣೆ ಪ್ರಾರಂಭಿಸಲಾಗಿದ್ದು, ಸಿಬ್ಬಂದಿಗಳ ಕೊರತೆಯಿಂದ ಕಾರ್ಯನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಇ) ಸೈಬರ್ ಕ್ರೈಂ ತಿಳುವಳಿಕೆ ಇಲ್ಲದ ಪೊಲೀಸ್‌ರವರನ್ನು ನೇಮಿಸಲಾಗುವುದು ಸಾರ್ವಜನಿಕರಿಗೆ ಮಾಹಿತಿ ನೀಡಲು ಸಾಧ್ಯವಾಗುತ್ತಿಲ್ಲ ಎಂಬ ಆರೋಪವಿರುವುದು ನಿಜವೇ ;

(ಈ) ಮಂಗಳೂರಿನಲ್ಲಿರುವ ಸೈಬರ್ ಕ್ರೈಂ ವ್ಯಾಪ್ತಿ ಎಷ್ಟು ; ಎಷ್ಟು ಮಂದಿ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ; ೨೦೧೪-೧೫ರಲ್ಲಿ ಎಷ್ಟು ಕೇಸುಗಳನ್ನು ದಾಖಲಿಸಿಕೊಳ್ಳಲಾಗಿದೆ ; (ವಿವರ ನೀಡುವುದು)

(ಉ) ಸೈಬರ್ ಕ್ರೈಂ ಬಗ್ಗೆ ಅರಿವು ಮೂಡಿಸಲು ಇಲಾಖೆ ಕೈಗೊಂಡ ಕಾರ್ಯಕ್ರಮಗಳಾವುವು ?

## ಅನಧಿಕೃತ ಜಾಹಿರಾತು ತೆರವುಗೊಳಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೨೩೩೨ (೨೬೪೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ೮ ವಲಯಗಳಲ್ಲಿ ಅನಧಿಕೃತ ಜಾಹಿರಾತುಗಳನ್ನು ತೆರವುಗೊಳಿಸಲು ನೇಮಕ ಮಾಡಿರುವ ಗುತ್ತಿಗೆದಾರರು ೨೦೧೨-೧೩, ೨೦೧೩-೧೪, ೨೦೧೪-೧೫ರಲ್ಲಿ ಎಷ್ಟು ನಾಮಫಲಕಗಳನ್ನು ತೆರವುಗೊಳಿಸಿರುತ್ತಾರೆ ; ತೆರವುಗೊಳಿಸಿದ್ದಲ್ಲಿ, ಸಾಮಾಗ್ರಿಗಳನ್ನು ಎಲ್ಲಿ ಶೇಖರಣೆ ಮಾಡಲಾಗಿದೆ ;

(ಆ) ಅನಧಿಕೃತ ಜಾಹಿರಾತುದಾರರಿಂದ ಎಷ್ಟು ದಂಡ ವಸೂಲು ಮಾಡಲಾಗಿದೆ; ದಂಡ ವಸೂಲು ಮಾಡದೇ ಇದ್ದಲ್ಲಿ, ಕಾರಣಕರ್ತರಾದ ಸಿಬ್ಬಂದಿ ಮತ್ತು ಅಧಿಕಾರಿಗಳ ಬಗ್ಗೆ ಯಾವ ಕ್ರಮ ಜರುಗಿಸಲಾಗಿದೆ ;

(ಇ) ಅನಧಿಕೃತ ಜಾಹಿರಾತುಗಳಿಂದ ಬಿ.ಬಿ.ಎಂ.ಪಿ. ಬೊಕ್ಕಸಕ್ಕೆ ಉಂಟಾದ ಆದಾಯ-ನಷ್ಟ ಎಷ್ಟು; ಈ ನಷ್ಟವನ್ನು ಭರಿಸಲು ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

# ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಮೂಡುಶೆಡ್ಡೆ ಗ್ರಾಮಗಳನ್ನು ಸೇರಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :-**

೨೩೩೩ (೨೬೩೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಮೂಡುಶೆಡ್ಡೆ ಗ್ರಾಮಗಳನ್ನು ಸೇರಿಸಬೇಕೆಂದು ಮಹಾನಗರ ಪಾಲಿಕೆಯು ಸರ್ವಾನುಮತದಿಂದ ನಿರ್ಣಯುವನ್ನು ಕೈಗೊಂಡಿದ್ದು, ಇಲಾಖೆಯು ಈ ಬಗ್ಗೆ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು ;

(ಆ) ಮಹಾನಗರ ಪಾಲಿಕೆ ವ್ಯಾಪ್ತಿಗೆ ಈ ಗ್ರಾಮಗಳನ್ನು ಸೇರಿಸದೇ ಕೇಂದ್ರ ಸರ್ಕಾರದ ಯೋಜನೆಯಾದ "ಸ್ಮಾರ್ಟ್ ಸಿಟಿ" ನಗರ ಯೋಜನೆಗಳನ್ನು ಕೈಬಿಟ್ಟಿರುವುದು ಇಲಾಖೆಯ ನಿರ್ಲಕ್ಷ್ಯತೆ ಕಾರಣ ಎಂದು ಆರೋಪ ಇರುವುದು ನಿಜವೇ ; (ವಿವರ ನೀಡುವುದು)

(ಇ) ಮಹಾನಗರ ಪಾಲಿಕೆಯ ಜನಸಂಖ್ಯೆಯು ಅನೇಕ ಯೋಜನೆಗಳಿಗೆ ಮಾನದಂಡವಾಗಿರುವುದು ಇಲಾಖೆ ಗಮನಕ್ಕೆ ಬಂದಿದೆಯೇ ;

(ಈ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಹುದ್ದೆಗಳು ಎಷ್ಟು; ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಮಹಾನಗರ ಪಾಲಿಕೆ ಸದಸ್ಯರುಗಳಿಗೆ ಗೌರವ ಧನ ಹೆಚ್ಚಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು) :–**

೨೩೩೪ (೨೬೪೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೇಯರ್ ಅವಧಿಯನ್ನು ಒಂದು ವರ್ಷದಿಂದ ಐದು ವರ್ಷಕ್ಕೆ ಏರಿಸಬೇಕೆಂಬ ಬೇಡಿಕೆ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ನೀಡುವುದು)

(ಆ) ಮಹಾನಗರ ಪಾಲಿಕೆಯ ಸದಸ್ಯರುಗಳಿಗೆ ಗೌರವ ಧನ ಹೆಚ್ಚಿಸುವ ಪ್ರಸ್ತಾವನೆ ಬಗ್ಗೆ ಕೈಗೊಂಡ ಕ್ರಮವೇನು ; (ವಿವರ ನೀಡುವುದು)

(ಇ) ಮಹಾನಗರ ಪಾಲಿಕೆ ಸದಸ್ಯರುಗಳಿಗೆ ಗೌರವಧನ ನೀಡಲು ಹೆಚ್ಚುವರಿ ವೆಚ್ಚವನ್ನು ಇಲಾಖೆ ಭರಿಸುವುದೇ ಅಥವಾ ನಗರ ಪಾಲಿಕೆಯೇ ಭರಿಸುವುದೇ ; (ವಿವರ ನೀಡುವುದು)

(ಈ) ಮಂಗಳೂರು ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪ ಮೇಯರ್‌ರವರಿಗೆ ವಾಹನವನ್ನು ಖರೀದಿಸಲು ವರ್ಷದ ಹಿಂದೆಯೇ; ನಿರ್ಣಯಿಸಿದ್ದರೂ ಅದನ್ನು ಪುರಸ್ಕರಿಸದೇ ಇರಲು ಕಾರಣಗಳೇನು ; (ವಿವರ ನೀಡುವುದು)

(ಉ) ಮಂಗಳೂರು ಮಹಾನಗರ ಪಾಲಿಕೆ ೨೦೧೧ರ ಜನಗಣತಿ ಪ್ರಕಾರ ಇರುವ ಜನಸಂಖ್ಯೆ ಎಷ್ಟು; ೨೦೧೪ರ ಪ್ರಕಾರ ಇರುವ ಜನಸಂಖ್ಯೆ ಎಷ್ಟು ?

## ಕೆ.ಐ.ಡಿ.ಬಿ. ವತಿಯಿಂದ ಸ್ವಾಧೀನಪಡಿಸಿಕೊಂಡ ಭೂಮಿಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ ( ನಾಮನಿರ್ದೇಶನ ಹೊಂದಿದವರು) :-**

೨೩೩೫(೨೬೪೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆ.ಐ.ಡಿ.ಬಿ. ವತಿಯಿಂದ ಸ್ವಾಧೀನ ಪಡಿಸಿಕೊಂಡಿರುವ ಭೂಮಿ ಎಷ್ಟು; ಅದನ್ನು ಯಾವ ಯಾವ ಕೈಗಾರಿಕೆಗಳಿಗೆ ನೀಡಲಾಗಿದೆ ; (ವಿವರ ನೀಡುವುದು)

(ಆ) ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಕೈಗಾರಿಕಾ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ;

(ಇ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯ, ಬೆಳ್ತಂಗಡಿ, ವಿಟ್ಲ ಮುಂತಾದ ಕಡೆಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲು ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆಯೇ ; ಇಲ್ಲದೆ ಇದ್ದಲ್ಲಿ, ಕಾರಣಗಳೇನು ;

(ಈ) ದಕ್ಷಿಣ ಕನ್ನಡ ಜಿಲ್ಲೆಯ ನಿಡ್ಡೋಡಿಯಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿದ್ಯುತ್ ಸ್ಥಾವರಕ್ಕೆ ಭೂಸ್ವಾಧೀನ ಪಡಿಸಿಕೊಳ್ಳಲು ಇಲಾಖೆ ಕ್ರಮ ಕೈಗೊಂಡಿದೆಯೇ; ಇಲ್ಲದೆ ಇದ್ದಲ್ಲಿ, ಯಾವ ಕಾರಣಕ್ಕಾಗಿ ; (ವಿವರ ನೀಡುವುದು)

(ಉ) ಸ್ವಾಧೀನಪಡಿಸಿದ ಭೂಮಿಯಲ್ಲಿ ಎಷ್ಟು ಎಕರೆ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ ; ಪ್ರಾರಂಭಿಸದೇ ಇರುವ ಸಂಸ್ಥೆಗಳ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ? (ಕೈಗೊಂಡಿದ್ದರೆ, ವಿವರ ನೀಡುವುದು)

# ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಬಿಡುಗಡೆಯಾದ ಅನುದಾನ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೩೩೬ (೨೬೫೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಾ: ಡಿ.ಎಂ. ನಂಜುಂಡಪ್ಪ ವರದಿ ಅನ್ವಯ ಕಳೆದ ೫ ವರ್ಷಗಳಲ್ಲಿ ಹಿಂದುಳಿದ ಹೈದರಾಬಾದ್–ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಿಗೆ ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ) ಅಡಿಯಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ; (ವರ್ಷವಾರು, ಇಲಾಖೆವಾರು, ಯೋಜನೆವಾರು, ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು)

(ಆ) ಸದರಿ ವಿಶೇಷ ಅಭಿವೃದ್ಧಿ ಯೋಜನೆ (ಎಸ್.ಡಿ.ಪಿ) ಅಡಿಯಲ್ಲಿ ೨೦೦೯ ರಿಂದ ಇಲ್ಲಿಯುವರೆಗೆ ಆದ ಖರ್ಚು ಎಷ್ಟು; (ವರ್ಷವಾರು, ಇಲಾಖೆವಾರು, ಯೋಜನೆವಾರು, ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು)

(ಇ) ಹೈದರಾಬಾದ್–ಕರ್ನಾಟಕದ ಆರು ಜಿಲ್ಲೆಗಳಿಗೆ ಕಳೆದ ೫ ವರ್ಷಗಳಲ್ಲಿ ಸರ್ಕಾರದಿಂದ ಸಾಮಾನ್ಯ ಬಜೆಟ್‌ನಲ್ಲಿ ಬಿಡುಗಡೆಯಾದ ಮೊತ್ತ (ಡಾ: ಡಿ.ಎಂ. ನಂಜುಂಡಪ್ಪ ವರದಿ (ಎಸ್.ಡಿ.ಪಿ) ಹೊರತುಪಡಿಸಿ) ಎಷ್ಟು; (ಇಲಾಖೆವಾರು, ಶೀರ್ಷಿಕೆವಾರು, ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು)

(ಈ) ಹೈದರಾಬಾದ್–ಕರ್ನಾಟಕದ ಆರು ಜಿಲ್ಲೆಗಳಿಗೆ ಕಳೆದ ೫ ವರ್ಷಗಳಲ್ಲಿ ಸರ್ಕಾರದಿಂದ ಸಾಮಾನ್ಯ ಬಜೆಟ್‌ನಲ್ಲಿ (ಡಾ: ಡಿ.ಎಂ. ನಂಜುಂಡಪ್ಪ ವರದಿ (ಎಸ್.ಡಿ.ಪಿ) ಹೊರತುಪಡಿಸಿ) ಆದ ಖರ್ಚು ಎಷ್ಟು ? (ಇಲಾಖೆವಾರು, ಶೀರ್ಷಿಕೆವಾರು, ಜಿಲ್ಲಾವಾರು ಪ್ರತ್ಯೇಕ ವಿವರ ನೀಡುವುದು)

## ಹೈದರಾಬಾದ್–ಕರ್ನಾಟಕ ಜಿಲ್ಲೆಗಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೩೩೭ (೨೬೩೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೈದರಾಬಾದ್–ಕರ್ನಾಟಕದ ಆರು ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ೨೦೧೨–೧೩ ರಿಂದ ೩೧–೧೨–೨೦೧೫ರವರೆಗೆ ದಾಖಲಾಗಿರುವ ಡಕಾಯಿತಿ, ಕೊಲೆ, ಕಳ್ಳತನ, ಸುಲಿಗೆ, ಮಹಿಳಾ ದೌರ್ಜನ್ಯ, ಮಹಿಳೆಯರು ಹಾಗೂ ಮಕ್ಕಳ ಮಾನವ ಕಳ್ಳ ಸಾಗಾಣಿಕೆ ಹಾಗೂ ಉಗ್ರವಾದ ಪ್ರಕರಣಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾದ ವಿವರ ನೀಡುವುದು)

(ಇ) ಈ ಪೈಕಿ ಪತ್ತೆ ಹಚ್ಚಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಪ್ರಕರಣವಾರು ವಿವರ ನೀಡುವುದು)

(ಈ) ಸದರಿ ಅಪರಾಧ ಪ್ರಕರಣಗಳು ಹೆಚ್ಚಾಗಲು ಕಾರಣವೇನು; ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ವಿಫಲವಾಗಲು ಕಾರಣವೇನು;

(ಉ) ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಕೈಗೊಳ್ಳಲಿರುವ ಕಾರ್ಯಕ್ರಮಗಳೇನು)

(ಊ) ಕಲಬುರಗಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕಲಬುರಗಿ ನಗರದಲ್ಲಿ ಪೊಲೀಸ್ ಕಮೀಷನರೇಟ್ ಕಚೇರಿ ಆರಂಭಿಸಲು ಕೈಗೊಂಡಿದ್ದ ತೀರ್ಮಾನವನ್ನು ಅನುಷ್ಠಾನಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

## ರಾಜ್ಯದ ವಿವಿಧ ಇಲಾಖೆಗಳಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೨೩೩೮ (೨೬೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಅನುಕಂಪದ ಆಧಾರದ ಮೇಲೆ ನೇಮಕಾತಿ ಕೋರಿ ಸರ್ಕಾರಕ್ಕೆ ಬಂದಿರುವ ಅರ್ಜಿಗಳೆಷ್ಟು ; ಬಾಕಿ ಇರುವ ಅರ್ಜಿಗಳೆಷ್ಟು ; (ಹೈದರಾಬಾದ್-ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನ ಮಾಹಿತಿ ನೀಡುವುದು)

(ಆ) ಸಂವಿಧಾನದ ಕಲಂ ೩೭೧ (ಜೆ)ಗೆ ತಿದ್ದುಪಡಿಯ ನಂತರ ಹೈದರಾಬಾದ್–ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಅನುಕಂಪದ ಆಧಾರದ ಮೇಲೆ ಎಷ್ಟು ಜನರ ನೇಮಕ ಮಾಡಿಕೊಳ್ಳಲಾಗಿದೆ; ಬಾಕಿ ಇರುವ ಅರ್ಜಿಗಳೆಷ್ಟು ; (ಹೈದರಾಬಾದ್–ಕರ್ನಾಟಕ ಭಾಗದ ೬ ಜಿಲ್ಲೆಗಳು ಹಾಗೂ ಹರಪನಹಳ್ಳಿ ತಾಲ್ಲೂಕಿನ ಮಾಹಿತಿ ನೀಡುವುದು)

(ಇ) ಅನುಕಂಪದ ಆಧಾರದ ಮೇಲೆ ನೇಮಕಾತಿ ಪ್ರಕ್ರಿಯೆಯು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ವಿಳಂಬವಾಗಲು ಕಾರಣಗಳೇನು ;

(ಈ) ಬಾಕಿ ಇರುವ ಅನುಕಂಪದ ಆಧಾರದ ನೇಮಕಾತಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ?

## ಕಲಬುರಗಿ ನಗರವನ್ನು "ಬಿ" ನಗರವೆಂದು ಘೋಷಣೆ ಮಾಡುವುದು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :–**

೨೩೩೪ (೨೬೫೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕರ್ನಾಟಕದ ಪ್ರಮುಖ ನಗರವಾದ ಕಲಬುರಗಿ ನಗರದ ಜನಸಂಖ್ಯೆ ೦೫.೫೦ ಲಕ್ಷ ಮೇಲ್ಪಟ್ಟಿದ್ದು, ಹಲವಾರು ಸಂದರ್ಭಗಳಲ್ಲಿ ಹಾಗೂ ವಿಶೇಷವಾಗಿ ಸದನದಲ್ಲಿ

ಮಾನ್ಯ ಮುಖ್ಯಮಂತ್ರಿಗಳು ಕಲಬುರಗಿ ನಗರವನ್ನು "ಬಿ" ನಗರವೆಂದು ಮಾನ್ಯತೆ ನೀಡಲು ಕ್ರಮ ಕೈಗೊಳ್ಳುವುದಾಗಿ ದಿನಾಂಕ:೧೧-೧೨-೨೦೧೪ರಂದು ಆಶ್ವಾಸನೆ ನೀಡಿದ್ದಾಗಿಯೂ, ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳೇನು ;

(ಆ) ಈ ತಾರತಮ್ಯದಿಂದ ಕಲಬುರಗಿ ನಗರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ನೌಕರರು ಮನೆ ಬಾಡಿಗೆ ಭತ್ಯೆ ಕೇವಲ ೧೦% (ತಾಲ್ಲೂಕು, ಪಟ್ಟಣಗಳಿಗೆ ಸರಿಸಮನಾದ) ಪಡೆಯುತ್ತಿದ್ದು, ಜೀವನ ನಿರ್ವಹಣೆ ದುಬಾರಿಯಾಗಿರುವ ಕಲಬುರಗಿ ಮಹಾನಗರದಲ್ಲಿ ಸರ್ಕಾರಿ ನೌಕರರ ದುಬಾರಿ ಮನೆ ಬಾಡಿಗೆ ಹಾಗೂ ದೈನಂದಿನ ನಿರ್ವಹಣೆ ಕಷ್ಟಕರವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇದ್ದರೆ, ಈ ನಿಟ್ಟಿನಲ್ಲಿ ಕಲಬುರಗಿ ಮಹಾನಗರವನ್ನು "ಬಿ" ನಗರವೆಂದು ಘೋಷಣೆ ಮಾಡಲಾಗುವುದೇ ಅಥವಾ ಕಲಬುರಗಿ ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ನೌಕರರ ಮನೆಬಾಡಿಗೆ ಭತ್ಯೆ ೧೦% ರಿಂದ ೨೦% ರಷ್ಟು ಹೆಚ್ಚಳ ಮಾಡಲು ಸರ್ಕಾರ ಮುಂದಾಗುವುದೇ ? (ವಿವರ ನೀಡುವುದು)

# ಹೈದರಾಬಾದ್-ಕರ್ನಾಟಕದ ಆರು ಜಿಲ್ಲೆಗಳಲ್ಲಿ ಮಂಜೂರಾದ ಖಾಲಿ ಹುದ್ದೆಗಳು

**ಶ್ರೀ ಅಮರನಾಥ ಪಾಟೀಲ್ (ಪದವೀಧರರ ಕ್ಷೇತ್ರ) :-**

೨೩೪೦ (೨೬೫೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಹೈದರಾಬಾದ್-ಕರ್ನಾಟಕ ಪ್ರದೇಶದ ಆರು ಜಿಲ್ಲೆಗಳಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ಇಲಾಖಾವಾರು, ವೃಂದವಾರು ಮಾಹಿತಿ ನೀಡುವುದು)

(ಆ) ಅನುಚ್ಛೇದ ೩೭೧(ಜೆ) ಅಡಿಯಲ್ಲಿ ಮೀಸಲಿಟ್ಟ ಹುದ್ದೆಗಳ ಸಂಖ್ಯೆ ಎಷ್ಟು; ಹೈದರಾಬಾದ್-ಕರ್ನಾಟಕ ಪ್ರದೇಶದ ಹಾಗೂ ಹೈದರಾಬಾದ್-ಕರ್ನಾಟಕ ಪ್ರದೇಶ ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಮೀಸಲಿಟ್ಟ ಹುದ್ದೆಗಳ ಸಂಖ್ಯೆ ಎಷ್ಟು ; (ಇಲಾಖಾವಾರು, ವೃಂದವಾರು, ಜಿಲ್ಲಾವಾರು ಪ್ರತ್ಯೇಕ ಮಾಹಿತಿ ನೀಡುವುದು)

(ಇ) ಅನುಚ್ಛೇದ ೩೭೧(ಜೆ) ಅಡಿಯಲ್ಲಿ ಬಡ್ತಿ ಪ್ರಕ್ರಿಯೆಯಲ್ಲಿ ಗೊಂದಲ ಉಂಟಾಗಿ ಬಡ್ತಿ ಪ್ರಕ್ರಿಯೆ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಜಿಲ್ಲಾವಾರು, ಇಲಾಖಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಅನುಚ್ಛೇದ ೩೭೧(ಜೆ) ಅಡಿಯಲ್ಲಿ ನ್ಯಾಯಯುತವಾಗಿ ಮೀಸಲು ನೀಡಿ ಈ ಬಡ್ತಿ ಪ್ರಕ್ರಿಯೆಗೆ ಅತೀ ಶೀಘ್ರ ಚಾಲನೆಗೆ ಸರ್ಕಾರ ಮುಂದಾಗುವುದೇ ? (ಜಿಲ್ಲಾವಾರು, ಇಲಾಖಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಮುಜರಾಯಿ ಇಲಾಖೆಯ ದೇವಸ್ಥಾನಗಳು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೨೩೪೧ (೨೬೬೬) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಈಗ ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಅಸ್ತಿತ್ವದಲ್ಲಿ ಇರುವುದಿಲ್ಲ, ಈಗ ಮುಜರಾಯಿ ಇಲಾಖೆಯ ದೇವಸ್ಥಾನಗಳನ್ನು ಯಾರು ಮೇಲ್ವಿಚಾರಣೆ ಮಾಡುತ್ತಿರುವರು ;

(ಆ) ಟ್ರಸ್ಟ್ ಕಾಯಿದೆ ಜಾರಿಯಲ್ಲಿ ಇಲ್ಲದೇ ಇರುವುದರಿಂದ ಟ್ರಸ್ಟ್ ಆಸ್ತಿಗಳನ್ನು ಮಾರುತ್ತಿರುವವರು, ಸದರಿ ವ್ಯವಹಾರ ಕಾಯಿದೆ ಬದ್ಧವಾಗಿ ಆಗುವುದೇ ; ಖರೀದಿ ತೆಗೆದುಕೊಂಡವರಿಗೆ ಮಾಲ್ಕಿ ಹಕ್ಕು ಪ್ರಾಪ್ತಿಯಾಗುವುದೇ; ಹಾಗೂ ಮಾರಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದೇ; ಟ್ರಸ್ಟ್ ಆಸ್ತಿ ಮಾರಲು ಯಾವ ಕಾಯಿದೆ ಪ್ರಕಾರ ಯಾರ ಪರವಾನಿಗೆ ಯಾವ ನಿಯಮಗಳ ಪ್ರಕಾರ ತೆಗೆದುಕೊಳ್ಳಬೇಕು ;

(ಇ) ಟ್ರಸ್ಟಿಗಳು ಅವ್ಯವಹಾರ ಮಾಡುತ್ತಿದ್ದು, ಅದರ ಮೇಲ್ವಿಚಾರಣೆಯನ್ನು ಮಾಡುತ್ತಿರುವವರು; ಹಾಗೂ ಯಾವ ಕ್ರಮ ಯಾವ ಕಾಯಿದೆ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಲು ಬರುವುದು; ಅಟರಸ್ಟ ಕಾಯಿದೆ ಅಸ್ತಿತ್ವದಲ್ಲಿ ಇಲ್ಲದೇ ಇರುವುದರಿಂದ ಟ್ರಸ್ಟ್ ಆಸ್ತಿ ಹಾಳಾಗುತ್ತಿದ್ದರೆ, ಸರ್ಕಾರಕ್ಕೆ ಯಾವುದೇ ಕ್ರಮ ಕೈಗೊಳ್ಳಲು ಬರುತ್ತಿಲ್ಲವೆಂಬ ಸಂಗತಿ ನಿಜವೇ; ಯಾವ ಕಾಯಿದೆ ಪ್ರಕಾರ ಕ್ರಮ ಕೈಗೊಳ್ಳಲು ಬರುವುದು;

(ಈ) ಮೊದಲು ಚಾರಿಟಿ ಕಮಿಷನರ್ ಹಾಗೂ ಅಸಿಸ್ಟಂಟ್ ಕಮಿಷನರ್ ಟ್ರಸ್ಟ್ ಆಸ್ತಿಗಳ ಮೇಲ್ವಿಚಾರಣೆ, ಲೆಕ್ಕಪತ್ರ ತಪಾಸಣೆ ಮಾಡುವುದು ಹಾಗೂ ಮಠಗಳಿಗೆ ಉತ್ತರಾಧಿಕಾರಿಗಳನ್ನು ಬಿಟ್ಟಾಗ ರಿಜಿಸ್ಟರ್ ಮಾಡುವ ಎಲ್ಲಾ ಕೆಲಸ ಮಾಡುತ್ತಿದ್ದರು. ಆದರೆ ಈಗ ಅದನ್ನು ಯಾರು ಮಾಡುತ್ತಿರುವರು ;

(ಉ) ತಿದ್ದುಪಡಿಸಲಾದ ಬಾಂಬೆ ಪಬ್ಲಿಕ್ ಆಕ್ಟ್ ಕಾಯಿದೆ ಜಾರಿಗೆ ಬರುವವರೆಗೆ ಮಾತ್ರ ಈಗಿರುವ ಕಾಯಿದೆ ಮುಂದುವರೆಸಲಾಗುವುದೇ ;

(ಊ) ಬಾಂಬೆ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಾವಣೆಯಾದ ಕಲ್ಯಾಣ ಮಂಟಪದವರು ಪ್ರತಿ ವರ್ಷ ಆಡಿಟ್ ರಿಪೋರ್ಟ್‌ಗಳನ್ನು ಯಾರಿಗೆ ಕೊಡಬೇಕು ?

## ಡಾ. ಸರೋಜಿನಿ ಮಹಿಷಿ ವರದಿ ಜಾರಿಗೆ ತರುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೨೩೪೨ (೨೬೭೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಡಾ. ಸರೋಜಿನಿ ಮಹಿಷಿ ವರದಿ ಇನ್ನೂವರೆಗೂ ಸಂಪೂರ್ಣವಾಗಿ ಜಾರಿಗೆ ಬಂದಿರುವುದಿಲ್ಲ ಎಂಬ ಸಂಗತಿ ನಿಜವೇ;

(ಆ) ಈ ವರದಿಯ ಮುಖ್ಯಾಂಶಗಳೇನು;

(ಇ) ಕನ್ನಡಿಗರಿಗೆ ಉದ್ಯೋಗಗಳಲ್ಲಿ ಅನ್ಯಾಯವಾಗಬಾರದೆಂಬ ಉದ್ದೇಶದಿಂದ ಸಲಹೆ-ಸೂಚನೆ ನೀಡಲು ಈ ಸರೋಜಿನಿ ಮಹಿಷಿ ಸಮಿತಿ ನೇಮಿಸಲಾಯಿತೇ;

(ಈ) ಈ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲಾಗಿದೆ ;

(ಉ) ಸಮಿತಿಯ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರದೇ ಇರುವುದರಿಂದ ಕನ್ನಡಿಗರಿಗೆ ಉದ್ಯೋಗಾವಕಾಶ ಸಿಗದೆ, ಉದ್ಯೋಗದಿಂದ ವಂಚಿತರಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಸಮಿತಿಯ ಶಿಫಾರಸ್ಸುಗಳನ್ನು ಈವರೆಗೂ ಜಾರಿಗೊಳಿಸದಿರಲು ಕಾರಣವೇನು; ಹಾಗೂ ಜಾರಿಗೆ ತರಲು ಇರುವ ತೊಂದರೆಗಳೇನು ;

(ಋ) ಹಾಗಿದ್ದಲ್ಲಿ, ಕೂಡಲೇ ಸರೋಜಿನಿ ಮಹಿಷಿ ವರದಿಯನ್ನು ಜಾರಿಗೆ ತರಲಾಗುವುದೇ ?

# ಬೆಳಗಾವಿ ನಗರದಲ್ಲಿ ಬೂಡಾದಿಂದ ಫ್ಲಾಟ್ ಹಂಚುವ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿರುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೨೩೪೩ (೨೬೬೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ನಗರದಲ್ಲಿ ಎಷ್ಟು ವರ್ಷಗಳಿಂದ ಬೂಡಾದಿಂದ ಫ್ಲಾಟ್‌ಗಳನ್ನು ಹಂಚಿರುವುದಿಲ್ಲ ;

(ಆ) ಈಗ ಫ್ಲಾಟ್‌ಗಳನ್ನು ಹಂಚಲು ಸ್ಥಳಗಳನ್ನು ಗುರುತಿಸಲಾಗಿದೆಯೇ; ಎಲ್ಲಿ ಮತ್ತು ಎಷ್ಟು ಎಕರೆ ; (ವಿವರ ನೀಡುವುದು)

(ಇ) ರಿಯಲ್ ಎಸ್ಟೇಟ್‌ನವರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಫ್ಲಾಟ್ ಹಂಚುವುದನ್ನು ನಿಲ್ಲಿಸಿ, ಸ್ವಾಧೀನ ಪ್ರಕ್ರಿಯೆಯಲ್ಲಿ ತೊಂದರೆ ಆಗಿದೆ ಎಂದು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ರೈತರು ಸ್ವಇಚ್ಛೆಯಿಂದ ತಮ್ಮ ಜಮೀನು ಕೊಡಲು ಭೂಸ್ವಾಧೀನ ನಿಯಮಗಳಲ್ಲಿ ಏನಾದರೂ ಬದಲಾವಣೆ ತರಲಾಗಿದೆಯೇ ;

(ಉ) ಬೂಡಾ ಫ್ಲಾಟ್ ಹಂಚಿಕೆ ಮಾಡದೇ ಇರುವುದರಿಂದ ಬಡವರು ಹಾಗೂ ಮಧ್ಯಮ ವರ್ಗದ ಜನರಿಗೆ ತುಂಬಾ ತೊಂದರೆ ಆಗುತ್ತಿದ್ದು, ಇನ್ನಾದರೂ ಫ್ಲಾಟ್ ಹಂಚಲು ಕ್ರಮ ಕೈಗೊಳ್ಳಲಾಗಿದೆಯೇ ;

(ಊ) ಯಾವ ಉದ್ದೇಶಕ್ಕಾಗಿ ಬೂಡಾ ಪ್ರಾಧಿಕಾರ ಸ್ಥಾಪನೆಯಾಯಿತು ; ಅದರ ಧ್ಯೇಯ-ಧೋರಣೆಗಳೇನು ?

## ಬೆಂಗಳೂರಿನಲ್ಲಿ ಟೊಯೋಟೋ ಕಂಪನಿ ಪ್ರಾರಂಭ ಮಾಡುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೨೩೪೪ (೨೬೬೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ನಗರದಲ್ಲಿ ಟೊಯೋಟೋ ಕಾರ್ ಇಂಜಿನ್ ತಯಾರಿಸಲು ಕಂಪನಿ ಪ್ರಾರಂಭವಾಗುತ್ತಿರುವುದು ನಿಜವೇ ;

(ಆ) ಈಗ ಟೊಯೋಟೋ ಕಂಪನಿಯವರು ಕಾರ್ ಇಂಜಿನ್‌ಗಳನ್ನು ಯಾವ ಪ್ರದೇಶದಲ್ಲಿ ತಯಾರಿಸುತ್ತಿರುವರು ;

(ಇ) ಈ ಇಂಜಿನ್ ತಯಾರಿಸುವ ಕಾರ್ಖಾನೆ ಬೆಂಗಳೂರಿಗೆ ಬರುವುದರಿಂದ ಎಷ್ಟು ಜನರಿಗೆ ಉದ್ಯೋಗಾವಕಾಶ ಒದಗುವುದು ಹಾಗೂ ರಾಜ್ಯಕ್ಕೆ ಬೇರೆ ರೀತಿಯಿಂದ ಯಾವ ಸಹಾಯವಾಗುವುದು ;

(ಈ) ರಾಜ್ಯದಲ್ಲಿ ಉದ್ದಿಮೆಗಳನ್ನು ಸ್ಥಾಪಿಸಲು ಮೂಲಭೂತ ಸೌಕರ್ಯಗಳನ್ನು ಒದಗಿಸದೇ ಇರುವುದರಿಂದ ಹೊಸ ಉದ್ದಿಮೆಗಳು ರಾಜ್ಯದಲ್ಲಿ ಪ್ರಾರಂಭಿಸಲು ಮುಂದೆ ಬರುತ್ತಿಲ್ಲವೆಂಬ ಸಂಗತಿ ನಿಜವೇ;

(ಉ) ಹೊಸ ಉದ್ದಿಮೆಗಳನ್ನು ಸ್ಥಾಪಿಸಲು ಸರ್ಕಾರದವರು ಯಾವ-ಯಾವ ಸವಲತ್ತುಗಳನ್ನು ಉದ್ಯಮಿದಾರರಿಗೆ ಕೊಡಲಾಗುತ್ತಿದೆ? (ವಿವರ ನೀಡುವುದು)

## ರಾಜ್ಯದಲ್ಲಿ ಲಾಟರಿ ಯೋಜನೆಯನ್ನು ಪುನಃ ಪ್ರಾರಂಭಿಸುವುದು

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ) :-**

೨೩೪೫ (೨೬೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಲಾಟರಿ ಯೋಜನೆಯನ್ನು ಪುನಃ ಪ್ರಾರಂಭಿಸಬೇಕು ಎಂದು ರಾಜ್ಯ ಯೋಜನಾ ಆಯೋಗದ ಅಧ್ಯಕ್ಷರು ಸರ್ಕಾರಕ್ಕೆ ಸಲಹೆ ನೀಡಿದ ಸಂಗತಿ ನಿಜವೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಮುಂದಿದೆಯೇ ;

(ಇ) ಬೆಂಗಳೂರು ಹಾಗೂ ರಾಜ್ಯದ ಎಲ್ಲಾ ಕಡೆಗೆ ಕೇರಳ, ತಮಿಳುನಾಡು, ಗೋವಾ ರಾಜ್ಯದ ಲಾಟರಿಗಳು ಧಾರಾಳವಾಗಿ ಮಾರುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಲಾಟರಿ ಯೋಜನೆ ಪ್ರಾರಂಭಿಸುವುದರಿಂದ ಸಾಧಕ-ಬಾಧಕಗಳೇನು;

(ಉ) ಈ ಲಾಟರಿ ಯೋಜನೆ ಪ್ರಾರಂಭಿಸಿದರೆ ಸರ್ಕಾರಕ್ಕೆ ಎಷ್ಟು ಆದಾಯ ಬರುವುದು ;

(ಊ) ಎಷ್ಟು ಜನರಿಗೆ ಉದ್ಯೋಗಾವಕಾಶ ಸಿಗುವುದು ?

## ರಾಜ್ಯದಲ್ಲಿರುವ ಮಹಿಳಾ ಪೊಲೀಸ್ ಠಾಣೆಗಳ ಬಗ್ಗೆ

**ಶ್ರೀ ಗೋ. ಮಧುಸೂಧನ್ (ಪದವೀಧರರ ಕ್ಷೇತ್ರ) :-**

೨೩೪೬ (೨೬೪೯) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿರುವ ಒಟ್ಟು ಮಹಿಳಾ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹೊರರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಮಹಿಳಾ ಪೊಲೀಸ್ ಠಾಣೆಗಳ ಸಂಖ್ಯೆ ತೀರಾ ಕಡಿಮೆ ಇರುವುದನ್ನು ಸರ್ಕಾರ ಗಮನಿಸಿದೆಯೇ ;

(ಇ) ಹಾಗಿದ್ದಲ್ಲಿ, ಮಹಿಳೆಯರಿಗೆ ಉದ್ಯೋಗವಕಾಶ ಮತ್ತು ಸುರಕ್ಷೆ ದೃಷ್ಟಿಯಿಂದ ಮಹಿಳಾ ಪೊಲೀಸ್ ಠಾಣೆಗಳನ್ನು ಹೆಚ್ಚಿಸಲು ಸರ್ಕಾರ ಮುಂದಾಗುವುದೇ ; (ವಿವರ ನೀಡುವುದು)

(ಈ) ೨೦೧೪ರಲ್ಲಿ ನಡೆದ ಪೊಲೀಸ್ ಪೇದೆಗಳ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯ ಹಗರಣದಲ್ಲಿ ಇದುವರೆವಿಗೂ ಎಷ್ಟು ಜನ ಆರೋಪಿಗಳನ್ನು ಬಂಧಿಸಲಾಗಿದೆ (ಆರೋಪಿಗಳ ವಿವರ ನೀಡುವುದು)

(ಉ) ಸದರಿ ಹಗರಣದಲ್ಲಿ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಶಾಮೀಲಾಗಿರುವ ಬಗ್ಗೆ ಸರ್ಕಾರ ಗಮನಿಸಿದೆಯೇ ;

(ಊ) ಆಗಿದ್ದಲ್ಲಿ, ಅಂತಹ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ?

# ಮಹಾನಗರ ಪಾಲಿಕೆಗಳು

**ಶ್ರೀ ಗೋ. ಮಧುಸೂಧನ್ (ಪದವೀಧರರ ಕ್ಷೇತ್ರ) :-**

೨೩೪೭ (೨೬೯೬) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯದಲ್ಲಿರುವ ಪ್ರತಿಯೊಂದು ಮಹಾನಗರ ಪಾಲಿಕೆಯಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ದರ್ಜೆಯ ಉದ್ಯೋಗಿಗಳ ದರ್ಜೆವಾರು ವಿವರ ನೀಡುವುದು ಮತ್ತು ಅವರಿಗೆ ಒದಗಿಸಲಾಗಿರುವ ವಾಹನಗಳ ವಿವರ ನೀಡುವುದು ; (ಮಹಾನಗರ ಪಾಲಿಕೆವಾರು ನೀಡುವುದು)

(ಆ) ಪ್ರತಿಯೊಂದು ನಗರ ಪಾಲಿಕೆಯ ಪ್ರತಿ ವರ್ಷದ ನೌಕರರ ಸಂಬಳ, ಭತ್ಯೆ, ಪ್ರವಾಸ ಭತ್ಯೆ, ಸಾದಿಲ್ವಾರು ಮುಂತಾದ ವಾರ್ಷಿಕ ವೆಚ್ಚದ ವಿವರ ನೀಡುವುದು ;

(ಇ) ಪ್ರತಿಯೊಂದು ಮಹಾನಗರ ಪಾಲಿಕೆಯು ರಾಜ್ಯ ಸರ್ಕಾರದಿಂದ, ಕೇಂದ್ರ ಸರ್ಕಾರದಿಂದ ಇತರ ಸ್ವಾಯತ್ತ ಆರ್ಥಿಕ ಸಂಸ್ಥೆಗಳಿಂದ ಪಡೆದಿರುವ ಸಾಲದ ಮೊತ್ತದ ವಿವರವನ್ನು ನೀಡುವುದು ಮತ್ತು ಇವುಗಳಿಗೆ ಸಂದಾಯ ಮಾಡುತ್ತಿರುವ ಬಡ್ಡಿಯ ವಿವರಗಳನ್ನು ನೀಡುವುದು ;

(ಈ) ಈ ಎಲ್ಲ ಮಹಾನಗರ ಪಾಲಿಕೆಗಳಿಗೆ ಸಂದಾಯವಾಗುತ್ತಿರುವ ಆಸ್ತಿ ಶುಲ್ಕ, ನೀರಿನ ಶುಲ್ಕ, ನಕ್ಷೆ ಮಂಜೂರಾತಿ, ವಾಣಿಜ್ಯ ಪರವಾನಗಿ ; ಮುಂತಾದ ಬಾಬ್ತುನಲ್ಲಿ ಸಂದಾಯವಾಗುತ್ತಿರುವ

ಆದಾಯ ಮೊತ್ತವನ್ನು ನೀಡುವುದು ; ಅಲ್ಲದೇ ಈ ಪ್ರತಿಯೊಂದು ಮಹಾನಗರ ಪಾಲಿಕೆಯಲ್ಲಿಯೂ ಕಾಮಗಾರಿಗಳಿಗೆ ನೀಡಬೇಕಾಗಿರುವ ಬಾಕಿ ಮೊತ್ತದ ವಿವರಗಳನ್ನು ನೀಡುವುದು ?

## ರೌಡಿ ಷೀಟರ್ ಪಟ್ಟಿ.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೨೩೪೮ (೨೬೯೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯಾದ್ಯಂತ ಕಳೆದ ಒಂದು ವರ್ಷದಲ್ಲಿ ಎಷ್ಟು ಜನರನ್ನು ರೌಡಿ ಷೀಟ್‌ಗೆ ಸೇರಿಸಲಾಗಿದೆ ; (ಪ್ರತಿ ಠಾಣೆಯ ಪ್ರತಿಯೊಬ್ಬರ ಹೆಸರು, ವಯಸ್ಸು, ವಿಳಾಸ ಅವರ ಮೇಲಿನ ಆರೋಪ ಮುಂತಾದ ವಿವರಗಳನ್ನು ಜಿಲ್ಲಾವಾರು ನೀಡುವುದು)

(ಆ) ಕಳೆದ ಒಂದು ವರ್ಷದಲ್ಲಿ ಎಷ್ಟು ರೌಡಿ ಷೀಟರ್‌ಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ ? (ಪ್ರತಿ ಠಾಣಾವಾರು ಪ್ರತಿಯೊಬ್ಬರ ಹೆಸರು, ವಯಸ್ಸು, ವಿಳಾಸ ಮತ್ತು ಕೈಬಿಡಲು ಕಾರಣಗಳು ಮುಂತಾದ ವಿವರಗಳನ್ನು ಜಿಲ್ಲಾವಾರು ನೀಡುವುದು)

## ಗೋಹತ್ಯೆ ನಿಷೇಧ ಕಾನೂನಿನಲ್ಲಿ ಪ್ರಕರಣಗಳು

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೨೩೪೯ (೨೬೯೮) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯಾದ್ಯಂತ ಕಳೆದ ೩ ವರ್ಷಗಳಲ್ಲಿ ಗೋಹತ್ಯೆ ನಿಷೇಧದ ಕಾನೂನಿನ ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ;

ಮತ್ತು ಈ ಪ್ರಕರಣಗಳಲ್ಲಿ ಸಂರಕ್ಷಿಸಲ್ಪಟ್ಟ ಗೋವುಗಳ ಸಂಖ್ಯೆ ಎಷ್ಟು ;

(ಆ) ಅಕ್ರಮ ಗೋವುಗಳ ಸಾಗಾಟದಲ್ಲಿ ತೊಡಗಿದ್ದ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆಯೇ ; (ಅಂತಹ ಪ್ರಕರಣಗಳ ವಿವರ, ವಾಹನ ಸಂಖ್ಯೆ ಮೊದಲಾದ ವಿವರ ನೀಡುವುದು)

(ಇ) ಈ ೩ ವರ್ಷಗಳ ಅವಧಿಯಲ್ಲಿ ಈ ಅಪರಾಧದಲ್ಲಿ ತೊಡಗಿದ ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯಗಳಿಂದ ಶಿಕ್ಷೆ ಮತ್ತು ಜುಲ್ಮಾನೆ ವಿಧಿಸಲಾಗಿದೆ ? (ವಿವರ ನೀಡುವುದು)

## ಬಿ.ಡಿ.ಎ ನಿವೃತ್ತ ನೌಕರರಿಂದ ನಿವೇಶನಗಳಿಗೆ ಹಣ ಪಡೆದು ವಂಚಿಸಿರುವ ಬಗ್ಗೆ.

**ಶ್ರೀ ಗೋ. ಮಧುಸೂದನ್ (ಪದವೀಧರರ ಕ್ಷೇತ್ರ) :-**

೨೩೫೦ (೨೬೭೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ದಿನಾಂಕ: ೧೯-೦೪-೨೦೦೬ರ ಸರ್ಕಾರಿ ಆದೇಶದನ್ವಯ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಬಿಡಿಎ ನೌಕರರಿಗೆ ನಿವೇಶನಗಳನ್ನು ಹಂಚಿರುವುದು ನಿಜವೇ ; ಹಾಗಿದ್ದಲ್ಲಿ, ಎಷ್ಟು ನೌಕರ ಸದಸ್ಯರುಗಳಿಗೆ ಯಾವ ಯಾವ ಅಳತೆಯುಳ್ಳ ನಿವೇಶನಗಳನ್ನು ಎಲ್ಲೆಲ್ಲಿ ವಿತರಿಸಲಾಗಿದೆ ; (ನೌಕರ ಸದಸ್ಯರ ಹೆಸರು, ಸದಸ್ಯತ್ವ ಸಂಖ್ಯೆ, ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಗಳನ್ನು ನೀಡುವುದು)

(ಆ) ಬಿಡಿಎ ನೌಕರರಿಲ್ಲದೇ ಇತರ ಎರವಲು ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರು, ಬೇರೆ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ನಿವೇಶನಗಳನ್ನು ವಿತರಿಸಲಾಗಿದೆಯೇ ; ಹಾಗಿದ್ದಲ್ಲಿ, ಅವರ ಹೆಸರು, ಸದಸ್ಯತ್ವ ಸಂಖ್ಯೆ, ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಗಳನ್ನು ನೀಡುವುದು ;

(ಇ) ನಿವೇಶನಕ್ಕಾಗಿ ಬಿಡಿಎ ನಿವೃತ್ತ ನೌಕರರಿಂದ ಸದಸ್ಯತ್ವವನ್ನು ಪಡೆದಿರುವುದು ನಿಜವೇ ; ಹಾಗಿದ್ದಲ್ಲಿ, ಸದಸ್ಯತ್ವ ಪಡೆದಿರುವ ನಿವೃತ್ತ ನೌಕರರ ವಿವರ ಮತ್ತು ನಿವೇಶನಗಳನ್ನು ವಿತರಿಸಿರುವ ಸದಸ್ಯರ ವಿವರಗಳನ್ನು ನೀಡುವುದು ;

(ಈ) ಇನ್ನೂ ನಿವೇಶನಗಳನ್ನು ವಿತರಿಸಬೇಕಾದ ನಿವೃತ್ತ ನೌಕರ ಸದಸ್ಯರುಗಳ ಮಾಹಿತಿ ಒದಗಿಸುವುದು ; ಅವರಿಗೆ ನಿವೇಶನ ವಿತರಿಸಲಾಗುತ್ತದೆಯೇ ; ಇದು ಬಿಡಿಎ ಹೌಸಿಂಗ್ ಕೋ-ಅಪರೇಟಿವ್ ಸೊಸೈಟಿಯಾಗಿಲ್ಲದೇ ಬಿಡಿಎ ಎಂಪ್ಲಾಯೀಸ್ ವೆಲ್‌ಫೇರ್ ಸೊಸೈಟಿ ಆಗಿರುವುದರಿಂದ ಸೇವಾವಧಿಪೂರ್ಣ ಬಿಡಿಎನಲ್ಲಿ ಕರ್ತವ್ಯ ನಿರ್ವಹಿಸಿದ ನಿವೃತ್ತ ನೌಕರರಿಂದ ಹಣ ಸಂದಾಯ ಮಾಡಿಸಿಕೊಂಡು ನಿವೇಶನ ವಿತರಿಸದಿದ್ದರೆ ಅವರಿಗೆ ಅನ್ಯಾಯವಾಗುವುದಿಲ್ಲವೇ ; ಇದರ ಅವ್ಯವಹಾರಗಳ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು ;

(ಉ) ಸದರಿ ಸಂಘದ ಅವ್ಯವಹಾರಗಳ ಕಡತಗಳನ್ನು ಕರ್ನಾಟಕ ಉಚ್ಚ ನ್ಯಾಯಲಯವು ಮುಟ್ಟುಗೋಲು ಮಾಡಿದ್ದು, ನಿಜವೇ ; ನಂತರ

ಮುಟ್ಟುಗೋಲು ಹಾಕಿಕೊಂಡಿದ್ದ ದಾಖಲಾತಿಗಳನ್ನು ಯಾವ ದಿನಾಂಕದಂದು ಬಿಡುಗಡೆ ಮಾಡಿದೆ ;

(ಊ) ಸದರಿ ಸಂಘದ ವಿರುದ್ಧ ಸರ್ಕಾರವು ತನಿಖೆಗೆ ಆದೇಶಿಸಿರುವುದು ನಿಜವೇ ; ಈ ತನಿಖಾ ಆದೇಶದ ವಿರುದ್ಧ ಸಂಘದ ಅಧ್ಯಕ್ಷರು ಯಾವ ದಿನಾಂಕದಂದು ತಡೆಯಾಜ್ಞೆ ತಂದಿದ್ದಾರೆ ; ಇದನ್ನು ತೆರವುಗೊಳಿಸಲು ಇಲ್ಲಿಯುವರೆವಿಗೂ ಕೈಗೊಂಡಿರುವ ಕ್ರಮಗಳೇನು ? (ಸವಿವರ ವರದಿ ನೀಡುವುದು)

**ವಸತಿ ಯೋಜನೆಗಾಗಿ ರೈತರ ಸಹಭಾಗಿತ್ವದಲ್ಲಿ ವಿನ್ಯಾಸ ರಚನೆ.**

**ಶ್ರೀ ಮಾನೆ ಶ್ರೀನಿವಾಸ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೫೧ (೨೬೮೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ವಸತಿ ಯೋಜನೆಗಾಗಿ ರೈತರ ಸಹಭಾಗಿತ್ವದಲ್ಲಿ ವಿನ್ಯಾಸ ರಚಿಸಲು ಅವಕಾಶವಿದೆಯೇ ;

(ಆ) ಇದ್ದಲ್ಲಿ, ಇಲ್ಲಿಯವರೆಗೆ ಎಷ್ಟು ಇಂತಹ ರೈತರ ಸಹಭಾಗಿತ್ವದಲ್ಲಿ ವಿನ್ಯಾಸವಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಈ ಸಹಭಾಗಿತ್ವದಲ್ಲಿ ಸರಿಯಾದ ಅನುಪಾತ ಆಗಿಲ್ಲಾ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

## ರಾಜ್ಯದಲ್ಲಾಗುತ್ತಿರುವ ಭಯೋದ್ವಕರ ಚಟುವಟಿಕೆ.

**ಪ್ರೋ; ಪಿ.ವಿ.ಕೃಷ್ಣಭಟ್ಟ (ನಾಮನಿರ್ದೇಶನ ಹೊಂದಿದವರು) :**

೨೩೫೨ (೨೬೭೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಇಸ್ಲಾಮಿಕ್ ಸ್ಟೇಟ್ ಫಾರ್ ಇರಾಕ್ ಅಂಡ್ ಸಿರಿಯಾ (ಐ.ಎಸ್.ಐ.ಎಸ್) ಸಂಘಟನೆಯ ಮೆಹದಿ ಹಸನ್ ಸೆರೆ, ಡಿಸೆಂಬರ್ ೨೮ರಂದು ಮಹಿಳೆಯೊಬ್ಬರ ಸಾವಿಗೆ ಕಾರಣವಾದ ಬಾಂಬ್ ಸ್ಫೋಟ, ಬೋಡೋಲ್ಯಾಂಡ್ ಉಗ್ರಗಾಮಿಗಳ ಬಂಧನ ಇತ್ಯಾದಿ ಹಲವು ಭಯೋತ್ಪಾದಕ ಚಟುವಟಿಕೆಗಳು ಒಂದರ ಮೇಲೊಂದು ನಡೆಯುತ್ತಿದ್ದರೂ, ಈ ಎಲ್ಲಾ ಪ್ರಕರಣಗಳನ್ನು ಕುರಿತು ತನಿಖೆ ಮಾಡಲು ಸೂಕ್ತ ಅಧಿಕಾರವನ್ನು ಹೊಂದಿರುವ ಅಧಿಕಾರಿಯ ನೇಮಕವಾಗದಿರುವುದು ನಿಜವೇ ;

(ಆ) ಹಾಗಿದ್ದಲ್ಲಿ, ಇಂತಹ ಭಯೋತ್ಪಾದಕ ಘಟನೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಜನ ಭಾವಿಸುವಂತಾಗಿದೆ ಎನ್ನುವ ವಿಷಯದಲ್ಲಿ ಸರ್ಕಾರದ ಪ್ರತಿಕ್ರಿಯೆ ಏನು ;

(ಇ) ಮೇಲೆ ಹೇಳಿದಂತಹ ಘಟನೆಗಳು ಸೂಕ್ಷ್ಮ ಸ್ವರೂಪ ಮತ್ತು ಅವುಗಳಿಂದ ಜನಜೀವನದ ಮೇಲಾಗುವ ಗಂಭೀರ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಪೂರ್ಣ ಪ್ರಮಾಣದ ಅಧಿಕಾರವುಳ್ಳ ಸೂಕ್ತ ಅಧಿಕಾರಿಯನ್ನು ನೇಮಕ ಮಾಡಲು ಕ್ರಮ ಕೈಗೊಳ್ಳುವುದೇ ?

## ಬಿಷಪ್ ಕಾಟನ್ ಶಾಲೆಯ ಬಾಲಕಿಯರ ಮೇಲಿನ ದೌರ್ಜನ್ಯದ ಕುರಿತು.

**ಪ್ರೋ: ಪಿ.ವಿ.ಕೃಷ್ಣಭಟ್ಟ** (ನಾಮನಿರ್ದೇಶನ ಹೊಂದಿದವರು) :

೨೩೫೩ (೨೬೭೨) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತಮ್ಮ ಶಾಲೆಯ ಪ್ರಿನ್ಸಿಪಾಲರ ವರ್ಗಾವಣೆ ವಿರುದ್ಧ ಪ್ರತಿಭಟಿಸುತ್ತಿದ್ದ ಬಿಷಪ್ ಕಾಟನ್ ಬಾಲಕಿಯರ ಪ್ರೌಢಶಾಲೆಯ ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ ನಡೆಸಿದವರ ವಿರುದ್ಧ ಪೋಲಿಸರು ರಾಜಕೀಯ ಒತ್ತಡದಿಂದ ಕ್ರಮಕೈಗೊಂಡಿರುವುದಿಲ್ಲವೆಂದು ಆರೋಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವಿದ್ಯಾರ್ಥಿನಿಯರ ಪೋಷಕರು ದೂರಿರುವಂತೆ, ಶ್ರೀ ಜೆ.ಎಂ. ರಿಚರ್ಡ್, ರೆವ. ಸಂಜಯ್ ಸ್ಯಾಮುಯೆಲ್ ರೆವ. ಪ್ರಸನ್ನಕುಮಾರ್, ವಿಲ್ ಫ್ರೆಡ್‌ಥಾಮಸ್, ಎಬಿನೇಜರ್ ಸೌಂದರ್ ಎಂಬ ೫ ಜನರ ವಿರುದ್ಧ ಎಫ್.ಐ.ಆರ್ ದಾಖಲಾಗಿದ್ದರೂ, ಇದುವರೆಗೂ ಯಾರೊಬ್ಬರನ್ನು ಬಂಧಿಸದಿರಲು ಕಾರಣವೇನು ;

(ಇ) ಸಂಸ್ಥೆಯ ಆಡಳಿತ ಮಂಡಳಿಯು ವಿದ್ಯಾರ್ಥಿನಿಯರು ಮತ್ತು ಅಧ್ಯಾಪಕಿಯರ ಮೇಲೆ ಬಲಪ್ರಯೋಗ ಮಾಡಲು ತುಮಕೂರು ಹಾಗೂ ಚಿಕ್ಕಬಳ್ಳಾಪುರದಿಂದ ಗೂಂಡಾಗಳನ್ನು ಬರಮಾಡಿಕೊಂಡಿತ್ತು ಎನ್ನುವುದು ನಿಜವೇ ;

(ಈ) ಘಟನೆ ನಡೆದು ಸುಮಾರು ೨ ತಿಂಗಳಾಗಿದ್ದರು ಅಪರಾಧಿಗಳ ಮೇಲೆ ಪೋಲಿಸರು ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

(ಉ) ಈ ಘಟನೆ ಕುರಿತಾಗಿ ಉಪಲೋಕಾಯುಕ್ತರು ನೇರವಾಗಿ ಪೋಲಿಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆಯೇ ;

(ಊ) ಈ ಪ್ರಕರಣ ಕುರಿತಾಗಿ ಗೃಹ ಇಲಾಖೆ ಇದುವರೆಗೆ ಏನು ಕ್ರಮಗಳನ್ನು ಕೈಗೊಂಡಿದೆ ?

## ರಾಜ್ಯದಲ್ಲಿ ಲಭ್ಯ ಇರುವ ಸುಣ್ಣದ ಕಲ್ಲಿನ ನಿಕ್ಷೇಪ.

**ಶ್ರೀ ಜಿ.ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೫೪ (೨೬೭೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸಿಮೆಂಟ್ ಉತ್ಪಾದಿಸಲು ಲಭ್ಯವಿರುವ ಸುಣ್ಣದ ಕಲ್ಲಿನ (ಲೈಮ್ ಸ್ಟೋನ್) ಗಣಿ ನಿಕ್ಷೇಪದ ಸ್ಥಳಗಳು ಯಾವುವು; ಎಲ್ಲೆಲ್ಲಿ ಎಷ್ಟೆಷ್ಟು ಪ್ರಮಾಣದ ಸುಣ್ಣದ ಕಲ್ಲುಗಳು ದೊರೆಯುತ್ತಿವೆ ; (ಪ್ರಮಾಣದ ಮಾಹಿತಿ ಒದಗಿಸಿರಿ)

(ಆ) ರಾಜ್ಯದಲ್ಲಿ ವಿವಿಧೆಡೆ ಸಿಮೆಂಟ್ ಕಾರ್ಖಾನೆಗಳಿಗೆ ಹಂಚಿಕೆಯಾಗಿರುವ ಸುಣ್ಣದ ಕಲ್ಲಿನ (ಲೈಮ್‌ಸ್ಟೋನ್)ಗಣಿಗಳು ಯಾವುವು ; ಕಂಪನಿಗಳ ಸಮೇತ ಮಾಹಿತಿ ಒದಗಿಸಿರಿ ?

## ಬೆಂಗಳೂರು, ಮೈಸೂರು ನಗರಗಳ ಬೀದಿ ದೀಪಗಳು.

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೫೫ (೨೭೮೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಮತ್ತು ಮೈಸೂರು ನಗರದಲ್ಲಿರುವ ಬೀದಿ ದೀಪಗಳ ಸಂಖ್ಯೆ ಎಷ್ಟು ;

(ಆ) ಬೀದಿ ವಿದ್ಯುತ್ ದೀಪಗಳ ನಿರ್ವಹಣೆ ಹಾಗೂ ವಿದ್ಯುತ್ ಶುಲ್ಕಕ್ಕಾಗಿ ಪ್ರತಿ ತಿಂಗಳು ಎಷ್ಟು ಖರ್ಚು ಮಾಡಲಾಗುತ್ತಿದೆ ? (ಕಳೆದ ೬ ತಿಂಗಳಲ್ಲಿ ವೆಚ್ಚ ಮಾಡಿರುವ ಅನುದಾನ ಕುರಿತು ಮಾಹಿತಿ ಒದಗಿಸಿ)

## ಹಿರಿಯ ಅಧಿಕಾರಿಗಳ ರಾಜ್ಯ ಪ್ರವಾಸದ ಬಗ್ಗೆ.

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೫೬ (೨೭೮೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಹಿರಿಯ ಅಧಿಕಾರಿಗಳು ಕಳೆದ ೬ ತಿಂಗಳುಗಳಲ್ಲಿ ಮಾಡಿರುವ ರಾಜ್ಯ ಪ್ರವಾಸದ ಕುರಿತು ಮಾಹಿತಿ ಒದಗಿಸುವುದು ;

(ಆ) ಜಿಲ್ಲಾ ಪ್ರವಾಸದ ವೇಳೆ ನಡೆಸಿರುವ ಇಲಾಖೆ ಸಭೆಗಳು ಎಷ್ಟು ? (ಜಿಲ್ಲಾವಾರು ಮಾಹಿತಿ ಒದಗಿಸಿ)

## ಪೋಕ್ಸೋ ಕಾಯ್ದೆ.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೫೭ (೨೬೭೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೇಂದ್ರ ಸರ್ಕಾರವು ೨೦೧೨ರಲ್ಲಿ ಮಕ್ಕಳ ಮೇಲೆ ಆಗುತ್ತಿರುವ ಲೈಂಗಿಕ ದೌರ್ಜನ್ಯಗಳನ್ನು ತಡೆಗಟ್ಟಲು 'ಪೋಕ್ಸೋ' ಕಾಯ್ದೆಯನ್ನು ರಚಿಸಿದ್ದು ನಮ್ಮ ರಾಜ್ಯ ಸರ್ಕಾರವು ಈ ಕಾಯ್ದೆ ಕುರಿತು ಕೈಗೊಂಡ ಕ್ರಮಗಳೇನು ;

(ಆ) ಈ ಪೋಕ್ಸೋ ಕಾಯ್ದೆಯ ವಿಶೇಷತೆಗಳೇನು; ಇದುವರೆಗೂ ಈ ಕಾಯ್ದೆಯಡಿ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ; ಎಷ್ಟು ಪ್ರಕರಣಗಳಲ್ಲಿ ನ್ಯಾಯ ಒದಗಿಸಲಾಗಿದೆ ; ವಿವರ ನೀಡುವುದು ;

(ಇ) ಲೈಂಗಿಕ ದೌರ್ಜನ್ಯಗಳಿಂದ ಮಕ್ಕಳನ್ನು ಸಂರಕ್ಷಿಸಲು ಈ ಕಾಯ್ದೆಯಡಿ ವಿಶೇಷ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆಯೇ ; ಹಾಗಿದ್ದಲ್ಲಿ, ಇದುವರೆಗೂ ಕೈಗೊಂಡ ವಿವಿಧ ಕಾರ್ಯಕ್ರಮಗಳ ವಿವರ ನೀಡುವುದು ;

(ಈ) ಈ ಕಾಯ್ದೆಯಡಿ ಶಿಕ್ಷೆಗೆ ಒಳಪಡುವವರಿಗೆ ನೀಡುವ ಶಿಕ್ಷೆಯ ಪ್ರಮಾಣಗಳೇನು ? (ಪೂರ್ಣ ವಿವರ ನೀಡುವುದು)

# ಬೆಳಗಾವಿ ಜಿಲ್ಲೆಯಲ್ಲಿ ದರೋಡೆ, ಕಳ್ಳತನ ಪ್ರಕರಣಗಳು.

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೫೮ (೨೬೭೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ದರೋಡೆ, ಕಳ್ಳತನ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ವಿಳಂಬ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜಿಲ್ಲೆಯಲ್ಲಿ ೨೦೧೨–೧೩ ರಿಂದ ೨೦೧೪–೧೫ನೇ ಸಾಲಿನವರೆಗೆ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿರುತ್ತದೆ ;

(ಇ) ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ ಮತ್ತು ಎಷ್ಟು ಹಣ, ಒಡವೆ ಹಾಗೂ ಬಂಗಾರವನ್ನು ಅಪರಾಧಿಗಳಿಂದ ವಸೂಲಿ ಮಾಡಲಾಗಿದೆ ;

(ಈ) ಅಪರಾಧಿಗಳಿಂದ ಪತ್ತೆ ಹಚ್ಚಿ ವಸೂಲಿ ಮಾಡಲಾದ ವಸ್ತುಗಳನ್ನು ಸಂಬಂಧಪಟ್ಟವರಿಗೆ ವಾಪಸ್ಸು ನೀಡಲಾಗಿದೆಯೇ ? (ತಾಲ್ಲೂಕುವಾರು ವಿವರ ನೀಡುವುದು)

# ಅತ್ಯಾಚಾರದಂತಹ ಅಪರಾಧಗಳನ್ನು ವಿಚಾರಣೆಗೆ ಹೆಚ್ಚುವರಿ ನ್ಯಾಯಾಲಯಗಳು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೪೯ (೨೭೨೦) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅತ್ಯಾಚಾರದಂತಹ ಅಪರಾಧಗಳನ್ನು ವಿಚಾರಣೆ ನಡೆಸಲು ಮಂಜೂರು ಮಾಡಿರುವ ೧೦ ಹೆಚ್ಚುವರಿ ತ್ವರಿತಗತಿಯ ನ್ಯಾಯಾಲಯಗಳನ್ನು ಯಾವ ಯಾವ ಜಿಲ್ಲೆಗಳಲ್ಲಿ ಮಂಜೂರು ಮಾಡಿರುವಿರಿ ;

(ಆ) ಬೆಳಗಾವಿ ಜಿಲ್ಲೆಯಲ್ಲಿ ಈ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆಯೇ ; ಇಲ್ಲವಾದಲ್ಲಿ, ಸ್ಥಾಪಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಇ) ಇಂತಹ ನ್ಯಾಯಾಲಯಗಳಲ್ಲಿ ಮೂಲಭೂತ ಸೌಕರ್ಯ ಮತ್ತು ಸಿಬ್ಬಂದಿ ಕೊರತೆ ಒದಗಿಸಲಾಗಿದೆಯೇ ?

## ರಾಜ್ಯ ಸರ್ಕಾರಗಳಿಗೆ ೪೨% ಸಹಾಯಧನ ಹೆಚ್ಚಳ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ**
**(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೬೦ (೨೭೦೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೇಂದ್ರ ಸರ್ಕಾರದ ೧೪ನೇ ಹಣಕಾಸು ಆಯೋಗದ ವರದಿಯನ್ನಾಧರಿಸಿ ಎಲ್ಲಾ ರಾಜ್ಯ ಸರ್ಕಾರಗಳಿಗೆ ೪೨% ಸಹಾಯುಧನ ಹೆಚ್ಚಿಸಲಾಗಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿರುವುದು ನಿಜವೆ ;

(ಆ) ಕರ್ನಾಟಕ ಸರ್ಕಾರಕ್ಕೆ ಕಳೆದ ವರ್ಷಕ್ಕಿಂತ ಎಷ್ಟು ಹೆಚ್ಚು ಹಣ ಬರಲಿದೆ ;

(ಇ) ಈ ರೀತಿ ಬಂದ ಹಣವನ್ನು ಹಿಂದುಳಿದ ಪ್ರದೇಶದ ಯೋಜನೆಗಳಿಗೆ, ಹೈದ್ರಾಬಾದ್-ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ಪ್ರದೇಶಗಳಿಗೆ ಹಂಚಿಕೆ ಮಾಡಲು ವಿಚಾರವಿದೆಯೇ ;

(ಈ) ವಿಶೇಷತಃ ಬೆಳಗಾವಿ ಜಿಲ್ಲೆಯ ಹಿಂದುಳಿದ ಭಾಗಗಳಿಗೆ ಹಾಗೂ ವಿಶೇಷವಾಗಿ ನೀರಾವರಿ ಯೋಜನೆಗಳಿಗೆ ಹಣಕಾಸು ಒದಗಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ?

## ಕರ್ನಾಟಕ ಖಾದಿ ಬ್ರಾಂಡಿಂಗ್ ಯೋಜನೆ

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೧ (೨೭೦೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾದಿ ಉತ್ಪನ್ನಗಳಿಗೆ ಮಾರುಕಟ್ಟೆ ಸಹಾಯಧನವನ್ನು ನೀಡುವುದಕ್ಕಾಗಿ ೨೦೧೪–೧೫ನೇ ಸಾಲಿನ ಆಯವ್ಯಯದಲ್ಲಿ "ಕರ್ನಾಟಕ ಖಾದಿ ಬ್ರಾಂಡಿಂಗ್" ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಿರುವುದು ನಿಜವಲ್ಲವೆ ;

(ಆ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಕಳೆದ ವರ್ಷ ಇದಕ್ಕಾಗಿ ಮೀಸಲಿಡಲಾಗಿದ್ದ ೨ ಕೋಟಿ ರೂ.ಅನುದಾನ ಸದ್ಬಳಕೆಯಾಗಿದೆಯೇ ; (ವಿವರ ನೀಡುವುದು) ಈ ವರ್ಷವು ಅನುದಾನವನ್ನು ಹೆಚ್ಚಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ;

(ಈ) National Institute of Fashion Technology & Institute of Design ಸಂಸ್ಥೆಗಳ ಜೊತೆಯಲ್ಲಿ ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ?

## ಮುಜರಾಯಿ ಇಲಾಖೆಗೆ ಮೀಸಲಿಟ್ಟ ಅನುದಾನ.

**ಶ್ರೀ ಎನ್.ಎಸ್.ಬೋಸರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೬೨ (೨೬೭೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೩–೧೪ನೇ ಸಾಲಿನಲ್ಲಿ ರಾಜ್ಯ ಬಜೆಟ್‌ನಲ್ಲಿ ಮುಜರಾಯಿ ಇಲಾಖೆಗೆ ಮೀಸಲಿಟ್ಟ ಅನುದಾನ ಎಷ್ಟು;

(ಆ) ೨೦೧೪–೧೫ನೇ ಸಾಲಿನಲ್ಲಿ ಮುಜರಾಯಿ ಇಲಾಖೆಯಿಂದ ರಾಯಚೂರು ಜಿಲ್ಲೆಗೆ ನೀಡಿರುವ ಅನುದಾನ ಎಷ್ಟು ? (ಪೂರ್ಣ ವಿವರ ಒದಗಿಸುವುದು)

## ಕುಡಿಯುವ ನೀರಿನ ಹಾಗೂ ಒಳಚರಂಡಿ ವ್ಯವಸ್ಥೆ.

**ಶ್ರೀ ಎನ್.ಎಸ್. ಬೋಸರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೬೩ (೨೬೮೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾನ್ವಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಗಾಗಿ ೨೪x೭ ಯೋಜನೆಯಡಿ ಕೆ.ಯು.ಡಬ್ಲ್ಯೂ.ಎಸ್.ನಿಂದ ಮಂಜೂರಾತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಯನ್ನು ತುರ್ತಾಗಿ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಪೂರ್ಣ ವಿವರ ಒದಗಿಸುವುದು)

(ಇ) ರಾಯಚೂರು ನಗರದಲ್ಲಿ ಒಳಚರಂಡಿ ನಿರ್ಮಾಣಕ್ಕಾಗಿ ಎ.ಡಿ.ಬಿ.ಯಿಂದ ಸಾಲ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರ ಯಾವುದಾದರೂ ಕಾಲಮಿತಿಯನ್ನು ಹಾಕಿಕೊಂಡಿರುವುದೇ ; ಯಾವಾಗ ಪೂರ್ಣಗೊಳಿಸಲಾಗುವುದು ? (ಪೂರ್ಣ ವಿವರ ಒದಗಿಸುವುದು)

## ಒಳ ಚರಂಡಿಯ ವ್ಯವಸ್ಥೆ.

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೬೪ (೨೬೮೩)ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಳಗಾವಿ ಮಹಾನಗರದ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಎಲ್ಲಾ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ನಿರ್ಮಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಆ) ಮಹಾನಗರದ ಎಷ್ಟು ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ನಿರ್ಮಿಸಲಾಗಿದೆ ಹಾಗೂ ಒಳಚರಂಡಿ ವ್ಯವಸ್ಥೆ ಇಲ್ಲದಿರುವ ಬಡಾವಣೆಗಳಾವುವು ;

(ಇ) ಎಲ್ಲಾ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆ ನಿರ್ಮಿಸಲು ಬೇಕಾಗುವ ಕಾಲಾವಕಾಶ ಎಷ್ಟು ಹಾಗೂ ಒಳಚರಂಡಿ ನಿರ್ಮಿಸಲು ಯೋಜನೆ ಸಿದ್ಧಪಡಿಸಲಾಗಿದೆಯೇ ; ಅದರ ಅಂದಾಜು ವೆಚ್ಚ ಎಷ್ಟು ?

## ಬೆಳಗಾವಿ ಮಹಾನಗರದ ಘನತ್ಯಾಜ್ಯ ವಿಲೇವಾರಿ

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೫ (೨೬೮೨)ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಮಹಾನಗರದ ಘನತ್ಯಾಜ್ಯ ವಸ್ತುಗಳ ವಿಲೇವಾರಿಗೆ ಸರ್ಕಾರ ಈವರೆಗೆ ತೆಗೆದುಕೊಂಡ ಕ್ರಮಗಳೇನು ;

(ಆ) ಘನತ್ಯಾಜ್ಯ ವಿಲೇವಾರಿಗೆ ಭೂಮಿ ಮಂಜೂರು ಮಾಡುವ ಕ್ರಮ ಯಾವ ಹಂತದಲ್ಲಿದೆ ? (ಯಾವುದಾದರು ಜಾಗವನ್ನು ಜಿಲ್ಲಾಡಳಿತ ಸೂಚನೆ ಮಾಡಿದ್ದಲ್ಲಿ, ಅದರ ಬಗ್ಗೆ ಮಾಹಿತಿ ನೀಡುವುದು)

## ಕೆ.ಎ.ಟಿ. ಯಲ್ಲಿ ದಾಖಲಾಗಿರುವ ಪ್ರಕರಣಗಳು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೬ (೨೬೮೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕೆ.ಎ.ಟಿ (K.A.T.) ಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಒಟ್ಟು ಪ್ರಕರಣಗಳೆಷ್ಟು ; ಇವುಗಳಲ್ಲಿ ಇತ್ಯರ್ಥಗೊಂಡ

ಪ್ರಕರಣಗಳೆಷ್ಟು ; ಮತ್ತು ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳೆಷ್ಟು ; (ವರ್ಷವಾರು, ಪ್ರಕರಣವಾರು, ಇಲಾಖೆವಾರು ವಿವರ ನೀಡುವುದು)

(ಆ) ರಾಜ್ಯದ ಕೆ.ಎ.ಟಿ (K.A.T.) ಯಲ್ಲಿ ಕಳೆದ ಮೂರು ವರ್ಷಗಳಲ್ಲಿ ತಡೆಯಾಜ್ಞೆ ಪಡೆದ ಪ್ರಕರಣಗಳೆಷ್ಟು ; ಇವುಗಳಲ್ಲಿ ತಡೆಯಾಜ್ಞೆ ತೆರವಾದ ಪ್ರಕರಣಗಳೆಷ್ಟು ; ಮತ್ತು ತೆರವಿಗೆ ಬಾಕಿ ಇರುವ ಪ್ರಕರಣಗಳೆಷ್ಟು ; (ವರ್ಷವಾರು, ಪ್ರಕರಣವಾರು ವಿವರ ನೀಡುವುದು)

(ಇ) ಇಂತಹ ದೀರ್ಘಾವಧಿಯಿಂದ ತಡೆಯಾಜ್ಞೆಯಲ್ಲಿರುವ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳೇನು ?

## ಉಡುಪಿ ಜಿಲ್ಲೆಯಲ್ಲಿ ಮಾದಕ ದ್ರವ್ಯ ಭೂಗತ ಜಗತ್ತಿನ ಜಾಲದ ಕರೆಗಳ ದಾಖಲಾದ ಪ್ರಕರಣಗಳ ಕುರಿತು.

**ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೭ (೨೬೮೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾದ ಮಾಧಕ ದ್ರವ್ಯ ಜಾಲ ಪ್ರಕರಣಗಳ ಸಂಖ್ಯೆ ಎಷ್ಟು ; ಇವುಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳೆಷ್ಟು ; ಮತ್ತು ಪತ್ತೆ ಹಚ್ಚಲು ಬಾಕಿ ಇರುವ ಪ್ರಕರಣಗಳೆಷ್ಟು ; (ವರ್ಷವಾರು, ಠಾಣೆವಾರು, ಪ್ರಕರಣವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಭೂಗತ ಜಗತ್ತಿನವರ ಹೆಸರಿನಲ್ಲಿ ಹಣ ವಸೂಲಿ ಹಾಗೂ ಜೀವ ಬೆದರಿಕೆಯ ಅನಾಮಧೇಯ ಫೋನ್ ಕರೆಗಳ ಕುರಿತು ಬಂದ ದೂರುಗಳ ಸಂಖ್ಯೆ ಎಷ್ಟು ; ಮತ್ತು ಅವುಗಳಲ್ಲಿ ಪತ್ತೆ ಹಚ್ಚಲಾದ ಪ್ರಕರಣಗಳೆಷ್ಟು ; ಮತ್ತು ಪತ್ತೆ ಹಚ್ಚಲು ಬಾಕಿ ಇರುವ ಪ್ರಕರಣಗಳೆಷ್ಟು ; (ವಾರ್ಷವಾರು, ಠಾಣಾವಾರು, ಪ್ರಕರಣವಾರು, ವಿವರ ನೀಡುವುದು)

(ಇ) ಈ ಮೇಲಿನ ಪ್ರಕರಣಗಳನ್ನು ಪತ್ತೆ ಹಚ್ಚುವಲ್ಲಿ ಮತ್ತು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಉಡುಪಿ ಜಿಲ್ಲೆಯಲ್ಲಿನ ಶಿಲೆಕಲ್ಲು ಗಣಿಗಾರಿಕೆ .

**ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೮ (೨೬೮೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಡುಪಿ ಜಿಲ್ಲೆಯಲ್ಲಿ ಶಿಲೆಕಲ್ಲು ಗಣಿಗಾರಿಕೆಗೆ ಪರವಾನಿಗೆ ಹೊಂದಿರುವ ಪರವಾನಿಗೆದಾರರ ಸಂಖ್ಯೆ ಎಷ್ಟು ಮತ್ತು ಅವರು ಗಣಿಗಾರಿಕೆಗೆ ಪರವಾನಿಗೆ ಹೊಂದಿರುವ ಬಂಡೆಯ ಒಟ್ಟು ವಿಸ್ತೀರ್ಣವೆಷ್ಟು ; ಮತ್ತು ಗಣಿಗಾರಿಕೆಗೆ ಪರವಾನಿಗೆ ಹೊಂದಿರುವ ಬಂಡೆಯು ಇರುವ ಗ್ರಾಮ ಯಾವುದು ; (ಪರವಾನಿಗೆದಾರರ ಹೆಸರು, ವಿಳಾಸದೊಂದಿಗೆ ತಾಲ್ಲೂಕುವಾರು ವಿವರ ನೀಡುವುದು)

(ಆ) ಉಡುಪಿ ಜಿಲ್ಲೆಯಲ್ಲಿ ಜಲ್ಲಿ ಕ್ರಷರ್ ನಡೆಸಲು ಪರವಾನಿಗೆ ಹೊಂದಿರುವ ಪರವಾನಿಗೆದಾರರ ಸಂಖ್ಯೆ ಎಷ್ಟು ; ಮತ್ತು ಅವರು ಜಲ್ಲಿ ಕ್ರಷರ್ ನಡೆಸಲು ಪರವಾನಿಗೆ ಹೊಂದಿರುವ ಗ್ರಾಮ ಯಾವುದು ; ಮತ್ತು ಅವರು ದಿನವೊಂದಕ್ಕೆ ಉತ್ಪಾದಿಸುವ ಜಲ್ಲಿಯ ಪ್ರಮಾಣವೆಷ್ಟು ; ಮತ್ತು ಜಲ್ಲಿ ಕ್ರಷರ್ ಪರವಾನಿಗೆದಾರರಿಂದ ಪ್ರತಿದಿನ ಸರ್ಕಾರದ ಬೊಕ್ಕಸಕ್ಕೆ ಬರುವ ಆದಾಯವೆಷ್ಟು ? (ಜಲ್ಲಿ ಕ್ರಷರ್ ಪರವಾನಿಗೆದಾರರ ಹೆಸರು, ವಿಳಾಸದೊಂದಿಗೆ ತಾಲ್ಲೂಕುವಾರು ವಿವರ ನೀಡುವುದು)

## ರಾಜ್ಯದಲ್ಲಿನ ಅಮೃತ ಯೋಜನೆ .

**ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೬೯ (೨೬೮೮) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಮೃತ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು ; ಮತ್ತು ಈ ಯೋಜನೆಯ ಫಲಾನುಭವಿಗಳ ಆಯ್ಕೆಯ ಮಾನದಂಡವೇನು ; ಮತ್ತು ಯೋಜನೆಯಿಂದ ಸಿಗುವ ಸವಲತ್ತುಗಳು ಯಾವುವು ; ಮತ್ತು ಈ ಯೋಜನೆಯ ಅನುಷ್ಠಾನ ಮಾಡುವ ಸಂಸ್ಥೆ ಯಾವುದು ;

(ಆ) ರಾಜ್ಯದಲ್ಲಿ ಅಮೃತ ಯೋಜನೆಯಡಿ ಪ್ರಯೋಜನ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ವಿವಿಧ ನೀಡುವುದು)

## ವಾಣಿಜ್ಯ ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ.

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೩೭೦ (೨೬೯೩)ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸಾರ್ವಜನಿಕರ ವಾಣಿಜ್ಯ ಕಟ್ಟಡಗಳಿಗೆ ಬೆಸ್ಕಾಂ ವಿದ್ಯುತ್ ಸಂಪರ್ಕ ನೀಡಲು, ಪಾಲಿಕೆಯ ಸ್ವಾಧೀನ ಪತ್ರ ಕಡ್ಡಾಯಗೊಳಿಸಿ, ಪಾಲಿಕೆಯ ಆಯುಕ್ತರು ಆದೇಶ ಹೊರಡಿಸಿರುವುದರಿಂದ ಕನಿಷ್ಟ ಐದು ಸಾವಿರಕ್ಕೂ ಹೆಚ್ಚು ಅರ್ಜಿಗಳು ಬಾಕಿ ಉಳಿದು, ಆಸ್ತಿದಾರರು ತೊಂದರೆಗೆ ಸಿಲುಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ವಿಷಯಗಳನ್ನು ಸರಳೀಕರಣಗೊಳಿಸಿ ಆಸ್ತಿದಾರರಿಗೆ ಸಹಾಯ ಮಾಡಲು ಸರ್ಕಾರ ಚಿಂತಿಸುವುದೇ ?

## ಮಹಿಳೆಯರ ನಾಪತ್ತೆಯನ್ನು ತಡೆಗಟ್ಟುವುದು.

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :–**

೨೩೭೧ (೨೬೯೫) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ಎಷ್ಟು ಹೆಣ್ಣುಮಕ್ಕಳು ನಾಪತ್ತೆಯಾಗಿರುವ ಪ್ರಕರಣಗಳನ್ನು ಗುರುತಿಸಲಾಗಿದೆ ;

(ಆ) ಅವುಗಳಲ್ಲಿ ಎಷ್ಟು ಪ್ರಕರಣಗಳನ್ನು ಪತ್ತೆ ಮಾಡಲಾಗಿದೆ ;

(ಇ) ನೊಂದ ಆ ಹೆಣ್ಣುಮಕ್ಕಳ ರಕ್ಷಣೆಗೆ ಸರ್ಕಾರ ಕೈಗೊಂಡ ಕ್ರಮವೇನು ; ಎಷ್ಟು ಪ್ರಕರಣಗಳಲ್ಲಿ ಅಪರಾಧಿಗೆ ಶಿಕ್ಷೆಯಾಗಿದೆ ;

(ಈ) ಹೆಣ್ಣುಮಕ್ಕಳ ನಾಪತ್ತೆಯಾಗುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಪೂರ್ಣ ವಿವರ ನೀಡುವುದು)

## ತ್ಯಾಜ್ಯ ವಿಲೇವಾರಿ ಕುರಿತು.

**ಶ್ರೀಮತಿ ತಾರಾಅನೂರಾಧ (ನಾಮನಿರ್ದೇಶನ ಹೊಂದಿದವರು) :-**

೨೩೭೨ (೨೬೯೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸ್ವಚ್ಚತೆ ಮತ್ತು ತ್ಯಾಜ್ಯ ವಿಲೇವಾರಿಗಾಗಿ ಎಷ್ಟು ಗುತ್ತಿಗೆದಾರರುಗಳನ್ನು ಪಾಲಿಕೆ ಗುರುತಿಸಿ, ಕಾರ್ಯದೇಶಗಳನ್ನು ನೀಡಿದೆ ; (ಕಳೆದ ೩ ವರ್ಷಗಳಲ್ಲಿ ನೀಡಿರುವ ಗುತ್ತಿಗೆದಾರರ ಪ್ರತಿ ವಾರ್ಡ್ ವೈಸ್ ವರ್ಷವಾರು ಮಾಹಿತಿಗಳನ್ನು ನೀಡುವುದು)

(ಆ) ಪ್ರತಿ ಗುತ್ತಿಗೆದಾರರು ಎಷ್ಟು ಮಾನವಸಂಪನ್ಮೂಲ ತೊಡಗಿಸಿದ್ದೇವೆಂದು ಮಾಹಿತಿ ನೀಡಿ ಪ್ರತಿ ಮಾಹೆ ವೇತನ ಭತ್ಯೆಗಳನ್ನು ಪಡೆಯುತ್ತಿದ್ದರು ಮತ್ತು ಪಡೆಯುತ್ತಿದ್ದಾರೆ, ವೇತನ ಭತ್ಯೆ ಪಡೆಯುತ್ತಿರುವ ಮಾನವಸಂಪನ್ಮೂಲದ ಪ್ರಮಾಣ ವಾಸ್ತವವಾಗಿ ಉದ್ಯೋಗ ಸ್ಥಳಗಳಲ್ಲಿ ಇದೆಯೇ ಎಂಬುದನ್ನು ಪಾಲಿಕೆ ಖಾತರಿಪಡಿಸಿಕೊಂಡಿದೆಯೇ ;

(ಇ) ಈ ಬಗ್ಗೆ ದೂರುಗಳು ಏನಾದರೂ ಇವೆಯೇ; ಗುತ್ತಿಗೆದಾರರು ESI ಮತ್ತು PF ಹಣವನ್ನು ಸಂಬಂಧಪಟ್ಟ ಇಲಾಖೆಗಳಿಗೆ ಪಾವತಿಸಿರುವುದನ್ನು ಪಾಲಿಕೆ ಖಾತರಿಪಡಿಸಿಕೊಂಡಿದೆಯೆ ;

(ಈ) ಈ ಬಗ್ಗೆ ದೂರುಗಳು ಏನಾದರೂ ಇವೆಯೇ; ಈ ವಿಷಯಗಳಲ್ಲಿ ಬೆಳಕಿಗೆ ಬಂದ ಮತ್ತಿತರೆ ಅಕ್ರಮಗಳು ಏನಾದರೂ ಇವೆಯೇ ; ಬೆಳಕಿಗೆ ಬಂದ ಅಕ್ರಮಗಳ ಬಗ್ಗೆ ಪಾಲಿಕೆ/ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

## ರೇಷ್ಮೆ ಕೃಷಿಗೆ ಬಿಡುಗಡೆಯಾದ ಅನುದಾನ

**ಶ್ರೀ ಬಿ.ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೭೩ (೨೭೦೩) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೇಷ್ಮೆ ಕೃಷಿಗೆ ಬಿಡುಗಡೆಯಾದ ಅನುದಾನ ಎಷ್ಟು ;

(ಆ) ಈ ಅನುದಾನದಿಂದ ರಾಜ್ಯದಲ್ಲಿ ರೇಷ್ಮೆ ಕೃಷಿ ಬೆಳವಣಿಗೆಗೆ ತೆಗೆದುಕೊಂಡ ಕ್ರಮಗಳೇನು ;

(ಇ) ಕಳೆದ ೫ ವರ್ಷಗಳಿಂದ ರೇಷ್ಮೆ ಕೃಷಿ ಕ್ಷೇತ್ರದ ಉತ್ಪಾದನೆ ಇಳಿಮುಖವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ರೇಷ್ಮೆ ಉತ್ಪಾದನೆ ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯದಲ್ಲಿ ಸಿಮೆಂಟ್ ಕಾರ್ಖಾನೆಗಳು

**ಶ್ರೀ ಬಿ. ರಾಮಕೃಷ್ಣ ( ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೭೪ (೨೭೦೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಸಣ್ಣ ಮತ್ತು ದೊಡ್ಡ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳು ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ಕಾರ್ಖಾನೆಗಳು ರಾಜ್ಯ ಅಥವಾ ಕೇಂದ್ರ ಸರ್ಕಾರಗಳಿಗೆ ಒಳಪಟ್ಟಿವೆಯೇ ;

(ಇ) ಇವುಗಳ ವಾರ್ಷಿಕ ಉತ್ಪಾದನಾ ಪ್ರಮಾಣ ಎಷ್ಟು ;

(ಈ) ಕಾರ್ಖಾನೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆಯೇ; ಕಲ್ಪಿಸಲಾಗಿದ್ದರೆ ಏನೇನು ಸೌಲಭ್ಯಗಳನ್ನು ಕಲ್ಪಿಸಲಾಗಿದೆ ; (ಪೂರ್ಣ ಮಾಹಿತಿ ನೀಡುವುದು)

(ಉ) ಇತ್ತೀಚಿನ ದಿನಗಳಲ್ಲಿ ಸಿಮೆಂಟ್ ದರವು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಇದರ ದರವನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಕಳೆದ ವರ್ಷದಿಂದ ಇಲ್ಲಿಯವರೆಗೆ ಒಂದು ಸಿಮೆಂಟ್ ಬ್ಯಾಗ್‌ನ ದರವನ್ನು ನೀಡುವುದು)

(ಊ) ತಮಿಳುನಾಡಿನಲ್ಲಿ ಅಮ್ಮ ಸಿಮೆಂಟ್‌ನ್ನು ಕಡಿಮೆ ದರದಲ್ಲಿ ನೀಡುತ್ತಿರುವಂತೆ ಕರ್ನಾಟಕದಲ್ಲೂ ಅಣ್ಣ ಸಿಮೆಂಟ್‌ನ್ನು ನೀಡುವ ಅಥವಾ ಬೇರೆ ಯೋಜನೆಯ ಪ್ರಸ್ತಾವನೆ ಸರ್ಕಾರದ

ಮುಂದಿದೆಯೇ; ಹಾಗಿದ್ದಲ್ಲಿ, ಯಾವಾಗ ಅಣ್ಣ ಸಿಮೆಂಟ್‌ನ್ನು ನೀಡಲಾಗುವುದು ?

## ಬಿ.ಡಿ.ಎ., ಹೊರವರ್ತುಲ ರಸ್ತೆಯ ಅಭಿವೃದ್ಧಿ

**ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೩೭೫ (೨೭೧೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಮೈಸೂರು ರಸ್ತೆಯಿಂದ ತುಮಕೂರು ರಸ್ತೆವರೆಗಿನ ಹೊರ ವರ್ತುಲ ರಸ್ತೆಯನ್ನು ಯಾವ ವರ್ಷದಲ್ಲಿ ಎಷ್ಟು ಕೋಟಿ ರೂ.ಗಳ ವೆಚ್ಚದಲ್ಲಿ ಮಾಡಲಾಯಿತು ;

(ಆ) ಸದರಿ ರಸ್ತೆಯ ೨ ಕಡೆ ಸರ್ವೀಸ್ ರಸ್ತೆಗಾಗಿ ಯಾವ ಯಾವ ಜಾಗದಲ್ಲಿ ಎಷ್ಟೆಷ್ಟು ಜಮೀನನ್ನು ಬಿ.ಡಿ.ಎ., ಸ್ವಾಧೀನ ಪಡಿಸಿಕೊಂಡಿದೆ ಹಾಗೂ ಯಾವ ಯಾವ ಜಾಗದಲ್ಲಿ ಸದರಿ ರಸ್ತೆ ಹಾಲಿ ಒತ್ತುವರಿಯಾಗಿದೆ ; (ಪೂರ್ಣ ಮಾಹಿತಿ ಒದಗಿಸುವುದು)

(ಇ) ಸದರಿ ರಸ್ತೆಯ ಯಾವ ಯಾವ ಜಾಗದಲ್ಲಿ ಈವರೆವಿಗೂ ಬಿ.ಡಿ.ಎ ಸರ್ವೀಸ್ ರಸ್ತೆ ಮಾಡದಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿದೆ; ಕೂಡಲೇ ಇವುಗಳನ್ನು ಮಾಡಲು ಕೈಗೊಳ್ಳುವ ಕ್ರಮಗಳೇನು ;

(ಈ) ವಾರ್ಡ್ ನಂ ೬೯ ರಲ್ಲಿನ ಹೊರ ವರ್ತುಲ ರಸ್ತೆಗೆ ೨೦ ವರ್ಷಗಳ ಹಿಂದೆಯೇ ರೂ. ೨೦.೦೦ ಕೋಟಿ ಖರ್ಚು

ಮಾಡಿ ನಿರ್ಮಿಸಿರುವ ಬ್ರಿಡ್ಜ್ ಕೆಳಗೆ ನಗರ ಪಾಲಿಕೆ ಗುತ್ತಿಗೆದಾರರು ಅನಧಿಕೃತವಾಗಿ ಕಸ ಸಂಗ್ರಹಿಸಿ ಪ್ರತಿದಿನ ಬೆಂಕಿ ಹಚ್ಚುತ್ತಿರುವುದರಿಂದ, ಬಹುಕೋಟಿ ಸಾರ್ವಜನಿಕ ಬ್ರಿಡ್ಜ್ ಅಪಾಯದ ಸ್ಥಿತಿ ಎದುರಾಗುತ್ತಿರುವುದರಿಂದ ಇದನ್ನು ಕೂಡಲೇ ನಿಲ್ಲಿಸಿ, ಇಲ್ಲಿ ಸರ್ವೀಸ್ ರಸ್ತೆಗಳನ್ನು ನಿರ್ಮಿಸಲು ಬಿ.ಡಿ.ಎ ತಕ್ಷಣ ಕೈಗೊಳ್ಳುವ ಕ್ರಮಗಳೇನು ;

(ಉ) ಈ ೧೦೦ ಅಡಿ ರಸ್ತೆ ಟ್ರಾಫಿಕ್‌ನಿಂದ ತುಂಬಾ ಕಿರಿದಾಗಿದ್ದು, ಅದನ್ನು ೧೫೦ ಅಥವಾ ೨೦೦ ಅಡಿ ರಸ್ತೆಯನ್ನಾಗಿ ವಿಸ್ತರಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಕಸ ವಿಲೇವಾರಿಯ ಅವ್ಯವಹಾರ

**ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :–**

೨೩೭೬ (೨೭೧೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೆಂಗಳೂರು ಮಹಾನಗರ ಪಾಲಿಕೆಯ ಕಸ ವಿಲೇವಾರಿಯ ಅವ್ಯವಹಾರದಲ್ಲಿ ಪಾಲುದಾರರಾಗಿರುವ ಅಧಿಕಾರಿಗಳು, ಗುತ್ತಿಗೆದಾರರು ಹಾಗೂ ಇತರೆ ಪ್ರತಿನಿಧಿಗಳು ಯಾರ್‍ಯಾರು; ಎಲ್ಲೆಲ್ಲಿ ಹಾಗೂ ಯಾವ ಯಾವ ವಾರ್ಡ್‌ಗಳಲ್ಲಿ ಅವ್ಯವಹಾರವಾಗಿರುತ್ತದೆ;

(ಆ) ಬಿ.ಬಿ.ಎಂ.ಪಿ ೬ನೇ ವಾರ್ಡ್‌ನ ಕಸ ವಿಲೇವಾರಿ ಕಾಮಗಾರಿಯನ್ನು ಕಳೆದ ೦೫ ವರ್ಷಗಳಿಂದ ಯಾವ ಯಾವ ಗುತ್ತಿಗೆದಾರರಿಗೆ ನೀಡಲಾಗಿದೆ ಹಾಗೂ ಯಾರು ಯಾರಿಗೆ ಪ್ರತಿ ತಿಂಗಳು ಎಷ್ಟೆಷ್ಟು ಹಣವನ್ನು ನೀಡಲಾಗಿರುತ್ತದೆ.

(ಇ) ೬೯ನೇ ವಾರ್ಡ್‌ನಲ್ಲಿನ ಹೊರ ವರ್ತುಲ ರಸ್ತೆ ಬ್ರಿಡ್ಜ್ ಕೆಳಗೆ ಹಾಗೂ ಹಾಸ್‌ಮಾಟ್ ಕಾಲೇಜ್ ಪಕ್ಕದಲ್ಲಿರುವ ಹಳ್ಳದ ಸುತ್ತಮುತ್ತ ಪ್ರತಿನಿತ್ಯ ಸಾರ್ವಜನಿಕರು ಹಾಕುತ್ತಿರುವ ಕಸವನ್ನು ಗುಡಿಸಿ ಸಾಗಿಸದೆ ಬೆಂಕಿ ಹಚ್ಚುವುದು ಹಾಗೂ ರಾಜಕಾಲುವೆಗೆ ತಳ್ಳುತ್ತಿರುವುದರಿಂದ ದುರ್ವಾಸನೆ ಹಾಗೂ ಪರಿಸರ ಮಾಲಿನ್ಯದಿಂದ ಸುತ್ತಮುತ್ತಲ ನಾಗರೀಕರಿಗೆ ತೊಂದರೆಯಾಗುತ್ತಿದ್ದು, ಇದನ್ನು ಸರಿಪಡಿಸಲು ಸರ್ಕಾರ ಕೂಡಲೆ ಕೈಗೊಳ್ಳುವ ಕ್ರಮಗಳೇನು;

(ಈ) ಮೇಲ್ಕಂಡ ಅವ್ಯವಸ್ಥೆಗೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಯಾರ್‍ಯಾರು; ಕರ್ತವ್ಯ ವಿಫಲತೆ ಬಗ್ಗೆ ಅವರುಗಳ ಮೇಲೆ ಕೈಗೊಳ್ಳುವ ಕ್ರಮಗಳೇನು? (ಸಂಬಂಧಿಸಿದವರ ಹೆಸರು, ಹುದ್ದೆ, ವಿಳಾಸ, ದೂರವಾಣಿ ಸಂಖ್ಯೆ, ಇತ್ಯಾದಿ ಪೂರ್ಣ ವಿವರಗಳನ್ನು ಒದಗಿಸುವುದು)

## ಚಿನ್ನ ಮತ್ತು ಬೆಳ್ಳಿ ವರ್ತಕರಿಗೆ ಕಿರುಕುಳ

**ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೩೭೭ (೨೭೦೬) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಕಳುವಿನ ಚಿನ್ನವನ್ನು ಅಪಾದಿತರು ಚಿನ್ನದ ವರ್ತಕರಿಗೆ ಮಾರಾಟ ಮಾಡಿರುವ ಬಗ್ಗೆ ರಾಜ್ಯದಲ್ಲಿ ದಾಖಲಾಗಿರುವ ಕೇಸ್‌ಗಳು ಸರ್ಕಾರದ ಗಮನಕ್ಕೆ ಬಂದಿವೆಯೇ; ಇದ್ದಲ್ಲಿ ಆ ಕೇಸ್‌ಗಳ ವಿವರಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು; ಮೇಲೆ

ಹೇಳಿದ ವಿಷಯಕ್ಕೆ ತೆಗೆದುಕೊಂಡಿರುವ ಕ್ರಮಗಳ ವಿವರ ನೀಡುವುದು ;

(ಆ) ಇತರೆ ರಾಜ್ಯಗಳಿಂದ ಚಿನ್ನ, ಬೆಳ್ಳಿ ವಹಿವಾಟಿಗಾಗಿ, ಚಿನ್ನ, ಬೆಳ್ಳಿಯನ್ನು ತೆಗೆದುಕೊಂಡು ಬರುವ ವರ್ತಕರಿಗೆ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಮತ್ತು ಇತರೆ ಸ್ಥಳಗಳಲ್ಲಿ ಆಗುತ್ತಿರುವ ಕಿರುಕುಳ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ನಕಲಿ ಪೊಲೀಸರು ಇಂತಹ ವರ್ತಕರಿಗೆ ಮಾಡುತ್ತಿರುವ ವಂಚನೆ ತಮ್ಮ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇದರ ನಿವಾರಣೆಗೆ ತೆಗೆದುಕೊಂಡಿರುವ ಕ್ರಮಗಳೇನು ;

(ಈ) ಬೇರೆ ಊರುಗಳಿಂದ ಚಿನ್ನ, ಬೆಳ್ಳಿ ತರುತ್ತಿರುವ ವರ್ತಕರು ಯಾವ ದಾಖಲೆಗಳನ್ನು ಹೊಂದಿರಬೇಕೆಂಬ ನಿಯಮಗಳನ್ನು ರೂಪಿಸಲಾಗಿದೆ ? (ಅದರ ವಿವರ ಹಾಗೂ ರೂಪುರೇಷೆಗಳನ್ನು ನೀಡುವುದು)

## ನಕಲಿ ಅಕ್ಷಯ ಪಾತ್ರೆ ಜಾಲ

**ಶ್ರೀ ಟಿ. ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) :-**

೨೩೭೮ (೨೭೧೭) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರತಿನಿತ್ಯ ಹಣ ದ್ವಿಗುಣಗೊಳಿಸುತ್ತದೆಂಬ ಅಕ್ಷಯ ಪಾತ್ರೆ ಚೆಂಬನ್ನು ಯಾವ ಯಾವ ಸಮಾಜಘಾತುಕ ಶಕ್ತಿಗಳು ಬೆಂಗಳೂರಿನಲ್ಲಿ ಮಾರಾಟ ಮಾಡಿರುತ್ತಾರೆ ;

(ಆ) ಮೇಲ್ಕಂಡ ಸಮಾಜಘಾತುಕ ಶಕ್ತಿಗಳೊಂದಿಗೆ ಸಂಪರ್ಕ ಬೆಳೆಸಿ ಈ ಚೆಂಬನ್ನು ಯಾವ ಯಾವ ವ್ಯಕ್ತಿಗಳು ಎಷ್ಟೆಷ್ಟು ಕೋಟಿ ಹಣ ನೀಡಿ ಖರೀದಿಸಿರುತ್ತಾರೆ ; (ಅವರುಗಳ ಪೂರ್ಣ ವಿವರಗಳನ್ನು ಒದಗಿಸುವುದು)

(ಇ) ಮೇಲ್ಕಂಡ ಪ್ರಕರಣದಲ್ಲಿ ಶಾಮೀಲಾಗಿರುವ ಎಷ್ಟು ವ್ಯಕ್ತಿಗಳನ್ನು ಪೋಲೀಸ್ ಇಲಾಖೆ ತನಿಖೆ ನಡೆಸಿದೆ ; (ತನಿಖೆಯ ಪೂರ್ಣ ವಿವರಗಳನ್ನು ಒದಗಿಸುವುದು)

(ಈ) ಒಂದು ಚೆಂಬಿಗೆ ೫ ಕೋಟಿ ರೂ. ನೀಡಿರುವ ಹಣ, ಕಪ್ಪು ಹಣವಾಗಿದ್ದು, ಈ ರೀತಿಯ ಕಪ್ಪು ಹಣ ದಂಧೆ ವಿರುದ್ಧ ಸರ್ಕಾರ ಕೂಡಲೇ ಕೈಗೊಳ್ಳುವ ಕ್ರಮಗಳೇನು ;

(ಉ) ಮೇಲ್ಕಂಡ ಕಪ್ಪುಹಣ ನೀಡಿರುವ ವ್ಯಕ್ತಿಗಳು ಕಳೆದ ೫ ವರ್ಷಗಳಿಂದ ವಿವಿಧ ಯಾವ ಯಾವ ಮೂಲಗಳಿಂದ ಗಳಿಸಿರುವ ಆದಾಯವೆಷ್ಟು; ಹಾಗೂ ಯಾವ ಯಾವ ತೆರಿಗೆಗಳನ್ನು ಎಷ್ಟೆಷ್ಟು ಪಾವತಿಸಿರುತ್ತಾರೆ ಹಾಗೂ ಆದಾಯ ತೆರಿಗೆ, ಉದ್ಯೋಗ ತೆರಿಗೆ ಹಾಗೂ ಇತರೆ ಯಾವ ಯಾವ ತೆರಿಗೆಗಳನ್ನು ಸರ್ಕಾರಕ್ಕೆ ವಂಚಿಸಿ ಈ ರೀತಿ ಕೋಟ್ಯಾಂತರ ಹಣವನ್ನು ಒಂದು ಚೆಂಬಿಗೆ ನೀಡಿರುತ್ತಾರೆ ; (ಈ ಬಗ್ಗೆ ತನಿಖೆ ಮಾಡಿರುವ ಪೂರ್ಣ ಮಾಹಿತಿ ಒದಗಿಸುವುದು)

(ಊ) ಮೇಲ್ಕಂಡ ವ್ಯಕ್ತಿಗಳು ಸುಮಾರು ಒಂದು ವರ್ಷದ ಹಿಂದೆಯೇ ಅಕ್ಷಯ ಹಂಡೆಯನ್ನು ೫೦ ಕೋಟಿ ಕಪ್ಪು ಹಣದಲ್ಲಿ ಖರೀದಿಸಲಾಗಿದ್ದು ಈ ಬಗ್ಗೆಯೂ ಪೋಲೀಸ್ ಉನ್ನತಾಧಿಕಾರಿಗಳು ತನಿಖೆ ನಡೆಸಿರುವ ಪೂರ್ಣ ಮಾಹಿತಿ ನೀಡುವುದು ?

## ರಸ್ತೆ ಅಗಲೀಕರಣ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :-**

೨೩೭೯ (೨೭೧೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಭದ್ರಪ್ಪಬಡಾವಣೆಯ ಮುಖ್ಯ ರಸ್ತೆಯನ್ನು ಅಗಲೀಕರಣಗೊಳಿಸಲು, ರಸ್ತೆಯ ಇಕ್ಕೆಲಗಳ ಆಸ್ತಿಗಳ ಮಾಲೀಕರುಗಳಿಂದ ಆಸ್ತಿಗಳನ್ನು ಪಡೆದು, ಕಾಮಗಾರಿಗಳನ್ನು ಪ್ರಾರಂಭಿಸಿ, ತರುವಾಯ ಸ್ಥಗಿತಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಯಾವ ಕಾರಣಗಳಿಗಾಗಿ ಕಾಮಗಾರಿಗಳು ಸ್ಥಗಿತಗೊಂಡಿವೆ; ಪುನಃ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು ;

(ಇ) ರಸ್ತೆ ಅಗಲೀಕರಣಕ್ಕಾಗಿ ಆಸ್ತಿ ಬಿಟ್ಟುಕೊಟ್ಟ ಮಾಲೀಕರಿಗೆ ಯಾವ ರೂಪದ ಪರಿಹಾರ ಮತ್ತು ಯಾವಾಗ ನೀಡಲಾಗುವುದು ?

## ಕಾಮಗಾರಿ ಗೋಲ್‌ಮಾಲ್

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :-**

೨೩೮೦ (೨೭೧೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಳೆನೀರು ಕಾಲುವೆಯ ಹೂಳೆತ್ತುವ ಕಾಮಗಾರಿಗಳಲ್ಲಿ ಭಾರಿ ಭ್ರಷ್ಟಾಚಾರ ನಡೆದಿದೆ ಎಂದು ಬೃಹತ್ ಬೆಂಗಳೂರು ಮಹಾನಗರ

ಪಾಲಿಕೆಯ ಆಯುಕ್ತರ ತಾಂತ್ರಿಕ ಜಾಗೃತ ಕೋಶ ಬಯಲಿಗೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಎಷ್ಟು ಕಾಮಗಾರಿಗಳನ್ನು ಮತ್ತು ಎಷ್ಟು ಹಣದ ಅವ್ಯವಹಾರ ನಡೆದಿದೆ ; (ಪೂರ್ಣ ವಿವರಗಳನ್ನು ನೀಡುವುದು)

(ಇ) ತಪ್ಪಿತಸ್ಥರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

## ತ್ಯಾಜ್ಯ ವಿಲೇವಾರಿಯಲ್ಲಿ ಅವ್ಯವಹಾರ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :-**

೨೩೮೧ (೨೭೧೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ತ್ಯಾಜ್ಯ ವಿಲೇವಾರಿ ಗುತ್ತಿಗೆಗಳಲ್ಲಿ ಕೋಟ್ಯಾಂತರ ರೂಪಾಯಿಗಳ ಭಾರಿ ಅಕ್ರಮಗಳು ನಡೆದಿರುವುದನ್ನು, ಪಾಲಿಕೆಯ ಆಂತರಿಕ ತನಿಖಾ ವ್ಯವಸ್ಥೆಯಾಗಿರುವ 'ಆಯುಕ್ತರ ತಾಂತ್ರಿಕ ಜಾಗೃತ ಕೋಶ (TVCC)' ಪತ್ತೆ ಹಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಯಾವ ಯಾವ ಗುತ್ತಿಗೆದಾರರು ಮತ್ತು ಅಧಿಕಾರಿ/ ಸಿಬ್ಬಂದಿಗಳು ಈ ಅವ್ಯವಹಾರಗಳಲ್ಲಿ ಭಾಗಿಯಾಗಿದ್ದಾರೆ ಮತ್ತು ಯಾವ್ಯಾಯ ಸ್ವರೂಪದ ಅವ್ಯವಹಾರಗಳನ್ನು ಎಸಗಿದ್ದಾರೆ ;

(ಇ) ಈ ಅವ್ಯವಹಾರಗಳಿಂದ ಪಾಲಿಕೆಗೆ ಉಂಟಾಗಿರುವ ನಷ್ಟ ಎಷ್ಟು ;

(ಈ) ಈ ಅವ್ಯವಹಾರಗಳ ಬಗ್ಗೆ ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕ್ರಮಗಳೇನು ?

## ಬಿ.ಬಿ.ಎಂ.ಪಿ ಆಯುಕ್ತರ ಸಹಿ ದುರ್ಬಳಕೆ

**ಡಾ: ಜಯಮಾಲ ರಾಮಚಂದ್ರ (ನಾಮನಿರ್ದೇಶನ ಹೊಂದಿದವರು) :-**

೨೩೮೨ (೨೭೦೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರು ಆಯ್ದ ಕಾಮಗಾರಿಗಳಿಗಾಗಿ ರೂ.೩೯ ಲಕ್ಷಗಳನ್ನು ಬಿಡುಗಡೆ ಮಾಡಲು ಆದೇಶ ಮಾಡಿದ್ದ ಕಡತದ ಟಿಪ್ಪಣಿಯ ಹಾಳೆಯನ್ನು ದುರ್ಬಳಕೆ ಮಾಡಿಕೊಂಡು, ರೂ.೪೯.೦೦ ಕೋಟಿ ಹಣ ಬಿಡುಗಡೆಗೊಳಿಸಿಕೊಂಡು ಪಾಲಿಕೆಯ ಅಧಿಕಾರಿಗಳು, ಸಿಬ್ಬಂದಿಗಳು ಮತ್ತು ಗುತ್ತಿಗೆದಾರರು ದುರ್ಬಳಕೆ ಮಾಡಿಕೊಂಡಿರುವ ಪ್ರಕರಣ ಬೆಳಕಿಗೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಪ್ರಕರಣದಲ್ಲಿ ಭಾಗಿಯಾಗಿರುವ ಗುತ್ತಿಗೆದಾರರು, ಅಧಿಕಾರಿಗಳು ಹಾಗೂ ಇತರರ ಪೂರ್ಣ ಮಾಹಿತಿ ಒದಗಿಸುವುದು ;

(ಆ) ತಪ್ಪಿತಸ್ಥರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ?

## ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿರುವ ವಸತಿ ಸಮುಚ್ಛಯಗಳು

**ಶ್ರೀ ಎ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :-**

೨೩೮೩ (೨೭೧೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಒಟ್ಟು ಎಷ್ಟು ವಸತಿ ಸಮುಚ್ಛಯಗಳಿದ್ದಾವೆ; ಅವುಗಳು ಯಾವುವು ; (ಮಾಲೀಕರಾರು ಪೂರ್ಣ ವಿವರ ನೀಡುವುದು)

(ಆ) ವಸತಿ ಸಮುಚ್ಛಯಗಳನ್ನು ನಿರ್ಮಿಸಲು ಇರುವ ನಿಬಂಧನೆಗಳೇನು ; (ಪೂರ್ಣ ವಿವರ ನೀಡುವುದು)

(ಇ) ಯಾವ ಯಾವ ವಾರ್ಡ್‌ನಲ್ಲಿ ಯಾವ ಯಾವ ರಸ್ತೆಗಳನ್ನು ವಾಣಿಜ್ಯ ಮತ್ತು ವಸತಿ ರಸ್ತೆಗಳನ್ನಾಗಿ ಮೂಲ ನಕ್ಷೆಯಲ್ಲಿ ಘೋಷಿಸಲಾಗಿದೆ ; (ರಸ್ತೆವಾರು ವಿವರ ನೀಡುವುದು)

(ಈ) ಮೂಲ ನಕ್ಷೆಗೆ ವ್ಯತಿರಿಕ್ತವಾಗಿ ಯಾವ ಯಾವ ರಸ್ತೆಗಳಲ್ಲಿ ಯಾವ ಯಾವ ಕಟ್ಟಡ ಮಾಲೀಕರು ವಸತಿ ನಿವೇಶನಗಳನ್ನು ವಾಣಿಜ್ಯ ನಿವೇಶನಗಳನ್ನಾಗಿ ಮಾಡಿಕೊಂಡಿದ್ದಾರೆ ; (ವಿವರ ನೀಡುವುದು)

(ಉ) ವಸತಿ ಮತ್ತು ವಾಣಿಜ್ಯ ಕಟ್ಟಡಗಳಿಗೆ ನಕ್ಷೆ ಮತ್ತು ಪರವಾನಗಿ ನೀಡಲು ಇರುವ ನಿಬಂಧನೆಗಳೇನು; ಅಂತಹ ನಿಬಂಧನೆಗಳನ್ನು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಉಲ್ಲಂಘಿಸಿದ್ದಾರೆಯೇ; ಉಲ್ಲಂಘಿಸಿದ್ದರೆ ಯಾರು ಯಾರು ಉಲ್ಲಂಘಿಸಿದ್ದಾರೆ; ಯಾವ ಯಾವ ರೀತಿ ಉಲ್ಲಂಘನೆ ಮಾಡಿದ್ದಾರೆ ಮತ್ತು ಅವರುಗಳ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ? (ಪೂರ್ಣ ವಿವರ ನೀಡುವುದು)

## ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಇರುವ ಉದ್ಯಾನವನಗಳು

**ಶ್ರೀ ವಿ.ಎಸ್. ಉಗ್ರಪ್ಪ (ನಾಮನಿರ್ದೇಶನ ಹೊಂದಿದವರು) :-**

೨೩೮೪ (೨೭೨೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಇರುವ ಉದ್ಯಾನವನಗಳು ಎಷ್ಟು; ಯಾವುವು ; (ಪೂರ್ಣ ವಿವರ ನೀಡುವುದು)

(ಆ) ಯಾವ ಯಾವ ಉದ್ಯಾನವನದ ವಿಸ್ತೀರ್ಣ ಎಷ್ಟು; ಆ ವಿಸ್ತೀರ್ಣದಲ್ಲಿ ಸಾರ್ವಜನಿಕ ಉಪಯೋಗಕ್ಕೆ ಒದಗಿಸಿರುವ ಮೂಲಭೂತ ಸೌಕರ್ಯಗಳು ಯಾವುವು ; (ಉದ್ಯಾನವನವಾರು ವಿವರ ನೀಡುವುದು)

(ಇ) ಪ್ರತಿ ಉದ್ಯಾನವನವಾರು ನಿರ್ವಹಣೆಗೆ ಇರುವ ಸಿಬ್ಬಂದಿ ಎಷ್ಟು; ಯಾರ್ಯಾರು ; (ಉದ್ಯಾನವನವಾರು ಪೂರ್ಣ ವಿವರ ನೀಡುವುದು)

(ಈ) ಉದ್ಯಾನವನಗಳ ನಿರ್ವಹಣೆಗೆ ೨೦೧೨-೧೩, ೨೦೧೩-೧೪ ಹಾಗೂ ೨೦೧೪-೧೫ರ ಸಾಲಿನಲ್ಲಿ ವೆಚ್ಚ ಮಾಡಿರುವ ಹಣವೆಷ್ಟು? (ಉದ್ಯಾನವನವಾರು ವಿವರ ನೀಡುವುದು)

## ಭದ್ರಾ ಜಲಾಶಯದಿಂದ ಬೀರೂರು, ಕಡೂರಿಗೆ ಕುಡಿಯುವ ನೀರು

**ಶ್ರೀಮತಿ ಗಾಯತ್ರಿ ಶಾಂತೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೮೫ (೨೭೨೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿಯ ಭದ್ರಾ ಜಲಾಶಯದಿಂದ ಬೀರೂರು ಮತ್ತು ಕಡೂರು ಪಟ್ಟಣಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆಯ ಅಂದಾಜು ಮೊತ್ತ ಎಷ್ಟು;

(ಆ) ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ; ಕಾಮಗಾರಿಗೆ ಖರ್ಚಾಗಿರುವ ಮೊತ್ತ ಎಷ್ಟು ;

(ಇ) ಕಾಮಗಾರಿ ಪೂರ್ಣಗೊಳಿಸಿ ಬೀರೂರು ಮತ್ತು ಕಡೂರು ಪಟ್ಟಣದ ನಾಗರಿಕರಿಗೆ ಕುಡಿಯುವ ನೀರು ಪೂರೈಸಲು ಇನ್ನು ಎಷ್ಟು ಕಾಲಾವಕಾಶಬೇಕು ?

## ಮೈಸೂರು ನಗರದಲ್ಲಿ ಜೆ–ನರ್ಮ್ ಕಾಮಗಾರಿಗಳು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೮೬ (೨೫೬೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರಿನಲ್ಲಿ ಜೆ–ನರ್ಮ್ ಯೋಜನೆ ಅಡಿಯಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಕೈಗೊಳ್ಳಲು ಉದ್ದೇಶಿಸಲಾಗಿದೆ; (ಘನತ್ಯಾಜ್ಯ ನಿರ್ವಹಣೆ, ಮಳೆನೀರಿನ ತೆರೆದ ಚರಂಡಿ ನಿರ್ಮಾಣ, ಪಾರಂಪರಿಕ ಕಟ್ಟಡಗಳ ಅಭಿವೃದ್ಧಿ, ಮೊದಲಾದ ಕಾಮಗಾರಿಗಳ ವಿವರ, ನಿಗದಿಪಡಿಸಿರುವ ಅಂದಾಜು ವೆಚ್ಚ, ಇದುವರೆಗೆ ಮಂಜೂರು ಮಾಡಿರುವ ಆಯವ್ಯಯ, ನಡೆದಿರುವ ಕಾಮಗಾರಿಗಳು, ಹೊಸ ಕಾಮಗಾರಿಗಳ ಉದ್ದೇಶಿತ ಆರಂಭದ ದಿನಾಂಕ, ಮುಕ್ತಾಯದ ದಿನಾಂಕ ಈ ವಿವರಗಳನ್ನು ಒದಗಿಸುವುದು)

(ಆ) ಮೈಸೂರಿನ ರಾಜಪಥ ಕಾಮಗಾರಿ ಹಲವು ವರ್ಷದಿಂದ ನಿಧಾನಗತಿಯಲ್ಲಿ ನಡೆಯುತ್ತಿರುವುದು ಗಮನಕ್ಕೆ ಬಂದಿದೆಯೇ; ರಾಜಪಥ ಕಾಮಗಾರಿಯನ್ನು ಬೇಗ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ;

(ಇ) ಮೇಲ್ಕಂಡ ಕಾಮಗಾರಿಗಳಿಗೆ ಕೇಂದ್ರದಿಂದ ಮಂಜೂರಾಗಿರುವ ಹಣ ಮತ್ತು ರಾಜ್ಯ ಸರ್ಕಾರ ಮಂಜೂರು ಮಾಡಿರುವ ಹಣ ಎಷ್ಟು ? (ವಿವರ ಒದಗಿಸುವುದು)

## ರಾಜ್ಯದಲ್ಲಿರುವ ಮಹಿಳಾ ಪೋಲೀಸ್ ಸಿಬ್ಬಂದಿ ಮತ್ತು ಠಾಣೆಗಳು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೮೭ (೨೬೦೩) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಮಹಿಳಾ ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ಸಂಖ್ಯೆ ಎಷ್ಟು; ಹಾಲಿ ಸೇವೆ ಸಲ್ಲಿಸುತ್ತಿರುವ ಮತ್ತು ಖಾಲಿ ಇರುವ ಮಹಿಳಾ ಪೋಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು; ಇವರ ನೇಮಕಾತಿಗೆ ಕೈಗೊಂಡಿರುವ ಕ್ರಮಗಳೇನು ;

(ಆ) ರಾಜ್ಯದಲ್ಲಿರುವ ಮಹಿಳಾ ಪೋಲೀಸ್ ಠಾಣೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಹೊಸದಾಗಿ ಎಲ್ಲೆಲ್ಲಿ ಮಹಿಳಾ ಪೊಲೀಸ್ ಠಾಣೆಗಳನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ ;

(ಈ) ಈ ವರ್ಷ ಎಷ್ಟು ಹೊಸ ಮಹಿಳಾ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಲಾಗುವುದು ?

## ಮೈಸೂರು ಚಾಮರಾಜನಗರ ಜಿಲ್ಲೆಗಳಲ್ಲಿ ರಸ್ತೆ ಅಪಘಾತಗಳು

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೮೮ (೨೬೦೪) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ೨೦೧೪ ರಲ್ಲಿ ಸಂಭವಿಸಿರುವ ರಸ್ತೆ ಅಪಘಾತಗಳ ಸಂಖ್ಯೆ ಎಷ್ಟು; ಈ ಅಪಘಾತಗಳಲ್ಲಿ ಎಷ್ಟು ಮಂದಿ ಮೃತಪಟ್ಟಿದ್ದಾರೆ; ಎಷ್ಟು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ; ಮೈಸೂರು ನಗರ ಮತ್ತು ಚಾಮರಾಜನಗರ, ಹಾಗೂ ಎರಡೂ ಜಿಲ್ಲೆಗಳ ತಾಲ್ಲೂಕುವಾರು ವಿವರ ಒದಗಿಸುವುದು ;

(ಆ) ಹೆಚ್ಚು ಅಪಘಾತ ನಡೆಯುವ ಸ್ಥಳಗಳನ್ನು ಗುರುತಿಸಲಾಗಿದೆಯೇ; ಅಪಘಾತಗಳು ನಡೆಯದಂತೆ ಮುಂಜಾಗರೂಕತಾ ಕ್ರಮಗಳನ್ನು

ತೆಗೆದುಕೊಳ್ಳಲಾಗಿದೆಯೇ; ಹೆದ್ದಾರಿ ಪ್ಯಾಟ್ರಾಲಿಂಗ್ (ಗಸ್ತು) ಜೀವರಕ್ಷಕ ಕೇಂದ್ರ, ಸರಿಯಾದ ರೀತಿಯಲ್ಲಿ ದೊಡ್ಡದಾಗಿ ಕಾಣುವಂತೆ ಸಾರಿಗೆ ನಿಯಮ ಮಾರ್ಗಸೂಚಿ ಫಲಕಗಳನ್ನು ಹಾಕುವುದು, ಅವೈಜ್ಞಾನಿಕ ಹಂಪ್‌ಗಳನ್ನು ತೆಗೆಯಲು ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಅಧೀನ ನ್ಯಾಯಾಲಯಗಳಲ್ಲಿ ಮೂಲಭೂತ ಸೌಲಭ್ಯ ಕೊರತೆ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೩೮೯ (೨೬೦೫) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿರುವ ಅಧೀನ ನ್ಯಾಯಾಲಯಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಈ ಜಿಲ್ಲೆಗಳ ಯಾವ ಯಾವ ಅಧೀನ ನ್ಯಾಯಾಲಯಗಳಲ್ಲಿ ಯಾವ ಯಾವ ಮೂಲಭೂತ ಸೌಲಭ್ಯಗಳ ಕೊರತೆ ಇರುತ್ತದೆ ; ಈ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ೨೦೧೪–೧೫ನೇ ಸಾಲಿನಲ್ಲಿ ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ಒದಗಿಸಿರುವ

ಆಯವ್ಯಯ ಎಷ್ಟು ? (ಪ್ರತಿಯೊಂದು ನ್ಯಾಯಾಲಯಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಒದಗಿಸುವುದು)

## ದಿನಗೂಲಿ ನೌಕರರನ್ನು ಖಾಯಂ

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೨೩೯೦ (೨೫೭೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ವಿವಿಧ ಇಲಾಖೆಯಲ್ಲಿರುವ ದಿನಕೂಲಿ ನೌಕರರನ್ನು ಖಾಯಂಗೊಳಿಸಲಾಗುತ್ತಿದೆಯೇ; ಹಾಗಿದ್ದಲ್ಲಿ, ರಾಜ್ಯದಲ್ಲಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು; ಹಾಗೂ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಈ ನೌಕರರುಗಳನ್ನು ಯಾವ ಮಾನದಂಡ ಅನುಸರಿಸಿ ಖಾಯಂಗೊಳಿಸಲಾಗುತ್ತಿದೆ ; (ಇತ್ತೀಚಿನ ಸರ್ಕಾರಿ ಆದೇಶಗಳ ಪ್ರತಿ ನೀಡುವುದರೊಂದಿಗೆ ವಿವರ ನೀಡುವುದು)

(ಇ) ಈ ಎಲ್ಲಾ ದಿನಗೂಲಿ ನೌಕರರನ್ನು ಖಾಯಂ-ಗೊಳಿಸುತ್ತಿರುವುದರಿಂದ ರಾಜ್ಯ ಸರ್ಕಾರಕ್ಕೆ ಆರ್ಥಿಕವಾಗಿ ಹೆಚ್ಚುವರಿಯಾಗಿ ತಗಲುವ ವೆಚ್ಚವೆಷ್ಟು ? (ವಿವರ ನೀಡುವುದು)

# ಜ್ಞಾನಭಾರತಿ ಬಡಾವಣೆ ನಿರ್ಮಾಣಕ್ಕೆ ಸ್ವಾಧೀನಪಡಿಸಿಕೊಂಡ ಜಮೀನು.

**ಡಾ: ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)**

೨೩೯೧ (೨೬೧೦) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ನಾಗದೇವನಹಳ್ಳಿ ಗ್ರಾಮದಲ್ಲಿ ಜ್ಞಾನಭಾರತಿ ಬಡಾವಣೆ ನಿರ್ಮಾಣಕ್ಕಾಗಿ ಬಿಡಿಎ ವತಿಯಿಂದ ಸ್ವಾಧೀನಪಡಿಸಿಕೊಂಡ ಸರ್ವೆ ನಂಬರ್‌ಗಳ ವಿವರಗಳನ್ನು ನೀಡುವುದು ;

(ಆ) ಸದರಿ ಗ್ರಾಮದಲ್ಲಿ ಅಧಿಸೂಚನೆ ೪ (೧) ಮತ್ತು ೬(೧) ಆಗಿರುವ ಜಮೀನಿನ ವಿಸ್ತೀರ್ಣವಾರು ವಿವರ ನೀಡುವುದು ;

(ಇ) ಈ ಗ್ರಾಮದ ಸರ್ವೆ ನಂಬರ್ ೧೧೯-೧ ಮತ್ತು ೧೧೯/೨ ರಲ್ಲಿ ಬಡಾವಣೆಗೆ ವಶಪಡಿಸಿಕೊಂಡ ಜಮೀನಿನ ವಿವರಗಳನ್ನು ಒದಗಿಸುವುದು ; (ಮಾಲೀಕರ ಹೆಸರು ಮತ್ತು ಭೂಸ್ವಾಧೀನಪಡಿಸಿಕೊಂಡ ವಿಸ್ತೀರ್ಣವಾರು ವಿವರಗಳನ್ನು ಚಕ್ಕುಬಂದಿವಾರು ನೀಡುವುದು)

(ಈ) ಈ ಜಮೀನಿನ ಮಾಲೀಕರುಗಳಿಗೆ ಪರಿಹಾರವನ್ನು ಒದಗಿಸಲಾಗಿದೆಯೋ; ಇದ್ದಲ್ಲಿ ಹೆಸರು ಮತ್ತು

ಭೂಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣವಾರು ವಿವರ ಮತ್ತು ಪಾವತಿಸಿದ ಮೊತ್ತದ ವಿವರ ನೀಡುವುದು ;

(ಉ) ಈ ಜಮೀನಿಗೆ ಸಂಬಂಧಪಟ್ಟಂತೆ ಮಾಲೀಕರು ಬಿಡಿಎ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆಯೇ; ಈ ದಾವೆ ಯಾವ ಹಂತದಲ್ಲಿದೆ ;

(ಊ) ಸದರಿ ಸರ್ವೆ ನಂಬರ್ ಜಮೀನಿನಲ್ಲಿ ಅಭಿವೃದ್ಧಿಯಾಗಿದೆಯೆಂದು ಕೈಬಿಟ್ಟ ಜಮೀನಿನ ವಿವರಗಳನ್ನು ನೀಡುವುದು ?

## ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘ ವಿತರಿಸಿರುವ ನಿವೇಶನಗಳ ಬಗ್ಗೆ.

**ಡಾ: ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು)**

೨೩೯೨ (೨೬೧೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ದಿನಾಂಕ: ೧೯.೦೪.೨೦೦೬ ರ ಸರ್ಕಾರಿ ಆದೇಶದನ್ವಯ ಬಿಡಿಎ ನೌಕರರ ಕ್ಷೇಮಾಭಿವೃದ್ಧಿ ಸಂಘವು ಪಡೆದಿರುವ ಒಟ್ಟು ಜಮೀನು, ರಚಿಸಿರುವ ಒಟ್ಟು ನಿವೇಶನಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಸದರಿ ನಿವೇಶನಗಳನ್ನು ಬಿಡಿಎ ನೌಕರರಿಗೆ ಹಂಚಿರುವುದು ನಿಜವೆ; ಹಾಗಿದ್ದಲ್ಲಿ ಎಷ್ಟು ನೌಕರ ಸದಸ್ಯರುಗಳಿಗೆ ಯಾವ ಅಳತೆಯ

ನಿವೇಶನಗಳನ್ನು ಎಲ್ಲೆಲ್ಲಿ ವಿತರಿಸಲಾಗಿದೆ; (ನೌಕರ ಸದಸ್ಯರ ಹೆಸರು, ಸದಸ್ಯರುಗಳಿಗೆ ಯಾವ ಅಳತೆಯ ನಿವೇಶನಗಳನ್ನು ಎಲ್ಲೆಲ್ಲಿ ವಿತರಿಸಲಾಗಿದೆ ; (ನೌಕರ ಸದಸ್ಯರ ಹೆಸರು ಸದಸ್ಯತ್ವ ಸಂಖ್ಯೆ, ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಗಳನ್ನು ನೀಡುವುದು)

(ಇ) ಬಿಡಿಎ ನೌಕರರಲ್ಲದೇ ಇತರ ಎರವಲು ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದವರು, ಬೇರೆ ಇಲಾಖೆಗಳ ನೌಕರರು ಮತ್ತು ಸಾರ್ವಜನಿಕರಿಗೆ ನಿವೇಶನಗಳನ್ನು ವಿತರಿಸಲಾಗಿದೆಯೇ; ಹಾಗಿದ್ದಲ್ಲಿ ಅವರ ಹೆಸರು, ಸದಸ್ಯತ್ವ ಸಂಖ್ಯೆ ನಿವೇಶನಕ್ಕಾಗಿ ಪಡೆದ ಮೌಲ್ಯ ಮತ್ತು ನಿವೇಶನ ವಿತರಿಸಿದ ದಿನಾಂಕವಾರು ಮಾಹಿತಿಗಳನ್ನು ನೀಡುವುದು ;

(ಈ) ಸದರಿ ಸಂಘದ ಅವ್ಯವಹಾರಗಳ ಕಡತಗಳನ್ನು ಕರ್ನಾಟಕ ಉಚ್ಛ ನ್ಯಾಯಾಲಯವು ಮುಟ್ಟುಗೋಲು (ಸೀಜ್) ಮಾಡಿದ್ದು ನಿಜವೇ; ನಂತರ ಮುಟ್ಟುಗೋಲು ಹಾಕಿಕೊಂಡಿದ್ದ ದಾಖಲಾತಿಗಳನ್ನು ಯಾವ ದಿನಾಂಕದಂದು ಬಿಡುಗಡೆ ಮಾಡಿದೆ ;

(ಉ) ಈ ದಾಖಲಾತಿ ಬಿಡುಗಡೆಯಾದ ನಂತರದ ದಿನಾಂಕದಿಂದ ಇಲ್ಲಿಯುವರೆವಿಗೂ ಸಂಘದ ವತಿಯಿಂದ ನಿವೇಶನ ನೋಂದಣಿಯಾದ ಮಾಹಿತಿಯನ್ನು ಹೆಸರು, ದಿನಾಂಕ ಹಾಗೂ ವಿಸ್ತೀರ್ಣವಾರು ವಿವರ ನೀಡುವುದು ?

## ಮೂಲಸೌಲಭ್ಯಗಳ ಕೊರತೆ

**ಶ್ರೀ ನಾರಾಯಣ ಸಾ. ಬಾಂಡಗೆ (ವಿಧಾನಸಭೆಯಿಂದ ಚುನಾಯಿತರಾದವರು)**

೨೩೯೩ (೨೬೮೯) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ನಗರದಲ್ಲಿರುವ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್ ಎದುರು ದರ್ಶನ್ ಫಾರಂ ಹತ್ತಿರ, ರಾಜರಾಜೇಶ್ವರಿ ನಗರ ಸಭೆ ವ್ಯಾಪ್ತಿಯ ಹೊಸಕೆರೆಹಳ್ಳಿ ಕೆರೆ ಕೋಡಿಯಿಂದ ಕೃಷ್ಣಪ್ಪ ಲೇಔಟ್‌ನ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ ಯಾವ ಕ್ರಮ ಕೈಗೊಳ್ಳಲಾಗಿದೆ. ಈ ಮೂಲಭೂತ ಸೌಲಭ್ಯಗಳ ಕೊರತೆಗೆ ಕಾರಣರಾರು ;

(ಇ) ಈ ಪ್ರದೇಶದ ವ್ಯಾಪ್ತಿಯಲ್ಲಿ ಸುಮಾರು ೧೦೦ ರಿಂದ ೧೫೦ ಮನೆಗಳಿದ್ದು ಸದರಿ ಬಡಾವಣೆಗೆ ಹೆಸರಿನ ನಾಮಫಲಕವು ಸಹ ಇರುವುದಿಲ್ಲ. ಈ ಪ್ರದೇಶಕ್ಕೆ ಯಾವುದೇ ಮೂಲಭೂತ ಸೌಲಭ್ಯಗಳು ಇರುವುದಿಲ್ಲ ಈ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಎಷ್ಟು ಹಣ ಬಜೆಟ್‌ನಲ್ಲಿ ಇಡಲಾಗಿದೆ ? (ಮಾಹಿತಿ ನೀಡುವುದು)

## ವಿದೇಶಿ ನೇರ ಬಂಡವಾಳ ಆಕರ್ಷಣೆ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ)**

೨೩೬೪ (೨೭೨೧) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ವಿದೇಶಿ ನೇರ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ಇದುವರೆವಿಗೂ ಯಾವ, ಯಾವ ದೇಶಗಳಲ್ಲಿ, ಯಾವಾಗ ಹೆಲ್ಪ್ ಡೆಸ್ಕ್‌ಗಳನ್ನು ರಚಿಸಲಾಯಿತು ;

(ಆ) ಈ ಹೆಲ್ಪ್ ಡೆಸ್ಕ್‌ಗಳ ರಚನೆ, ನಿರ್ವಹಣೆಗಳಿಗಾಗಿ ಸರ್ಕಾರ ಇದುವರೆವಿಗೂ ವ್ಯಯಿಸಿದ ಮೊತ್ತವೆಷ್ಟು ; (ಸಂಪೂರ್ಣ ವಿವರ ನೀಡುವುದು) (ಈ ಹೆಲ್ಪ್ ಡೆಸ್ಕ್‌ಗಳ ಸಂಪರ್ಕ ವಿಳಾಸ ಮತ್ತು ಕಛೇರಿ ಮುಖ್ಯಸ್ಥರುಗಳ ವಿವರ ನೀಡುವುದು)

(ಇ) ಈ ಹೆಲ್ಪ್ ಡೆಸ್ಕ್‌ಗಳು ಆರಂಭವಾದಾಗಿನಿಂದ ಇವತ್ತಿನವರೆಗೆ ರಾಜ್ಯಕ್ಕೆ ಹರಿದು ಬಂದ ವಿದೇಶಿ ನೇರ ಬಂಡವಾಳದ ಮೊತ್ತ ಎಷ್ಟು ? (ದೇಶವಾರು ಮತ್ತು ಕ್ಷೇತ್ರವಾರು ಬಂಡವಾಳದ ಸಂಪೂರ್ಣ ವಿವರ ನೀಡುವುದು)

## ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿವೇಶನ

**ಶ್ರೀ ಲಹರ್ ಸಿಂಗ್ ಸಿರೋಯಾ (ನಾಮನಿರ್ದೇಶನ)**

೨೩೯೫ (೨೭೦೨) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ೨೦೦೭ರಿಂದ ಈವರೆವಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಸಾರ್ವಜನಿಕರಿಗೆ ನಿವೇಶನಗಳನ್ನು ಹಂಚುವ ಸಲುವಾಗಿ ಎಷ್ಟು ಬಡಾವಣೆಗಳನ್ನು ನಿರ್ಮಿಸಲು ಯೋಜನೆಯನ್ನು ಹಮ್ಮಿಕೊಳ್ಳಲಾಗಿತ್ತು ;

(ಆ) ಈ ಬಡಾವಣೆಗಳಲ್ಲಿ ನಿವೇಶನಗಳನ್ನು ಖರೀದಿಸಲು ಎಷ್ಟು ಜನರು ಅರ್ಜಿಯನ್ನು ಸಲ್ಲಿಸಿದ್ದರು ;

(ಇ) ಈವರೆವಿಗೆ ಎಷ್ಟು ಜನರಿಗೆ ನಿವೇಶನಗಳನ್ನು ಹಂಚಲಾಗಿರುತ್ತದೆ ;

(ಈ) ಉಳಿದವರಿಗೆ ಎಷ್ಟು ದಿನದಲ್ಲಿ ನಿವೇಶನಗಳನ್ನು ಹಂಚಲಾಗುವುದು; ನಿವೇಶನಕ್ಕಾಗಿ ಕಾದಿರುವವರ ಹೆಸರನ್ನು ಜ್ಯೇಷ್ಠತೆಯ ಆಧಾರದ ಮೇಲೆ ಒದಗಿಸುವುದು ?

## ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿ ಸ್ಥಾಪಿಸಲಾಗಿರುವ ಪ್ರತಿಮೆಗಳು

**ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು)**

೨೩೯೬ (೨೭೧೮) ಮಾನ್ಯ ಮುಖ್ಯಮಂತ್ರಿಯುವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬಿ.ಬಿ.ಎಂ.ಪಿ., ವ್ಯಾಪ್ತಿಯಲ್ಲಿರುವ ನಾಯಕರುಗಳ ಪ್ರತಿಮೆಗಳು ಎಷ್ಟು ಮತ್ತು ಎಲ್ಲೆಲ್ಲಿ ಇವೆ ; ಇವುಗಳನ್ನು ಸ್ಥಾಪಿಸಲು ಖರ್ಚಾದ ಮೊತ್ತವೆಷ್ಟು ; (ಹೆಸರುಗಳೊಂದಿಗೆ ವಿವರ ನೀಡುವುದು)

(ಆ) ಈ ಪ್ರತಿಮೆಗಳಿಗೆ ನಿರ್ವಹಣೆಗಾಗಿ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ಅನುದಾನ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ಕೊಪ್ಪಳ ಜಿಲ್ಲೆಯಲ್ಲಿ ಓವರ್ ಹೆಡ್ ಟ್ಯಾಂಕ್ ಕುಸಿದಿರುವ ಬಗ್ಗೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೩೯೭ (೨೬೦೬) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಯಲ್ಲಿ ಕೆಲ ದಿನಗಳ ಹಿಂದೆ ಟೀಚರ್ಸ್ ಕಾಲೋನಿಯಲ್ಲಿ ಓವರ್ ಹೆಡ್ ಟ್ಯಾಂಕ್ ಕುಸಿದಿರುವ ಪ್ರಕರಣ ಸದ್ಯ ಯಾವ ಹಂತದಲ್ಲಿದೆ ;

(ಆ) ಟ್ಯಾಂಕ್ ಕುಸಿತದಲ್ಲಿ ಮರಣ ಹೊಂದಿದವರ ಸಂಖ್ಯೆ ಎಷ್ಟು; ಇವರಿಗೆ ಸರ್ಕಾರದಿಂದ ಪರಿಹಾರವನ್ನು ನೀಡಲಾಗಿದೆಯೇ ; ನೀಡಿದ್ದಲ್ಲಿ ಎಷ್ಟು ಹಣ ನೀಡಲಾಗಿದೆ ;

(ಇ) ಟ್ಯಾಂಕ್ ನಿರ್ಮಾಣ ಕಾಮಗಾರಿಯ ಗುತ್ತಿಗೆ ಪಡೆದ ಗುತ್ತಿಗೆದಾರರಿಗೆ ಸರ್ಕಾರ ಯಾವ ರೀತಿ ಕ್ರಮವನ್ನು ಜರುಗಿಸಿದೆ; ಇವರನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆಯೇ ;

(ಈ) ಕಾಮಗಾರಿ ಗುಣಮಟ್ಟವನ್ನು ಪರೀಕ್ಷಿಸದ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ; (ವಿವರ ನೀಡುವುದು)

(ಉ) ಟ್ಯಾಂಕ್ ಕಾಮಗಾರಿಗೆ ನಿಗಧಿ ಪಡಿಸಿದ ಮೊತ್ತ ಎಷ್ಟು ; ಟ್ಯಾಂಕ್ ಕುಸಿದಿರುವುದರಿಂದ ಖರ್ಚಾದ ಹಣವನ್ನು ಸರ್ಕಾರ ಗುತ್ತಿಗೆದಾರರಿಂದ ವಸೂಲ ಮಾಡಲು ಕ್ರಮವಹಿಸಿದೆಯೇ ?

## ಕೊಪ್ಪಳ ಜಿಲ್ಲೆಯಲ್ಲಿ ಮಾನ್ಯತೆ ಪಡೆಯದ ಕೋಳಿ ಫಾರಂಗಳ ಬಗ್ಗೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)**

೨೩೯೮ (೨೬೦೭) ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕೊಪ್ಪಳ ಜಿಲ್ಲೆಯಲ್ಲಿ ಒಟ್ಟು ಕೋಳಿ ಫಾರಂಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

(ಆ) ಸದರಿ ಕೋಳಿ ಫಾರಂಗಳು ಪರಿಸರ ಮಾಲಿನ್ಯ ನಿಯಂತ್ರಣ ಇಲಾಖೆಯಿಂದ ಹಾಗೂ ಆರೋಗ್ಯ ಇಲಾಖೆಯಿಂದ ಎನ್.ಓ.ಸಿ. ಪಡೆದಿವೆಯೇ ;

(ಇ) ಹಾಗಿದ್ದಲ್ಲಿ, ಕೋಳಿ ಫಾರಂಗಳಿರುವ ಅಕ್ಕ ಪಕ್ಕದ ಗ್ರಾಮಗಳಲ್ಲಿ ನೊಣಗಳ ಹಾವಳಿ ಹೆಚ್ಚಾಗಿ ಗ್ರಾಮದ ಜನತೆ ತೊಂದರೆ ಅನುಭವಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ಕುರಿತು ಕೈಗೊಂಡ ಕ್ರಮಗಳೇನು ;

(ಉ) ಮಾನ್ಯತೆ ಪಡೆಯದ ಅಥವಾ ನಿಯಮಗಳನ್ನು ಗಾಳಿಗೆ ತೂರಿ ತಲೆಯೆತ್ತಿರುವ ಕೋಳಿ ಫಾರಂಗಳ ಮೇಲೆ ಇದುವರೆಗೂ ಎಷ್ಟು ಪ್ರಕರಣಗಳನ್ನು ಕೊಪ್ಪಳ ಜಿಲ್ಲೆಯ ಜಿಲ್ಲಾಡಳಿತ ಪತ್ತೆ ಮಾಡಿದೆ ? (ವಿವರ ನೀಡುವುದು)

ಎ. ಶ್ರೀಶ್
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು